24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 24 | ಸಂಚಿಕೆ 28 | ನವದೆಹಲಿ | ಬೆಲೆ ₹10 | ಜುಲೈ 24 2026, ಶುಕ್ರವಾರ



## ನಿತ್ಯ ಪಂಚಾಂಗ 24.07.2026 ಶುಕ್ರವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ,
ಉತ್ತರಾಯಣ-ದಕ್ಷಿಣಾಯಣ ಗ್ರೀಷ್ಮ ಋತು,
ಚಾಂದ್ರಮಾನ, ನಿಜ ಜ್ಯೇಷ್ಠ – ಆಷಾಢ ಮಾಸ

ಆಷಾಢ ಶುದ್ಧ, ದಶಮಿ,
ಅನುರಾಧ ವನಕ್ಷತ್ರ, ಆಷಾಢ/ಆಡಿ ಶುಕ್ರವಾರ,
ಉಡುಪಿ ಕೃಷ್ಣಮಠ ಮಹಾಭಿಷೇಕ,
ಅಗಡಿ ರುದ್ರಮುನಿ ಸ್ವಾಮಿ ಪುಣ್ಯತಿಥಿ,
ವಿಠೋಬಾ ನವರಾತ್ರಾರಂಭ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ. 5.04– 6.33 | 12.00– 1.30 | 3.00– 4.00 |
| ಸೋಮ | ಬೆ. 7.20– 9.04 | 10.30–12.00 | 1.30– 12.00 |
| ಮಂಗಳ | ಮ. 3.25– 4.59 | 9.00–10.30 | 12.00– 1.30 |
| ಬುಧ | ಮ.12.16– 1.50 | 7.30– 9.00 | 10.30– 12.00 |
| ಗುರು | ಮ. 1.50– 3.29 | 6.00– 7.30 | 9.00– 10.30 |
| ಶುಕ್ರ | ಬೆ.10.42–12.16 | 3.00– 4.30 | 7.30– 9.00 |
| ಶನಿ | ಬೆ. 9.07–10.41 | 1.30– 3.00 | 6.00– 7.30 |

# ಮೈ ಭಾರತ್ ಪೋರ್ಟಲ್‌ನಲ್ಲಿ ನೋಂದಾಯಿಸಿ ಯುವಜನತೆಗೆ ರಾಜ್ಯಪಾಲ ಗೆಹ್ಲೋತ್ ಕರೆ

**ಬೆಂಗಳೂರು, ಜು.23:** ರಾಜ್ಯದ ಯುವಜನತೆ ಮೈ ಭಾರತ ತೀವ್ರ ನೋಂದಣಿ ಜಾಗೃತಿ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ, www.mybharat.gov.in ನಲ್ಲಿ ನೋಂದಾಯಿಸಿಕೊಳ್ಳುವಂತೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಕರೆ ನೀಡಿದ್ದಾರೆ.

ತಮ್ಮ ಸಂದೇಶದಲ್ಲಿ ರಾಜ್ಯಪಾಲರು, ದೇಶದ ಅತ್ಯಂತ ದೊಡ್ಡ ಶಕ್ತಿಯೇ ಯುವಜನತೆ ಎಂದು ತಿಳಿಸಿದ್ದು, ವಿಕಸಿತ ಭಾರತ ಕನಸನ್ನು ನನಸಾಗಿಸಲು ಯುವಜನರ ಶಕ್ತಿ, ನವೋತ್ಸಾಹ ಹಾಗೂ ಬದ್ಧತೆ ಅತ್ಯಂತ ಅಗತ್ಯವಾಗಿದೆ ಎಂದು ಹೇಳಿದ್ದಾರೆ. ಸ್ವಯಂಸೇವಾ ಕಾರ್ಯ, ನಾಯಕತ್ವ ಅಭಿವೃದ್ಧಿ, ಕೌಶಲ್ಯ ವೃದ್ಧಿ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಗೆ ಮೈ ಭಾರತ ವೇದಿಕೆಯು ಅರ್ಥಪೂರ್ಣ ಅವಕಾಶಗಳನ್ನು ಒದಗಿಸುತ್ತದೆ ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಕರ್ನಾಟಕದ ಯುವಜನತೆ ಈ ನೋಂದಣಿ ಜಾಗೃತಿ ಅಭಿಯಾನಕ್ಕೆ ಉತ್ಸಾಹದಿಂದ ಸ್ಪಂದಿಸಿ, ಮೈ ಭಾರತ ವೇದಿಕೆ ಒದಗಿಸುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳಲಿದ್ದಾರೆ ಎಂಬ ವಿಶ್ವಾಸವನ್ನು ಥಾವರ್‌ಚಂದ್ ಗೆಹ್ಲೋತ್ ವ್ಯಕ್ತಪಡಿಸಿದ್ದಾರೆ. ತೀವ್ರ ನೋಂದಣಿ ಜಾಗೃತಿ ಅಭಿಯಾನ ಯಶಸ್ವಿಯಾಗಲಿ ಎಂದು ಶುಭ ಹಾರೈಸಿದ ಅವರು, ಪ್ರತಿಯೊಬ್ಬ ಅರ್ಹ ಯುವಕ-ಯುವತಿಯೂ ಬಲಿಷ್ಠ, ಆತ್ಮನಿರ್ಭರ ಹಾಗೂ ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣಕ್ಕಾಗಿ ಈ ರಾಷ್ಟ್ರೀಯ ಚಳವಳಿಯ ಭಾಗವಾಗುವಂತೆ ಕರೆ ನೀಡಿದ್ದಾರೆ.

# ಜಂತರ್-ಮಂತರ್ ಯುವ ಸಂಗ್ರಾಮದಿಂದ ಮೋದಿ ಸರ್ಕಾರ ಪತನ ಸನ್ನಿಹಿತ

**ಎಐಸಿಸಿ ಎಸ್.ಸಿ ವಿಭಾಗದ ರಾಷ್ಟ್ರೀಯ ಸಂಯೋಜಕರು ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ. ಆನಂದಕುಮಾರ್**



**ಬೆಂಗಳೂರು, ಜು.22:** ದೇಶದ ಅಂತಃಸತ್ವವನ್ನು ಕಲಕಿರುವ ಜಂತರ್ ಮಂತರ್ ಪ್ರತಿಭಟನೆ ಸ್ವಾತಂತ್ರ್ಯ ಸಂಗ್ರಾಮದ ನಂತರ ಅತಿದೊಡ್ಡ ಯುವ ಸಂಗ್ರಾಮವಾಗಿದ್ದು, ಈ ಹೋರಾಟದ ಮೂಲಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ವಾಧಿಕಾರಿ ಆಡಳಿತ ಕೊನೆಗೊಳ್ಳುವ ಕಾಲ ಸನ್ನಿಹಿತವಾಗಿದೆ ಎಂದು ಎಐಸಿಸಿ ಎಸ್.ಸಿ ವಿಭಾಗದ ರಾಷ್ಟ್ರೀಯ ಸಂಯೋಜಕರು ಹಾಗೂ ಮಹಾರಾಷ್ಟ್ರ ಉಸ್ತುವಾರಿ ಡಾ. ಆನಂದ ಕುಮಾರ್ ಹೇಳಿದ್ದಾರೆ. ಕೇಂದ್ರ ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಕೇಂದ್ರ ಗೃಹ ಸಚಿವ ಅಮಿತ್ ಶಾ, ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಪಡೆಯದಿದ್ದರೆ ಯುವ ಸಂಗ್ರಾಮ ಮತ್ತಷ್ಟು ಪ್ರಕೋಪಕ್ಕೆ ತಲುಪಲಿದೆ. ಹೋರಾಟದ ಕಿಚ್ಚಿಗೆ ಸರ್ವಾಧಿಕಾರಿಗಳೆಲ್ಲಾ ಭಸ್ಮವಾಗಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಡಾ.ಆನಂದಕುಮಾರ್, ಆಗ ವಿದ್ಯಾರ್ಥಿಗಳ ಪಾಲಿಗೆ ವಿದ್ಯಾರ್ಥಿ ನಾಯಕರಾಗಿದ್ದ ಧರ್ಮೇಂದ್ರ ಪ್ರಧಾನ್, ಈಗ ಖಳನಾಯಕರಾಗಿದ್ದಾರೆ. ಪ್ರಧಾನ್ ಶಿಕ್ಷಣ ಸಚಿವರಾಗುತ್ತಿದ್ದಂತೆ ಪಠ್ಯಕ್ರಮ, ಬೋಧನಾ ವಿಧಾನ, ಕುಲಪತಿಗಳ ಆಯ್ಕೆ ಎಲ್ಲವೂ ಕೇಸರಿಮಯವಾಯಿತು. 2024ರಲ್ಲಿ ನೀಟ್ ಪ್ರಶ್ನೆಪರೀಕ್ಷೆ ಸೋರಿಕೆಯಾಗಿ ದೇಶದಾದ್ಯಂತ ಸುದ್ದಿಯಾಯಿತು. 2026ರಲ್ಲಿ ಮತ್ತೊಮ್ಮೆ ನೀಟ್ ಪ್ರಶ್ನೆಪತ್ರಿಕೆ ಸೋರಿಕೆಯಾಗಿ ಹದಿನೇಳು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಳ್ಳುವಂತಾಯಿತು. ದೇಶದ ಶಕ್ತಿ ಎಂದು ಬಣ್ಣಿಸುವ ಯುವಜನತೆಯ ಭವಿಷ್ಯಕ್ಕೇ ಕತ್ತಲು ಆವರಿಸಿತು. ಆದರೆ ಮೋದಿ ಸರ್ಕಾರ ಧರ್ಮೇಂದ್ರ ಪ್ರಧಾನ್ ಅವರನ್ನು ಎಲ್ಲಾ ಹಂತದಲ್ಲೂ ರಕ್ಷಿಸುತ್ತಿದೆ ಎಂದು ಆರೋಪಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಲಾಠಿಯೇಟು ಬೀಳಲು ಕೇಂದ್ರ ಸಚಿವ ಅಮಿತ್ ಶಾ ಅವರೇ ನೇರ ಕಾರಣ. ದೇಶದ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಹಲವು ಭಾರಿ ಸೋತಿರುವ ಅಮಿತ್ ಶಾ ಸಚಿವರಾಗಿ ಮುಂದುವರಿಯುವ ನೈತಿಕತೆ ಕಳೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ನಡೆದ ಹಿಂಸಾಚಾರಕ್ಕೆ ಅಮಿತ್ ಶಾ ನೇರ ಕಾರಣವಾಗಿದ್ದು, ಇದು ಖಂಡನೀಯ. ವಿದ್ಯಾರ್ಥಿಗಳ ಹೋರಾಟಕ್ಕೆ ಎದೆಗೆ ಎದೆಗೊಟ್ಟು ಪ್ರಧಾನಿ ಮನೆ ಮುಂದೆ ಪ್ರತಿಭಟನೆ ನಡೆಸಿದ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ ಯುವ ಸಮೂಹಕ್ಕೆ ಬೆಂಬಲವಾಗಿದ್ದಾರೆ. ಸದನದ ಒಳಗೆ, ಸದನದ ಹೊರಗಡೆ ವಿದ್ಯಾರ್ಥಿ ಹೋರಾಟಕ್ಕೆ ಧೀಃಶಕ್ತಿಯಾಗಿ ಹೊರಹೊಮ್ಮಿದ್ದಾರೆ.

ವಿದ್ಯಾರ್ಥಿಗಳು ಪ್ರತಿಭಟನೆ ಮಾಡುತ್ತಿರುವ ಕಾರಣಗಳೇ ದೇಶದ ಭವಿಷ್ಯವನ್ನು ನಿರ್ಧರಿಸುತ್ತದೆ. ವಿದ್ಯಾರ್ಥಿಗಳ ಮಾತುಗಳನ್ನು ಕಿವಿಗೊಟ್ಟು ಕೇಳಿ, ಗ್ರಹಿಸುವ ತಾಳ್ಮೆ ಸರ್ಕಾರಕ್ಕೆ ಇಲ್ಲವಾಗಿರುವುದು ದುರಂತ. ಪ್ರತಿಭಟನೆಗಳನ್ನು ಶಾಂತಿಯುತವಾಗಿ ಮತ್ತು ನಿಯಮಾನುಸಾರ ನಡೆಸಲು ಅನುಕೂಲಕರ ಪರಿಸ್ಥಿತಿಯನ್ನು ಸೃಷ್ಟಿಸುವುದು ಸರ್ಕಾರದ ಕರ್ತವ್ಯ ಮತ್ತು ಅಧಿಕಾರಿಗಳ ಜವಾಬ್ದಾರಿಯಾಗಿದೆ. ಸಮಸ್ಯೆಗಳಿಗೆ ದೀರ್ಘಕಾಲದ ಪರಿಹಾರ ಒದಗಿಸಬೇಕು. ಹಿಂಸೆಯ ಮೂಲಕ ಬದಲಾವಣೆ ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕು ಎಂದಿದ್ದಾರೆ.

ಈ ಹೋರಾಟದಲ್ಲಿ ವಿದ್ಯಾರ್ಥಿಗಳ ಭದ್ರತೆಗಾಗಿ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಶಾಂತಿಯುತ ಹೋರಾಟಕ್ಕೆ ಸೂಕ್ತ ವೇದಿಕೆ ನಿರ್ಮಿಸಬೇಕು. ಕೇಂದ್ರದ ಯುವ ಶಕ್ತಿ ವಿರೋಧಿ ಧೋರಣೆಗೆ ಜಗತ್ತಿನಾದ್ಯಂತ ಭಾರೀ ವಿರೋಧ ವ್ಯಕ್ತವಾಗುತ್ತಿದ್ದು, ಈ ಹೋರಾಟ ಜ್ವಾಲಾಮುಖಿ ಸ್ವರೂಪ ಪಡೆಯಲಿದೆ. ಹಾಗಾಗಿ ಈಗಲೇ ಎಚ್ಚೆತ್ತುಕೊಂಡು ಧರ್ಮೇಂದ್ರ ಪ್ರಧಾನ್, ಅಮಿತ್ ಶಾ ರಾಜೀನಾಮೆ ಪಡೆಯದಿದ್ದರೆ ಪ್ರಧಾನಿ ನರೇಂದ್ರ ಮೋದಿ ಅವರ ಕುರ್ಚಿಗೆ ಕುತ್ತು ಬರಲಿದೆ ಎಂದು ಆನಂದಕುಮಾರ್ ಎಚ್ಚರಿಕೆ ನೀಡಿದ್ದಾರೆ.

# ಶಾಸಕರ ಮೇಲೆ ಹಲ್ಲೆ: ಕ್ರಮಕ್ಕೆ ಆಗ್ರಹಿಸಿ ಬಿಜೆಪಿ ನಿಯೋಗದಿಂದ ರಾಜ್ಯಪಾಲರಿಗೆ ದೂರು



**ಬೆಂಗಳೂರು, ಜು.23:** ಕೆಪಿಸಿಸಿ ಕಚೇರಿ ಮುಂದೆ ಬುಧವಾರ ಪ್ರತಿಭಟನೆ ನಡೆಸಿದ ಬಿಜೆಪಿ ಶಾಸಕರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಕ್ರಮಕ್ಕೆ ಒತ್ತಾಯಿಸಿ ಬಿಜೆಪಿ ನಿಯೋಗ ರಾಜ್ಯಪಾಲರಿಗೆ ಗುರುವಾರ ದೂರು ನೀಡಿದೆ. ಶಾಸಕರ ಮೇಲಿನ ಹಲ್ಲೆಯ ಸಂಬಂಧ ಜಾಮೀನುರಹಿತ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ ತಕ್ಷಣ ಬಂಧಿಸುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸುವಂತೆ ಕೋರಲಾಗಿದೆ. ಶಾಸಕರ ಪ್ರಾಣಕ್ಕೆ ಭದ್ರತೆ ನೀಡಲು ವಿಫಲರಾದ ಸ್ಥಳದಲ್ಲಿದ್ದ ಹಿರಿಯ ಪೊಲೀಸ್ ಅಧಿಕಾರಿಗಳ ವಿರುದ್ಧ ತನಿಖೆಗೆ ಆದೇಶಿಸಿ, ಅಮಾನತು ಮಾಡಲು ಸೂಚಿಸಬೇಕು. ಪ್ರತಿಪಕ್ಷ ನಾಯಕರ ಭದ್ರತೆ ಹೆಚ್ಚಿಸಲು ಸೂಚನೆ ನೀಡುವಂತೆ ಕೋರಲಾಗಿದೆ. ಕರ್ನಾಟಕದಲ್ಲಿ ಕುಸಿದಿರುವ ಕಾನೂನು– ಸುವ್ಯವಸ್ಥೆ, ಸಂವಿಧಾನಾತ್ಮಕ ಬಿಕ್ಕಟ್ಟಿನ ಬಗ್ಗೆ ಭಾರತದ ಗೌರವಾನ್ವಿತ ರಾಷ್ಟ್ರಪತಿಗಳಿಗೆ ವಿಶೇಷ ವರದಿ ಸಲ್ಲಿಸುವಂತೆ ಮನವಿ ಮಾಡಲಾಗಿದೆ. ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ತೆರಳಿದ ನಿಯೋಗವು ಈ ಮನವಿ ಸಲ್ಲಿಸಿತು.

# ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಪ್ರತಿ ತಾಲೂಕಿಗೆ 1 ಕೋಟಿ, ಪ್ರತಿ ಜಿಲ್ಲೆಗೆ 5 ಕೋಟಿ ರೂ.: ಡಾ.ಪರಮೇಶ್ವರ್



**ಬೆಂಗಳೂರು, ಜು.23:** ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ನಮ್ಮ ಸರ್ಕಾರ ಸಿದ್ಧವಿದೆ. ಈಗಾಗಲೇ 1 ಕೋಟಿಯನ್ನು ಪ್ರತಿಯೊಬ್ಬ ಶಾಸಕರಿಗೂ ನೀಡಲು ತೀರ್ಮಾನಿಸಿದ್ದೇವೆ. ಅಲ್ಲದೇ, ಕುಡಿಯುವ ನೀರಿನ ಸಮರ್ಪಕ ಪೂರೈಕೆಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ಹಣವನ್ನು ನೀಡಿದ್ದೇವೆ. ಈಗಾಗಲೇ ಪಿಡಿ ಖಾತೆಗಳಲ್ಲಿ 329 ಕೋಟಿ ಲಭ್ಯವಿದೆ. ನಮ್ಮಲ್ಲಿ ಹಣದ ಕೊರತೆ ಇಲ್ಲ ಎಂದು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರು ಮತ್ತು ಬೆಂಗಳೂರು ವಿಭಾಗದ ಪ್ರಗತಿ ಪರಿಶೀಲನೆ ಬಾಕಿ ಇದೆ. ಬೆಂಗಳೂರು ವಿಭಾಗದಲ್ಲಿ ಜುಲೈ 25ರಂದು ನಾನು ಮತ್ತು ಮುಖ್ಯಮಂತ್ರಿಗಳು ಸಭೆ ನಡೆಸುತ್ತೇವೆ. ಅದಾಗಿ ಮೈಸೂರಿನಲ್ಲಿ ಮಾಡುತ್ತೇವೆ. ಆಗ ನಮಗೆ ರಾಜ್ಯ ಪರಿಸ್ಥಿತಿಯ ಬಗ್ಗೆ ಸಂಪೂರ್ಣ ಚಿತ್ರಣ ಸಿಗುತ್ತದೆ. ಆ ಬಳಿಕ ಚರ್ಚಿಸಿ, ರೈತರಿಗೆ, ಸಾಮಾನ್ಯ ಜನರಿಗೆ ಸಮಸ್ಯೆಯಾಗದಂತೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಬಹುದು ಎಂಬುದರ ಬಗ್ಗೆ ತೀರ್ಮಾನಿಸುತ್ತೇವೆ ಎಂದರು.

ಜನರು ಉದ್ಯೋಗಕ್ಕಾಗಿ ಗುಳೆ ಹೋಗುವುದನ್ನು ತಪ್ಪಿಸಲು ಎಲ್ಲ ಜಿಲ್ಲಾ ಪಂಚಾಯತ್ ಸಿಇಓಗಳು ವಿಬಿ –ಜಿ ರಾಮ್ ಜಿ ಯೋಜನೆಯಡಿ ಕೂಡಲೇ ಜನರಿಗೆ ಉದ್ಯೋಗ ನೀಡುವಂತೆ ಸೂಚಿಸಿದ್ದೇನೆ. ನಮ್ಮಲ್ಲಿ ಹಣದ ಕೊರತೆ ಇಲ್ಲ. ಶೀಘ್ರವೇ ಕಾಮಗಾರಿಗಳನ್ನು ಆರಂಭಿಸುವಂತೆ ತಿಳಿಸಿರುವುದಾಗಿ ಮಾಹಿತಿ ನೀಡಿದರು.

ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆದಿದ್ದೇವೆ. ಆದರೆ, ಈವರೆಗೆ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆಗಸ್ಟ್ ತಿಂಗಳಲ್ಲಿ ಅವರು ಮನವಿಯನ್ನು ನಿರೀಕ್ಷಿಸುತ್ತಾರೆ. ಅವಾಗ ನಾವು ಮನವಿ ಸಲ್ಲಿಸಿದರೆ ಹಣವನ್ನು ಬಿಡುಗಡೆ ಮಾಡುತ್ತಾರೆ ಎಂದರು.

ನೀವು ಭೇಟಿ ಕೊಟ್ಟ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳು ಪ್ರಾರಂಭವಾಗಿದೆಯೇ ಎಂಬ ಮಾಧ್ಯಮದ ಪ್ರಶ್ನೆಗೆ ಉತ್ತರಿಸಿದ ಡಿಸಿಎಂ, ಮುಂಗಾರಿನಲ್ಲಿ ಸ್ವಲ್ಪ ಮಳೆಯಾದ್ದರಿಂದ ರೈತರು ಬೀಜ ಬಿತ್ತನೆ ಮಾಡಿದ್ದಾರೆ. ಆಮೇಲೆ ಮಳೆಯಾಗಿಲ್ಲ. ಈಗ ಬಿತ್ತನೆ ಮಾಡಿದ್ದೆಲ್ಲ ಒಣಗಿ ಹೋಗಿದೆ. ಈಗ ಮತ್ತೆ ಆಗಸ್ಟ್ ತಿಂಗಳಲ್ಲಿ ಮಳೆಯಾದರೆ ಬೀಜ ಬಿತ್ತನೆ ಮಾಡುತ್ತಾರೆ. ಅದೊಂದು ನಿರೀಕ್ಷೆಯಿದೆ ಎಂದು ತಿಳಿಸಿದ್ದಾರೆ.

### ತನಿಖೆ ಮಾಡಿಸುವುದಾಗಿ ಪ್ರಧಾನಿಯಿಂದ ತಡವಾಗಿ ಹೇಳಿಕೆ

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿಚಾರದಲ್ಲಿ ದೆಹಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆ ಕುರಿತ ಮಾಧ್ಯಮದ ಪ್ರಶ್ನೆಗೆ ಉತ್ತರಿಸಿದ ಅವರು, ಈ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ಮಾಡಲು ಅವಕಾಶ ಕೇಳಿದ್ದಾರೆ. ಮೋದಿಯವರು ತನಿಖೆ ಮಾಡಿಸುತ್ತೇವೆ ಎಂದು ಬಹಳ ತಡವಾಗಿ ಪ್ರತಿಕ್ರಿಯಿಸಿದ್ದಾರೆ. ವಿದ್ಯಾರ್ಥಿಗಳ ಪರವಾಗಿ ಇದ್ದೀನಿ ಎಂದು ಮೋದಿಯವರು ಹೇಳಿದ್ದಾರೆ. ಹಾಗಿದ್ದ ಮೇಲೆ ಧರ್ಮೇಂದ್ರ ಪ್ರಧಾನ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿ. ಜವಾಬ್ದಾರಿ ಹೊತ್ತವರ ಮೇಲೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮೇಲೆ ದುರ್ವತನೆ ತೋರಿದ್ದಾರೆ. ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಎಲ್ಲಿಗೆ ತಲುಪುತ್ತಿದೆ ಶಾಂತಿಯುತ ಪ್ರತಿಭಟನೆ ನಡೆಸಲು ಸಂವಿಧಾನದಲ್ಲೇ ಅವಕಾಶ ಇರುವಾಗ ಆಡಳಿತದಲ್ಲಿರುವವರು ಅವಕಾಶ ಕೊಡುವುದಿಲ್ಲ ಎಂದರೆ ಏನರ್ಥ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಮತ್ತು ಬಿಜೆಪಿ ಪ್ರತಿಭಟನಾ ರ‍್ಯಾಲಿಯ ಬಗ್ಗೆ ಮಾಧ್ಯಮದ ಪ್ರಶ್ನೆಗೆ ಉತ್ತರಿಸಿ, ಆಕ್ಷನ್ ಇದ್ದಾಗ ರಿಯಾಕ್ಷನ್ ಇದ್ದೇ ಆಗುತ್ತೆ. ಅದಕ್ಕೆ ನಮ್ಮವರು ಪ್ರತಿಭಟನೆ ಮಾಡ್ತಾರೆ ಅಂತ ಅವರು ಮಾಡ್ತಿದ್ದಾರೆ. ರಾಜಭವನಕ್ಕೆ ದೂರು ನೀಡಲಿ. ನಮ್ಮದೇನೂ ತಕರಾರಿಲ್ಲ ಎಂದರು.

# ಬಾಹ್ಯಾಕಾಶ ಕ್ಷೇತ್ರದಲ್ಲಿ ಬಳಸುವ ಪೇಲೋಡ್ ಗಮನದಲ್ಲಿಟ್ಟುಕೊಂಡು ಸಮಗ್ರ ಕ್ಲಸ್ಟರ್‌ಗಳ ಅಭಿವೃದ್ಧಿಗೆ ಒತ್ತು

**ವ್ಯೂಹಾತ್ಮಕ ವಿದ್ಯುನ್ಮಾನ ಸಮಾವೇಶದಲ್ಲಿ ಸಚಿವ ಎಂ.ಬಿ.ಪಾಟೀಲ್ ಹೇಳಿಕೆ**




**ಬೆಂಗಳೂರು, ಜು.23:** ರಾಜ್ಯದಲ್ಲಿ ಸದ್ಯದಲ್ಲೇ ಜಾರಿಗೆ ಬರಲಿರುವ 2026–2031ರ ನೂತನ ವೈಮಾಂತರಿಕ್ಷ ಮತ್ತು ರಕ್ಷಣಾ ನೀತಿಯಲ್ಲಿ ಆಧುನಿಕ ಎಲೆಕ್ಟ್ರಾನಿಕ್ ಸಮರ ಸಾಧನಗಳು, ಎಂಬೆಡೆಡ್ ತಂತ್ರಾಂಶ, ಇ-ವಿಟಾಲ್ ಸಾಧನಗಳು, ಬಾಹ್ಯಾಕಾಶ ಕ್ಷೇತ್ರದಲ್ಲಿ ಬಳಸಲಾಗುವ ಪೇಲೋಡ್ ಇವುಗಳನ್ನು ಗಮನದಲ್ಲಿ ಇಟ್ಟುಕೊಂಡು ಸಮಗ್ರ ಕ್ಲಸ್ಟರ್‌ಗಳನ್ನು ಅಭಿವೃದ್ಧಿ ಪಡಿಸಲು ಒತ್ತು ಕೊಡಲಾಗಿದೆ. ಜತೆಗೆ ಈ ವರ್ಷದ ಡಿಸೆಂಬರ್ ವೇಳೆಗೆ ಕ್ವಿನ್ ಸಿಟಿ ಹಂತ–1ರಲ್ಲಿ 200 ಎಕರೆ ವಿಸ್ತಾರದ ಸೆಮಿಕಂಡಕ್ಟರ್ ಪಾರ್ಕ್ ಕಾರ್ಯಾರಂಭ ಮಾಡಲಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಹೇಳಿದ್ದಾರೆ.

ನಗರದ ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಆರಂಭವಾದ 15ನೇ ವರ್ಷದ ವ್ಯೂಹಾತ್ಮಕ ವಿದ್ಯುನ್ಮಾನ ಸಮಾವೇಶ (ಸ್ಟ್ರಾಟೆಜಿಕ್ ಎಲೆಕ್ಟ್ರಾನಿಕ್ಸ್ ಸಮ್ಮಿಟ್–2026)ದಲ್ಲಿ ಮಾತನಾಡಿದರು.

ರಾಜ್ಯವು ಎರಡು ವರ್ಷಗಳ ಹಿಂದೆಯೇ ಸೆಮಿಕಂಡಕ್ಟರ್ ಮತ್ತು ಆಧುನಿಕ ಇ.ಎಸ್.ಡಿ.ಎಂ. ವಲಯಗಳಲ್ಲಿ 23 ಸಾವಿರ ಕೋಟಿ ರೂ. ಹೂಡಿಕೆಗೆ ಅನುಮೋದನೆ ನೀಡಿದೆ. ಇದರಿಂದ ಹೆಚ್ಚಿನ ಕೌಶಲ್ಯ ಬೇಡುವ 3,500ಕ್ಕೂ ಹೆಚ್ಚು ಎಂಜಿನಿಯರಿಂಗ್ ಹುದ್ದೆಗಳು ಸೃಷ್ಟಿಯಾಗಲಿವೆ. ಇಲ್ಲಿ ಅಪ್ಲೈಡ್ ಮೆಟೀರಿಯಲ್ಸ್ ಇಂಡಿಯಾ ಸಂಸ್ಥೆಯು 4,851 ಕೋಟಿ ರೂ, ಲ್ಯಾಮ್ ರೀಸರ್ಚ್ ಸಂಸ್ಥೆಯು 15,901 ಕೋಟಿ ರೂ, ಮತ್ತು ಭಾರತ್ ಸೆಮಿ ಸಿಸ್ಟಮ್ಸ್ ಕಂಪನಿಯು 2,342 ಕೋಟಿ ರೂ. ಬಂಡವಾಳ ಹೂಡುತ್ತಿವೆ. ಇದಕ್ಕೆ ಪೂರಕವಾಗಿ ಕರ್ನಾಟಕದಲ್ಲಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಜಾಗತಿಕ ಪೂರೈಕೆ ಸರಪಳಿಯೊಂದಿಗೆ ಬೆಸೆಯಲಾಗುವುದು.

ರಾಜ್ಯದಲ್ಲಿ ಕೇವಲ ತಯಾರಿಕೆ ಆದರೆ ಮಾತ್ರ ಸಾಲದು. ಕಂಪನಿಗಳು ಇಲ್ಲೇ ವಿನ್ಯಾಸ, ಅಭಿವೃದ್ಧಿ, ಮೂಲ ಮಾದರಿಗಳು (ಪ್ರೋಟೋಟೈಪ್), ಪರೀಕ್ಷೆ, ಪ್ರಮಾಣೀಕರಣ, ರಫ್ತು ವ್ಯವಹಾರ ಎಲ್ಲವೂ ನಡೆಯುವಂತಾಗಬೇಕು. ರಾಜ್ಯ ಸರಕಾರವು ಈ ವಿಚಾರದಲ್ಲಿ ಉದ್ಯಮಿಗಳ ಜತೆ ಕೈಗೂಡಿಸಲು ಸಿದ್ಧವಿದೆ. ಆದ್ದರಿಂದ ಸೆಮಿಕಂಡಕ್ಟರ್ ಮಿಷನ್ 2.0 ಯನ್ನು ಕರ್ನಾಟಕದ ಮೂಲಕ ನನಸು ಮಾಡಬೇಕು ಎಂದು ಅವರು ಕರೆ ಕೊಟ್ಟಿದ್ದಾರೆ.

ರಾಜ್ಯವು ಸಂಶೋಧನೆ, ಡೀಪ್–ಟೆಕ್ ವಿನ್ಯಾಸ ಮತ್ತು ಎಕ್ವಿಪ್ಮೆಂಟ್ ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಅಗ್ರಸ್ಥಾನದಲ್ಲಿದೆ. ಇನ್ನೊಂದೆಡೆಯಲ್ಲಿ ಜಿಸಿಸಿ ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳಲ್ಲೂ ನಾವು ಮುಂಚೂಣಿಯಲ್ಲಿದ್ದೇವೆ. ಇದರಾಚೆಗೆ, ಬೆಂಗಳೂರಿನಲ್ಲಿ 100ಕ್ಕೂ ಹೆಚ್ಚು ಚಿಪ್ ವಿನ್ಯಾಸ ಸಂಸ್ಥೆಗಳು ಮತ್ತು 3 ನ್ಯಾನೋಮೀಟರ್ ವಿನ್ಯಾಸ ಕೇಂದ್ರಗಳು ಸಕ್ರಿಯವಾಗಿವೆ. ಉದ್ಯಮಿಗಳು ಇವೆಲ್ಲವನ್ನೂ ಸಕಾರಾತ್ಮಕವಾಗಿ ಪರಿಗಣಿಸಿ, ಹೂಡಿಕೆಗೆ ಮುಂದಾಗಬೇಕು ಎಂದು ಪಾಟೀಲ ವಿವರಿಸಿದ್ದಾರೆ.

ಇದೇ ಸಂದರ್ಭದಲ್ಲಿ ಸಚಿವ ಪಾಟೀಲ್ ಅವರು ಎಲ್ಸೀನಾ ವರದಿ–26 ವರದಿಯನ್ನು ಬಿಡುಗಡೆ ಮಾಡಿದರು. ಕರ್ನಲ್ ಲಾಕ್ಯಾಜೀತ್ ಸಿಂಗ್ ಚವ್ಹಾಣ್ ಅವರು ಭವಿಷ್ಯದ ಡ್ರೋನ್ ಮತ್ತು ತಂತ್ರಜ್ಞಾನ ಕುರಿತು ಬರೆದಿರುವ 'ವಿಂಗ್ಸ್ ಆಫ್ ಅಸ್ತ್ರ' ಪುಸ್ತಕವನ್ನೂ ಸಚಿವರು ಬಿಡುಗಡೆ ಮಾಡಿದರು. ಟೆಲಿಮ್ಯಾಟಿಕ್ಸ್ ಅಭಿವೃದ್ಧಿ ಕೇಂದ್ರದ (ಸಿ–ಡಾಟ್) ಸಿಇಒ ಡಾ.ರಾಜಕುಮಾರ್ ಉಪಾಧ್ಯಾಯ, ಬಿಇಎಲ್ ಸಿಇಓ ಮನೋಜ್ ಜೈನ್, ಕೇಂದ್ರ ಸರಕಾರದ ಜಂಟಿ ಕಾರ್ಯದರ್ಶಿ ಸುಶೀಲ್ ಪಾಲ್, ಡಿ.ಆರ್.ಡಿ.ಓ ಮಹಾನಿರ್ದೇಶಕ ಡಾ.ಬಿ.ಕೆ.ದಾಸ್, ಲೆ.ಜ.ರಾಜೀವ್ ಸಾಹ್ನಿ ಅವರು ಪ್ರಸಕ್ತ ವಿದ್ಯಮಾನಗಳ ಬಗ್ಗೆ ಮಾತನಾಡಿದರು. ಎಲ್ಸಿನಾ ಸಂಘಟನೆಯ ಅಧ್ಯಕ್ಷ ಡಾ.ಶಶಿಕುಮಾರ್ ಜೆನ್ನಾಮ್ ಉಪಸ್ಥಿತರಿದ್ದರು.

# ಮಹಾತ್ಮ ಗಾಂಧಿ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ವಿವಿಗೆ ಕಾಯಕಲ್ಪ

**ಕೌಶಲ ತರಬೇತಿ ನೀಡಿ ಉದ್ಯೋಗಾರ್ಹತೆ ಹೆಚ್ಚಿಸಲು ಕ್ರಮ: ಸಚಿವ ಈಶ್ವರ ಖಂಡ್ರೆ ಸೂಚನೆ**



**ಬೆಂಗಳೂರು, ಜು.23:** ರಾಜ್ಯದ 5927 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವೃತ್ತಿನಿರತ ಯುವಕರನ್ನು ಗುರುತಿಸಿ ಅವರಿಗೆ 3ರಿಂದ 6 ತಿಂಗಳ ಕೌಶಲ್ಯ ತರಬೇತಿ ನೀಡಿ, ಉದ್ಯೋಗಾರ್ಹತೆ ಹೆಚ್ಚಿಸಲು ಕ್ರಮ ವಹಿಸುವಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹಾಗೂ ಗದಗ ಪಂಚಾಯತ್ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಈಶ್ವರ ಖಂಡ್ರೆ ಸೂಚಿಸಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ವಿದೇಶದಲ್ಲೂ ನಮ್ಮ ಗ್ರಾಮೀಣ ಯುವಜನರಿಗೆ ಉದ್ಯೋಗ ಸಿಗುವಂತೆ ಮಾಡಲು ಮತ್ತು ವಿದೇಶದಿಂದ ರಾಜ್ಯಕ್ಕೆ ಬರುವ ಪ್ರವಾಸಿಗರಿಗೆ ಪ್ರವಾಸಿತಾಣಗಳಲ್ಲಿ ಗೈಡ್ ಆಗಿ ಸೇವೆ ಸಲ್ಲಿಸಲು ಅನುವಾಗುವಂತೆ ಸ್ಪೋಕನ್ ಇಂಗ್ಲಿಷ್, ಜರ್ಮನ್, ಸ್ಪ್ಯಾನಿಷ್, ರಷ್ಯನ್ ಇತ್ಯಾದಿ ವಿದೇಶೀ ಭಾಷಾ ಸರ್ಟಿಫಿಕೇಟ್ ಕೋರ್ಸ್ ಆರಂಭಿಸುವ ಸಾಧ್ಯತೆ ಬಗ್ಗೆ ಪರಿಶೀಲಿಸಲು ತಿಳಿಸಿದರು.

ವಿಶ್ವವಿದ್ಯಾಲಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುವಂತೆ ಮಾಡಲು ಇಂದಿನ ಯುಗಮಾನದ ಅಗತ್ಯಗಳಿಗೆ ಅನುಗುಣವಾಗಿ ಕೃತಕ ಬುದ್ಧಿಮತ್ತೆ ಸೇರಿದಂತೆ ಹೊಸ ಹೊಸ ಕೋರ್ಸ್ ಆರಂಭಿಸಲು ತಜ್ಞರ ಸಮಿತಿ ರಚಿಸಿ ವರದಿ ಪಡೆಯುವಂತೆ ನಿರ್ದೇಶನ ನೀಡಿದರು.

ಯಾವುದೇ ವಿಶ್ವವಿದ್ಯಾನಿಲಯ ಗುಣಮಟ್ಟದ ಶಿಕ್ಷಣದ ಮೂಲಕ ವಿದ್ಯಾರ್ಥಿಗಳ ವಿಶ್ವಾಸಾರ್ಹತೆ ಗಳಿಸಬೇಕು. ಸ್ಥಾಪನೆಯಾದ 6 –8 ವರ್ಷದಲ್ಲಿ ಆರ್ಥಿಕ ಸ್ವಾವಲಂಬನೆ ಸಾಧಿಸಬೇಕು ಎಂದು ಅಭಿಪ್ರಾಯಪಟ್ಟ ಈಶ್ವರ ಖಂಡ್ರೆ, ವಿಶ್ವವಿದ್ಯಾಲಯದಲ್ಲಿ ಬೋಧಕರ ಕೊರತೆ ಆಗದಂತೆ ಕ್ರಮ ವಹಿಸಲೂ ಸೂಚಿಸಿದರು. ಆವರಣ ಗೋಡೆ ನಿರ್ಮಿಸಲು ಸೂಚನೆ:

ಗದಗದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸುಮಾರು 353 ಎಕರೆ ಪ್ರದೇಶಕ್ಕೂ ಆವರಣ ಗೋಡೆ ನಿರ್ಮಿಸಿ ಒತ್ತುವರಿ ಆಗದಂತೆ ಕ್ರಮ ವಹಿಸಲು ಮತ್ತು ವಿವಿ ಆವರಣದಲ್ಲಿ ವಿವಿಧ ಪ್ರಭೇದದ ಗಿಡ ಮರ ಬೆಳೆಸಿ ಹಸಿರು ಹೊದಿಕೆ ಹೆಚ್ಚಿಸಲು, ಸ್ಥಳೀಯ ಪವನ ವಿದ್ಯುತ್ ಕಂಪನಿಗಳ ಸಿಎಸ್‌ಆರ್ ನಿಧಿಯ ನೆರವು ಪಡೆಯಲು ಈಶ್ವರ ಖಂಡ್ರೆ ಸೂಚಿಸಿದರು. ಸಭೆಯಲ್ಲಿ ಇಲಾಖೆಯ ಕಾರ್ಯದರ್ಶಿ ಡಿ.ರಂದೀಪ್, ಕುಲಪತಿ ಪ್ರೊ. ಡಾ.ಸುರೇಶ್ ವಿ ನಾಡಗೌಡರ್ ಮತ್ತಿತರರು ಭಾಗಿಯಾಗಿದ್ದರು.

### ವಿಬಿ ಜಿ ರಾಮ್ ಜಿ, ಜೆಜೆಎಂ ಅಧ್ಯಯನ ಶಿಕ್ಷಣದ ಭಾಗವಾಗಬೇಕು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಗ್ರಾಮೀಣ ಪರಿಸರದ ಪರಿಚಯ ಕಡ್ಡಾಯವಾಗಿ ಆಗಬೇಕು. ಈ ನಿಟ್ಟಿನಲ್ಲಿ ಜುಲೈ 1ರಿಂದ ಜಾರಿಗೆ ಬಂದಿರುವ ಹೊಸ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ವಿ ಬಿಜಿ ರಾಮ್ ಜಿ, ಜಲಜೀವನ ಮಿಷನ್, ಹರ್ ಘರ್ ಜಲ್, ಗ್ರಾಮೀಣ ಜೀವನೋಪಾಯ ಅಭಿಯಾನ, ಗ್ರಾಮೀಣ ರಸ್ತೆ, ಸಾಮಾಜಿಕ ಅರಣ್ಯ ಸೇರಿದಂತೆ ಇಲಾಖೆಯ ವಿವಿಧ ಕೇಂದ್ರ ಹಾಗೂ ರಾಜ್ಯ ಪ್ರಾಯೋಜಿತ ಯೋಜನೆಗಳ ಬಗ್ಗೆ ಅಧ್ಯಯನ ಮಾಡಲು ವಿದ್ಯಾರ್ಥಿಗಳಿಗೆ ಪ್ರಾಜೆಕ್ಟ್ ವರ್ಕ್ ನೀಡಬೇಕು ಎಂದು ಈಶ್ವರ ಖಂಡ್ರೆ ಸೂಚಿಸಿದರು.

ಗ್ರಾಮೀಣಾಭಿವೃದ್ಧಿಗೆ ಮತ್ತು ಗ್ರಾಮೀಣ ಜನರ ಸುಗಮ ಜೀವನಕ್ಕೆ ಮತ್ತು ಜೀವನಮಟ್ಟ ಸುಧಾರಣೆಗೆ ಅನುವಾಗುವಂತೆ ಹೊಸ ಹೊಸ ಪರಿಕಲ್ಪನೆಗಳನ್ನು ನೀಡಲು ಗದಗ ವಿವಿಯ ವಿದ್ಯಾರ್ಥಿಗಳಿಗೆ ಹ್ಯಾಕಥಾನ್ ರೀತಿಯಲ್ಲಿ ಸ್ಪರ್ಧೆಗಳನ್ನು ನಡೆಸುವಂತೆಯೂ ಸೂಚಿಸಿದರು.

# ತಪ್ಪಿತಸ್ಥರು ಯಾರೇ ಆದರೂ ರಕ್ಷಿಸುವ ಕೆಲಸ ಮಾಡಲ್ಲ

**ಬಿಜೆಪಿ ಶಾಸಕನ ಮೇಲೆ ಮೊಟ್ಟೆ ಎಸೆತ ಪ್ರಕರಣಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯೆ**



**ಬೆಂಗಳೂರು, ಜು.23:** ಬಿಜೆಪಿ ಶಾಸಕ ಬಿ.ಪಿ.ಹರೀಶ್ ಮೇಲೆ ಮೊಟ್ಟೆ ಎಸೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪ್ರತಿಕ್ರಿಯಿಸಿದ್ದು, ತಪ್ಪಿತಸ್ಥರು ಯಾರೇ ಆಗಿರಲಿ, ಯಾವುದೇ ಪಕ್ಷದವರಾಗಿರಲಿ ಅವರನ್ನು ರಕ್ಷಿಸುವ ಮತ್ತು ಬೆಂಬಲಿಸುವ ಕೆಲಸ ಕಾಂಗ್ರೆಸ್ ಮಾಡಿಲ್ಲ ಎಂದಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಪ್ರಿಯಾಂಕ್ ಖರ್ಗೆ, ಬಿಜೆಪಿ ನಾಯಕರ ಮೇಲೆ ಮೊಟ್ಟೆ ಎಸೆದ ಪ್ರಕರಣ ಒಪ್ಪುವುದಿಲ್ಲ. ಆ ವ್ಯಕ್ತಿಯನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಆದರೆ ಚರ್ಚಿಸಬೇಕಾದ ಮುಖ್ಯ ವಿಷಯ ಬೇರೆಯೇ ಇದೆ. ವಿದ್ಯಾರ್ಥಿಗಳ ಭವಿಷ್ಯದ ಹಿತರಕ್ಷಣೆ ಕುರಿತು ಕಾಂಗ್ರೆಸ್ ಪ್ರತಿಭಟನೆ ಮಾಡುತ್ತಿದೆ. ಆದ್ರೆ, ಕಾಂಗ್ರೆಸ್ ವಿರುದ್ಧ ಪ್ರತಿಭಟನೆ ಹಾಸ್ಯಾಸ್ಪದ ಮಾತ್ರವಲ್ಲ, ಬಾಲಿಶತನದ್ದು ಎಂದು ತಿರುಗೇಟು ನೀಡಿದರು. ಬಿಜೆಪಿ ನಾಯಕರು ಪ್ರಧಾನಿ ಮೋದಿ ಮೆಚ್ಚಿಸಲು ಪ್ರತಿಭಟನೆ ಮಾಡುತ್ತಿದ್ದಾರೆ. ಕೇಂದ್ರದ ಅಸಮರ್ಥ ಶಿಕ್ಷಣ ಸಚಿವರ ರಾಜೀನಾಮೆಗಾಗಿ ಪ್ರತಿಭಟಿಸಿ. ನೀಟ್ ಅವ್ಯವಸ್ಥೆಯನ್ನು ಸರಿಪಡಿಸಲು ಬಿಜೆಪಿ ಪ್ರತಿಭಟನೆ ಮಾಡಲಿ. ಉದ್ಯೋಗ ಭದ್ರತೆ, ಉತ್ತಮ ಶಿಕ್ಷಣ ವ್ಯವಸ್ಥೆಗಾಗಿ ಪ್ರತಿಭಟಿಸಿ. ಹೀಗೆ ಮಾಡಿದಲ್ಲಿ ಜನರ ವಿಶ್ವಾಸವನ್ನು ಸ್ವಲ್ಪವಾದರೂ ಗಳಿಸಬಹುದು ಎಂದು ಗುಡುಗಿದ್ದಾರೆ.

# ಕರ್ನಾಟಕದಲ್ಲೂ ಪಿಎಂ ರಾಹತ್ ಯೋಜನೆ ಜಾರಿ: ಆರೋಗ್ಯ ಸಚಿವ ಯು.ಟಿ. ಖಾದರ್

**ಮಂಗಳೂರು, ಜು.23:** ರಸ್ತೆ ಅಪಘಾತಗಳಾದಾಗ ಗಾಯಾಳಿಗೆ ತುರ್ತು ಚಿಕಿತ್ಸೆಯನ್ನು ಒದಗಿಸುವ ನಿಟ್ಟಿನಲ್ಲಿ ದೇಶದೆಲ್ಲೆಡೆ ಜಾರಿಗೊಳಿಸಲಾಗಿರುವ 'ಪಿಎಂ ರಾಹತ್' ಯೋಜನೆಯನ್ನು ರಾಜ್ಯದಲ್ಲಿ ವ್ಯವಸ್ಥಿತವಾಗಿ ಜಾರಿಗೊಳಿಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ. ಖಾದರ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ 2014–15ನೇ ಸಾಲಿನಲ್ಲಿ ಮುಖ್ಯಮಂತ್ರಿಗಳು ಹರೀಶ್ ಸಾಂತ್ವನ ಯೋಜನೆಯನ್ನು ಜಾರಿಗೊಳಿಸಿದ್ದರು. ಅದನ್ನು ಪರಿಗಣಿಸಿ ಕೇಂದ್ರ ಸರ್ಕಾರ ಹೊಸದಾಗಿ ಪಿಎಂ ರಾಹತ್ ಯೋಜನೆ ದೇಶದೆಲ್ಲೆಡೆ ಜಾರಿಗೆ ತಂದಿದೆ. ಆದರೆ ತಾಂತ್ರಿಕ ಕಾರಣದಿಂದ ಇನ್ನೂ ಈ ಯೋಜನೆ ರಾಜ್ಯದಲ್ಲಿ ಸಮರ್ಪಕವಾಗಿ ಜಾರಿಗೊಂಡಿಲ್ಲ. ಈ ಯೋಜನೆ ಅತ್ಯಂತ ಉಪಯುಕ್ತವಾಗಿರುವ ಕಾರಣ ಪಿಎಂ ರಾಹತ್ ಯೋಜನೆಯಡಿ ತುರ್ತು ಚಿಕಿತ್ಸೆಗಾಗಿ ನೀಡಲಾಗುವ 1.50 ಲಕ್ಷ ರೂ. ಅದರ ಜೊತೆ ರಾಜ್ಯ ಸರ್ಕಾರದಿಂದ 1 ಲಕ್ಷ ರೂ. ಹೀಗೆ ಒಟ್ಟು 2.5 ಲಕ್ಷ ರೂ.ಗಳವರೆಗೆ ಚಿಕಿತ್ಸಾ ವೆಚ್ಚ ಭರಿಸಲು ನಿರ್ಧರಿಸಲಾಗಿದೆ ಎಂದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

24 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ಜುಲೈ 24 2026, ಶುಕ್ರವಾರ

## ಒಳಪುಟಗಳಲ್ಲಿ

ಸಿಜೆಪಿ ಪ್ರತಿಭಟನೆ: ಎನ್‌ಐಎ ತನಿಖೆ ಕೋರಿದ್ದ ಪಿಐಎಲ್ ವಿಚಾರಣೆ ಇಂದು - ಪು.4

ಶೃಂಗೇರಿ ಕ್ಷೇತ್ರ ಅಂಚೆಮತ ಮರುಎಣಿಕೆ: ಜು.30ಕ್ಕೆ ವಿಚಾರಣೆ ಮುಂದೂಡಿದ ಸುಪ್ರೀಂ ಕೋರ್ಟ್ - ಪು.5

ಮಕ್ಕಳಿಗೆ ಕೊಡಬೇಕಿದ್ದ 50 ಸಾವಿರ ಐರನ್ ಮಾತ್ರೆ ಶಾಲೆಯ ಟಾಯ್ಲೆಟ್‌ನಲ್ಲಿ ಪತ್ತೆ- ಪು.6

# ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಫಾಸ್ಟ್‌ಟ್ರ್ಯಾಕ್ ಕೋರ್ಟ್ ಸ್ಥಾಪನೆ

## ವಿದ್ಯಾರ್ಥಿಗಳ ಜೊತೆ ಚೆಲ್ಲಾಟವಾಡುವವರನ್ನು ಕ್ಷಮಿಸಲ್ಲ: ಮೋದಿ

**ನವದೆಹಲಿ, ಜು.23: ಪರೀಕ್ಷಾ ಅಕ್ರಮ ಹಾಗೂ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರಿಗೆ ತ್ವರಿತವಾಗಿ ವಿಚಾರಣೆ ನಡೆಸಿ ಶಿಕ್ಷೆ ವಿಧಿಸಲು ಫಾಸ್ಟ್‌ಟ್ರ್ಯಾಕ್ ಕೋರ್ಟ್ ಸ್ಥಾಪಿಸುವುದಾಗಿ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.**




ದೇಶಾದ್ಯಂತ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ ಹಾಗೂ ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ತೀವ್ರಗೊಳ್ಳುತ್ತಿರುವ ಬೆನ್ನಲ್ಲೇ ಮೌನಮುರಿದ ಅವರು ಎಕ್ಸ್‌ನಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ನಮ್ಮ ಯುವಜನತೆಯ ಭವಿಷ್ಯ ಮತ್ತು ಕ್ಷೇಮಾಭಿವೃದ್ಧಿಗಿಂತ ನಮಗೆ ಬೇರೇನೂ ಮುಖ್ಯವಲ್ಲ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಲ್ಲಿ ಭಾಗಿಯಾದವರಿಗೆ ಅತ್ಯಂತ ವೇಗವಾಗಿ ಮತ್ತು ಕಠಿಣವಾದ ಶಿಕ್ಷೆ ಸಿಗುವಂತೆ ಮಾಡಲು ಫಾಸ್ಟ್-ಟ್ರ್ಯಾಕ್ ನ್ಯಾಯಾಲಯಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲಾ ಕಾನೂನು ಮತ್ತು ಆಡಳಿತಾತ್ಮಕ ಕ್ರಮಗಳನ್ನು ತಕ್ಷಣವೇ ಕೈಗೊಳ್ಳುವಂತೆ ಸಂಬಂಧಪಟ್ಟ ಇಲಾಖೆ ಹಾಗೂ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ನಮ್ಮ ಯುವಕರ ಹಾಗೂ ವಿದ್ಯಾರ್ಥಿಗಳ ಭವಿಷ್ಯವನ್ನು ಹಾಳುಮಾಡಲು ಯತ್ನಿಸುವ ಯಾವುದೇ ವ್ಯಕ್ತಿಯನ್ನು ಅಥವಾ ಶಕ್ತಿಯನ್ನು ಯಾವುದೇ ಕಾರಣಕ್ಕೂ ಕ್ಷಮಿಸುವುದಿಲ್ಲ ಎಂದು ತಮ್ಮ ಪೋಸ್ಟ್‌ನಲ್ಲಿ ಮೋದಿ ಹೇಳಿದ್ದಾರೆ.

### ತ್ವರಿತಗತಿಯ ನ್ಯಾಯಾಲಯ ಸಾಲದು, ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಲೇಬೇಕು: ಸಿಜೆಪಿ ಆಗ್ರಹ

ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಫಾಸ್ಟ್-ಟ್ರ್ಯಾಕ್ ನ್ಯಾಯಾಲಯ ಸ್ಥಾಪಿಸುವ ಪ್ರಧಾನಿ ಹೇಳಿಕೆಯನ್ನು ಕಾಕ್ರೋಚ್ ಜನತಾ ಪಕ್ಷ ತಿರಸ್ಕರಿಸಿದೆ. ಪ್ರಧಾನಿ ಪೋಸ್ಟ್ ಪ್ರಕಟವಾದ ಬೆನ್ನಲ್ಲೇ ತನ್ನ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಸಿಜೆಪಿ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂಬ ಬೇಡಿಕೆಯನ್ನು ಪುನರುಚ್ಚರಿಸಿದೆ. ನೀಟ್ ಪರೀಕ್ಷೆ ಅಕ್ರಮದ ನೈತಿಕ ಜವಾಬ್ದಾರಿಯನ್ನು ಕೇಂದ್ರ ಶಿಕ್ಷಣ ಸಚಿವರು ಹೊರಬೇಕು. ಸಚಿವರನ್ನು ವಜಾಗೊಳಿಸುವವರೆಗೆ ಅಥವಾ ರಾಜೀನಾಮೆ ನೀಡುವವರೆಗೆ ಜಂತರ್ ಮಂತರ್‌ನಲ್ಲಿ ಧರಣೆ ನಿಲ್ಲುವುದಿಲ್ಲ ಎಂದು ಸಿಜೆಪಿ ಸ್ಪಷ್ಟಪಡಿಸಿದೆ. ಕೇಂದ್ರ ಸರ್ಕಾರ ಕಾನೂನಾತ್ಮಕ ಕ್ರಮಗಳು ಹಾಗೂ ಕ್ಷಿಪ್ರ ನ್ಯಾಯಾಲಯಗಳ ಮೂಲಕ ವಿದ್ಯಾರ್ಥಿಗಳನ್ನು ಸಮಾಧಾನಪಡಿಸಲು ಯತ್ನಿಸುತ್ತಿದ್ದರೆ, ಪ್ರತಿಭಟನಾ ನಿರತ ಯುವಸಮುದಾಯ ಮತ್ತು ಸಿಜೆಪಿ ಸಚಿವರ ರಾಜೀನಾಮೆ ಹಾಗೂ ರಾಜಕೀಯ ಹೊಣೆಗಾರಿಕೆಗೆ ಪಟ್ಟುಹಿಡಿದು ಹೋರಾಟವನ್ನು ತೀವ್ರಗೊಳಿಸಿವೆ.




ನವದೆಹಲಿಯ ಸಂಸತ್ತಿನ ಆವರಣದಲ್ಲಿ, ಪ್ರಿಯಾಂಕಾ ಗಾಂಧಿ ವಾದ್ರಾ ನೇತೃತ್ವದಲ್ಲಿ ಗುರುವಾರ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್‌ಪದಚ್ಯುತಿಗೆ ಒತ್ತಾಯಿಸಿ ಕಪ್ಪು ಬ್ಯಾನರ್ ಹಿಡಿದು ಪ್ರತಿಭಟನೆ ನಡೆಸಿದರು.

## ಮೋದಿ ಸರ್ಕಾರದ 4ನೇ ಆಹ್ವಾನ ತಿರಸ್ಕರಿಸಿದ ಸಿಜೆಪಿ: ಇಂದು ದೇಶವ್ಯಾಪಿ ಹೋರಾಟ

**ನವದೆಹಲಿ, ಜು.23:** ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ದೆಹಲಿಯಲ್ಲಿ ನಡೆಯುತ್ತಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಪ್ರತಿಭಟನೆ ಮತ್ತಷ್ಟು ತೀವ್ರಗೊಂಡಿದ್ದು, ಬಿಕ್ಕಟ್ಟು ಶಮನಕ್ಕಾಗಿ ಕೇಂದ್ರ ಸರ್ಕಾರ ನೀಡಿದ ನಾಲ್ಕನೇ ಆಹ್ವಾನವನ್ನೂ ಪ್ರತಿಭಟನಾಕಾರರು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ.

ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರ ನಿವಾಸ ಅಥವಾ ಕಚೇರಿಯಲ್ಲಿ ಮಾತುಕತೆ ನಡೆಸಲು ಸಿಜೆಪಿ ನಾಯಕರು ನಿರಾಕರಿಸಿದ್ದು, ಶುಕ್ರವಾರವೂ (ಜು.24) ದೇಶವ್ಯಾಪಿ ಪ್ರತಿಭಟನೆಗೆ ಕರೆ ನೀಡಿದ್ದಾರೆ.

ಕೇಂದ್ರ ಸಚಿವರಾದ ಡಾ. ಜಿತೇಂದ್ರ ಸಿಂಗ್ ಹಾಗೂ ಜೆ.ಪಿ. ನಡ್ಡಾ ಅವರು ಗುರುವಾರ ಮಾತುಕತೆಗೆ ಪ್ರಸ್ತಾಪ ಮುಂದಿಟ್ಟಿದ್ದರು. ಬುಧವಾರ ಮಧ್ಯಾಹ್ನದಿಂದ ಈವರೆಗೆ ಮಾತುಕತೆಗೆ ಬರುವಂತೆ ಸಿಜೆಪಿ ಪ್ರತಿನಿಧಿಗಳಿಗೆ ನಾಲ್ಕು ಬಾರಿ ಅಧಿಕೃತ ಪ್ರಸ್ತಾವನೆಗಳನ್ನು ಕಳುಹಿಸಲಾಗಿದೆ. ಸರ್ಕಾರದ ಬಾಗಿಲು ಯಾವಾಗಲೂ ತೆರೆದಿರುತ್ತದೆ. ಯುವಮಿತ್ರರು ತಮಗೆ ಅನುಕೂಲವಾಗುವ ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಲ್ಲಿ ಮಾತುಕತೆಗೆ ಬರಬಹುದು. ನಾವಿಲ್ಲಿ ಪ್ರತಿಷ್ಠೆಯ ಪ್ರಶ್ನೆ ಮಾಡುತ್ತಿಲ ಎಂದು ಡಾ. ಜಿತೇಂದ್ರ ಸಿಂಗ್ ಮನವಿ ಮಾಡಿದ್ದಾರೆ. ಮಾತುಕತೆಯ ವೇಳೆ ತಾವೂ ಹಾಗೂ ಜೆ.ಪಿ. ನಡ್ಡಾ ಉಪಸ್ಥಿತರಿರುವುದಾಗಿ ತಿಳಿಸಿದ್ದಾರೆ.

ಸುದ್ದಿಸಂಸ್ಥೆ ಪ್ರಕಾರ, ಕೇಂದ್ರ ಸಚಿವ ಜೆ.ಪಿ. ನಡ್ಡಾ ಅವರು ಮಾತನಾಡಿ, ಸಿಜೆಪಿ ಪ್ರತಿನಿಧಿಗಳು ತಮ್ಮ ನಿವಾಸ ಅಥವಾ ಕಚೇರಿಗೆ ಬಂದು ಮುಕ್ತವಾಗಿ ಚರ್ಚಿಸಬಹುದು, ಅವರಿಗೆ ಸ್ವಾಗತವಿದೆ ಎಂದು ಆಹ್ವಾನ ನೀಡಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆ ಮತ್ತು ನೀಟ್ ಅಕ್ರಮದ ಹೊಣೆಗಾರಿಕೆ ಹೊರಬೇಕೆಂದು ಪಟ್ಟು ಹಿಡಿದಿರುವ ಪ್ರತಿಭಟನಾಕಾರರು, ಸರ್ಕಾರದ ಈ ಪ್ರಸ್ತಾವನೆಯನ್ನು ತಳ್ಳಿಹಾಕಿದ್ದಾರೆ. ಜೆ.ಪಿ. ನಡ್ಡಾ ಅವರ ನಿವಾಸ ಅಥವಾ ಕಚೇರಿಗೆ ತೆರಳಿ ಮಾತುಕತೆ ನಡೆಸುವುದಿಲ್ಲ ಎಂದು ಸಿಜೆಪಿ ನಾಯಕರು ಸ್ಪಷ್ಟಪಡಿಸಿದ್ದಾರೆ. ಒಂದು ವೇಳೆ ಸರ್ಕಾರಕ್ಕೆ ಮಾತುಕತೆಯ ನೈಜ ಇಚ್ಛಾಶಕ್ತಿ ಇದ್ದರೆ, ಜಂತರ್ ಮಂತರ್‌ನಲ್ಲಿ ಅಥವಾ ಪ್ರತಿಭಟನಾ ಸ್ಥಳದ ಸಮೀಪದ ಯಾವುದಾದರೂ ತಟಸ್ಥ ಸ್ಥಳದಲ್ಲಿ ಸಭೆ ನಡೆಸಬೇಕು ಎಂದು ಷರತ್ತು ವಿಧಿಸಿದ್ದಾರೆ. ಇದೇ ವೇಳೆ, 24ನೇ ತಾರೀಖಿನಂದು ದೇಶಾದ್ಯಂತ ಬೃಹತ್ ಪ್ರತಿಭಟನೆ ನಡೆಸುವುದಾಗಿ ಸಂಘಟನೆ ಘೋಷಿಸಿದೆ.

# ರಾಜ್ಯದ ಮಾನವ ಸಂಪನ್ಮೂಲ, ಹವಾಮಾನ, ಸಂಸ್ಕೃತಿಗೆ ಬೇರೆ ಯಾವುದೇ ನಗರಗಳೂ ಸಾಟಿ ಇಲ್ಲ: ಡಿಕೆಶಿ




**ರಕ್ಷಣೆ ಹಾಗೂ ಏರೋಸ್ಪೇಸ್ ಕ್ಷೇತ್ರದ 15ನೇ ಸ್ಟ್ರಾಟೆಜಿಕ್ ಎಲೆಕ್ಟ್ರಾನಿಕ್ ಸಮಿಟ್‌ನಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆ**

**ಬೆಂಗಳೂರು, ಜು.23:** ಕರ್ನಾಟಕ ಪ್ರತಿಭಾನ್ವಿತ ಮಾನವ ಸಂಪನ್ಮೂಲ ತಯಾರಿಕಾ ಕೇಂದ್ರವಾಗಿದ್ದು, ಇಲ್ಲಿರುವ ಮಾನವ ಸಂಪನ್ಮೂಲ, ಹವಾಮಾನ ಹಾಗೂ ಸಂಸ್ಕೃತಿಗೆ ದೇಶದ ಬೇರೆ ಯಾವುದೇ ನಗರಗಳೂ ಸಾಟಿಯಿಲ್ಲ ಎಂದು ಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ಬೆಂಗಳೂರಿನ ತುಮಕೂರು ರಸ್ತೆಯ ಬೆಂಗಳೂರು ಅಂತರರಾಷ್ಟ್ರೀಯ ವಸ್ತುಸಂಗ್ರಹ ಕೇಂದ್ರದಲ್ಲಿ ಗುರುವಾರ ನಡೆದ ರಕ್ಷಣೆ ಹಾಗೂ ಏರೋಸ್ಪೇಸ್ ಕ್ಷೇತ್ರದ 15ನೇ ಸ್ಟ್ರಾಟೆಜಿಕ್ ಎಲೆಕ್ಟ್ರಾನಿಕ್ ಸಮಿಟ್‌ನಲ್ಲಿ ಮಾತನಾಡಿದ ಅವರು, ಎಲೆಕ್ಟ್ರಾನಿಕ್ಸ್ ಕೇವಲ ನಗರಗಳಿಗೆ ಸೀಮಿತವಾಗಿಲ್ಲ.

ಪ್ರತಿ ಮಗುವಿನ ಕೈಯಲ್ಲಿ ಈಗ ಮೊಬೈಲ್ ಫೋನ್ ಬಂದಿವೆ. ಕರ್ನಾಟಕದಲ್ಲಿ 250 ಇಂಜಿನಿಯರಿಂಗ್ ಕಾಲೇಜುಗಳಿದ್ದು, ಪ್ರತಿವರ್ಷ 1 ಲಕ್ಷಕ್ಕೂ ಹೆಚ್ಚು ಇಂಜಿನಿಯರ್‌ಗಳನ್ನು ತಯಾರು ಮಾಡಲಾಗುತ್ತಿದೆ. ಕರ್ನಾಟಕ ಮಾನವ ಸಂಪನ್ಮೂಲದ ತಯಾರಿಕಾ ಕೇಂದ್ರವಾಗಿದೆ.

ಇದೇ ಕಾರಣಕ್ಕೆ ನೆಹರೂ ಅವರು ಬೆಂಗಳೂರಿನಲ್ಲಿ ರಕ್ಷಣಾ ಕ್ಷೇತ್ರದ ಉತ್ಪಾದನೆ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್, ಎಚ್‌ಎಎಲ್, ಇಸ್ರೋ, ಐಐಟಿ, ಬಿಎಚ್‌ಇಎಲ್ ಸೇರಿದಂತೆ ಪ್ರಮುಖ ಸಾರ್ವಜನಿಕ ಉದ್ಯಮಗಳನ್ನು ಸ್ಥಾಪಿಸಿದ್ದರು ಎಂದು ತಿಳಿಸಿದರು.

ಬಿಹಾರ, ಉತ್ತರ ಪ್ರದೇಶ, ಮಹಾರಾಷ್ಟ್ರ, ದೆಹಲಿಯಿಂದ ವಿದ್ಯಾರ್ಥಿಗಳು ಇಲ್ಲಿಗೆ ಬಂದು ವಿದ್ಯಾಭ್ಯಾಸ ಪಡೆದಿದ್ದಾರೆ. ಹೀಗಾಗಿ ಬೆಂಗಳೂರು ಎಲೆಕ್ಟ್ರಾನಿಕ್ಸ್, ಏರೋಸ್ಪೇಸ್, ರಕ್ಷಣಾ ವಲಯದ ಕ್ಷೇತ್ರಗಳಿಗೆ ಹೆಸರುವಾಸಿಯಾಗಿದೆ. ಕೆಲವರು ಬೆಂಗಳೂರು ಹೊರತಾಗಿ ಮೈಸೂರು, ಬೆಳಗಾವಿಯಲ್ಲೂ ಘಟಕ ಆರಂಭಿಸಿದ್ದೀರಿ. ದೇಶದ ಭದ್ರತೆ ವಿಚಾರದಲ್ಲಿ ಎಲೆಕ್ಟ್ರಾನಿಕ್ಸ್ ಬಹಳ ಪ್ರಮುಖವಾಗಿದೆ. ನೀವು ದೇಶದ ಭದ್ರತೆಗಾಗಿ ಕೆಲಸ ಮಾಡುತ್ತಿದ್ದೀರಿ. ನಾವೆಲ್ಲರೂ ಒಂದು ತಂಡವಾಗಿ ಕೆಲಸ ಮಾಡಬೇಕಿದೆ ಎಂದು ತಿಳಿಸಿದರು.

ಜಾಗತಿಕ ಸಾಮರ್ಥ್ಯ ಕೇಂದ್ರಗಳ ತಾಣವಾಗಿ ಕರ್ನಾಟಕ ರೂಪುಗೊಳ್ಳುತ್ತಿದ್ದು, 900ಕ್ಕೂ ಹೆಚ್ಚು ಜಿಸಿಸಿ ಕೇಂದ್ರಗಳಿವೆ. ಅಮೆರಿಕದಿಂದ ಹೊರಗೆ ಗೂಗಲ್ ಸಂಸ್ಥೆಯ ಅತಿ ದೊಡ್ಡ ಕ್ಯಾಂಪಸ್ ಇರುವುದು ಬೆಂಗಳೂರಿನಲ್ಲಿ. ಕಳೆದ ವರ್ಷ ಮೋದಿ ಅವರು ಆಗಮಿಸಿದ್ದಾಗ, ಬೆಂಗಳೂರು ಜಾಗತಿಕ ನಗರವಾಗಿದೆ ಎಂದು ಹೇಳಿದ್ದರು. ನಾವು ಎಐ ಕ್ಷೇತ್ರಗಳಲ್ಲೂ ಮುಂಚೂಣಿ ಸಾಧಿಸುತ್ತಿದ್ದು, ಶಿಕ್ಷಣದಲ್ಲಿ ಎಐ ಬಳಕೆಗೆ ಮುಂದಾಗಿದ್ದೇವೆ. ಈ ರಾಜ್ಯ ನಿಮ್ಮನ್ನು ಸ್ವಾಗತಿಸುತ್ತದೆ.

ನೀವು ಪ್ರಗತಿ ಸಾಧಿಸಿ ರಾಜ್ಯ ಹಾಗೂ ದೇಶವನ್ನು ಪ್ರಗತಿ ಸಾಧಿಸುವಂತೆ ಮಾಡಬೇಕು. ಕಂಪನಿಗಳು ಬಲಿಷ್ಠವಾದರೆ, ನಾವುಗಳು ಶಕ್ತಿಶಾಲಿಯಾಗುತ್ತೇವೆ. ಇಡೀ ದೇಶ ಒಂದಾಗಿ ಕೆಲಸ ಮಾಡಬೇಕು ಎಂದು ಕರೆ ನೀಡಿದರು. ಉದ್ಯಮಿಗಳು, ಸರ್ಕಾರ ಎಲ್ಲರೂ ಒಂದಾಗಿ ಇತಿಹಾಸ ಸೃಷ್ಟಿಸಬೇಕು. ನನಗೆ ಇತಿಹಾಸ ಓದುವುದಕ್ಕಿಂತ ಇತಿಹಾಸ ಸೃಷ್ಟಿಸುವುದರಲ್ಲಿ ಹೆಚ್ಚಿನ ಆಸಕ್ತಿ ಇದೆ. ಕರ್ನಾಟಕ ಇತಿಹಾಸ ನಿರ್ಮಿಸುತ್ತದೆ. ನಿಮ್ಮ ಸಲಹೆ ಏನೇ ಇದ್ದರೂ ನಮಗೆ ನೀಡಿ ನಮ್ಮ ಸರ್ಕಾರ ನಿಮ್ಮ ಸಲಹೆಗಳಿಗೆ ಮುಕ್ತವಾಗಿದೆ. ನಿಮ್ಮ ಜೊತೆ ಕೆಲಸ ಮಾಡಲು ಸಿದ್ಧವಾಗಿದೆ ಎಂದು ಸಿಎಂ ಭರವಸೆ ನೀಡಿದರು.

### 25 ಕೋಟಿ ಸಬ್ಸಿಡಿ: ಕೇಂದ್ರದ ನಿರ್ಧಾರಕ್ಕೆ ಸಿಎಂ ಸ್ವಾಗತ

ತಂತ್ರಜ್ಞಾನ, ಸಂಶೋಧನೆ ಹಾಗೂ ನಾವಿನ್ಯತೆಯಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ರಕ್ಷಣಾ ವಲಯದಲ್ಲಿ ಕಾರ್ಯನಿರ್ವಹಿಸುವ ಉದ್ಯಮಿಗಳಿಗೆ 25 ಕೋಟಿಯಷ್ಟು ಸಬ್ಸಿಡಿ ನೀಡಲು ಮುಂದಾಗಿರುವ ವಿಚಾರ ರಕ್ಷಣಾ ಇಲಾಖೆ ಕೈಪಿಡಿಯಿಂದ ತಿಳಿಯಿತು. ಕೇಂದ್ರ ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಭಾರತದಲ್ಲಿ ಏರೋಸ್ಪೇಸ್ ಕ್ಷೇತ್ರ ವ್ಯಾಪಕವಾಗಿ ಬೆಳೆಯುತ್ತಿದೆ. ನಾವು ದೇಶದ ಭವಿಷ್ಯ ಹಾಗೂ ಜಾಗತಿಕ ತಂತ್ರಜ್ಞಾನದ ವಿನ್ಯಾಸಕರಾಗಿದ್ದೇವೆ. ನಾವು ಆಟೋಮೊಬೈಲ್, ಆರೋಗ್ಯ ಕ್ಷೇತ್ರ, ಏರೋಸ್ಪೇಸ್, ರಕ್ಷಣೆ ಹಾಗೂ ಬೃಹತ್ ಯಂತ್ರಗಳ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದೇವೆ. ನಮ್ಮಲ್ಲಿ ಅತಿ ದೊಡ್ಡ ಸಂಶೋಧನೆ ಹಾಗೂ ಅಭಿವೃದ್ಧಿಯ ಸೌಲಭ್ಯವಿದ್ದು, ನೈಪುಣ್ಯತೆ ಕೇಂದ್ರವಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

# ರಾ.ಹೆ. 69ರ ಶಿರಾ–ಬಡವನಹಳ್ಳಿ ಭಾಗದ 20 ಕಿ.ಮೀ. ಚತುಷ್ಪಥ ರಸ್ತೆ ಕಾಮಗಾರಿ ಶೀಘ್ರ ಆರಂಭ

### ಟೆಂಡರ್ ಪ್ರಕ್ರಿಯೆ ಪೂರ್ಣ, ಕಾಮಗಾರಿಗೆ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಆದೇಶ: ಕೇಂದ್ರ ಸಚಿವ ವಿ.ಸೋಮಣ್ಣ



**ಬೆಂಗಳೂರು, ಜು.23:** ರಾಷ್ಟ್ರೀಯ ಹೆದ್ದಾರಿ 69ರ ಶಿರಾ–ಬಡವನಹಳ್ಳಿ ಭಾಗದ 20.2 ಕಿಮೀ ಉದ್ದದ ರೂ. 584.98 ಕೋಟಿ ವೆಚ್ಚದ ಚತುಷ್ಪಥ ರಸ್ತೆ ಕಾಮಗಾರಿ ಶೀಘ್ರ ಆರಂಭವಾಗಲಿದೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಹೇಳಿದರು

ರಾಷ್ಟ್ರೀಯ ಹೆದ್ದಾರಿ 69ರ ಶಿರಾ–ಬಡವನಹಳ್ಳಿ ಚತುಷ್ಪಥ ರಸ್ತೆ ಕಾಮಗಾರಿಗೆ ಅನುಮೋದನೆ ನೀಡುವಂತೆ ಕೇಂದ್ರ ರೇಲ್ವೆ ಮತ್ತು ಜಲ ಶಕ್ತಿ ರಾಜ್ಯ ಖಾತೆಯ ಸಚಿವ ಹಾಗೂ ಸಂಸದರು ತುಮಕೂರು ಲೋಕಸಭಾ ವಿ. ಸೋಮಣ್ಣ ಅವರು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿಯವರನ್ನು 2025ರ ಫೆ.2ರಂದುಭೇಟಿ ಮಾಡಿ ಮನವಿ ಸಲ್ಲಿಸಿದ್ದರು. ಅದಕ್ಕೆ ನಿತಿನ ಗಡ್ಕರಿ ಯವರು ಸಕಾರಾತ್ಮಕವಾಗಿ ಸ್ಪಂದಿಸಿದ್ದರು.

ಅದರಂತೆ 2025ರ ಮಾ.7ರಂದು ಕಾಮಗಾರಿಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿತ್ತು. ಇದೀಗ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಜು.22ರಂದು ಕಾಮಗಾರಿ ಪ್ರಾರಂಭಿಸಲು ಗುತ್ತಿಗೆ ಆದೇಶವನ್ನು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ನೀಡಿದೆ ಎಂದು ಸೋಮಣ್ಣ ತಿಳಿಸಿದ್ದಾರೆ.

ಬಡವನಹಳ್ಳಿಯಿಂದ ಬೈರೇನಹಳ್ಳಿ ಭಾಗದ 32 ಕಿ.ಮಿ. ಚತುಷ್ಪಥ ರಸ್ತೆಗೆ 1000 ಕೋಟಿ ರೂ. ಅನುಮೋದನೆ ಪಡೆಯುವ ಬಗ್ಗೆ ಈಗಾಗಲೇ ಪ್ರಸ್ತಾವನೆ ಅಂತಿಮ ಹಂತದಲ್ಲಿದ್ದು ಮುಂದಿನ ದಿವಸಗಳಲ್ಲಿ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯಲಾಗುವುದು ಎಂದು ಸೋಮಣ್ಣ ತಿಳಿಸಿದ್ದಾರೆ.

ತುಮಕೂರು ಜಿಲ್ಲೆಯ ಅಭಿವೃದ್ಧಿಗೆ ನಿರಂತರ ಸಹಕಾರ ನೀಡಿದ ಪ್ರಧಾನಿ ನರೇಂದ್ರ ಮೋದಿಯವರಿಗೆ ಮತ್ತು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವರಾದ ಶ್ರೀ ನೀತಿನ್ ಗಡ್ಕರಿಯವರಿಗೆ ಕೇಂದ್ರ ಸಚಿವ ವಿ. ಸೋಮಣ್ಣ ತುಮಕೂರು ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಿದ್ದಾರೆ.

### ಪರ್ಯಾಯ ರಸ್ತೆ ಸಂಪರ್ಕ

ರಾಷ್ಟ್ರೀಯ ಹೆದ್ದಾರಿ 69ರ ಶಿರಾ–ಬಡವನಹಳ್ಳಿ–ಬೈರೆನಹಳ್ಳಿ ಒಟ್ಟು 52 ಕಿ.ಮಿ. ಅಂದಾಜು 1585 ಕೋಟಿ ವೆಚ್ಚದ ಚತುಷ್ಪಥ ಹೆದ್ದಾರಿ ನಿರ್ಮಾಣದಿಂದ ಮಧ್ಯ ಕರ್ನಾಟಕ, ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕ ಭಾಗದಿಂದ ತಿರುಪತಿ ಮತ್ತು ಚೆನ್ನೈ ನಡುವಿನ ಪ್ರಯಾಣಕ್ಕೆ ಅನುಕೂಲವಾಗಲಿದೆ. ಪ್ರಸ್ತುತ ಶಿರಾದಿಂದ ತುಮಕೂರು, ದಾಬಸಪೇಟೆ ಕೋಲಾರ ಮಾರ್ಗವಾಗಿ ತಿರುಪತಿಗೆ ತಲುಪಲು 6 ರಿಂದ 7 ಗಂಟೆಗಳ ಪ್ರಯಾಣದ ಅವಧಿ ಇದ್ದು, ಈ ಹೆದ್ದಾರಿ ನಿರ್ಮಾಣದಿಂದ ಶಿರಾದಿಂದ ಮಧುಗಿರಿ, ಚಿಕ್ಕಬಳ್ಳಾಪುರ, ಚಿಂತಾಮಣಿ ಮಾರ್ಗವಾಗಿ ತಿರುಪತಿಗೆ ಕೇವಲ 4 ಗಂಟೆಯ ಅವಧಿಯಲ್ಲಿ ತಲುಪಲು ಅನುಕೂಲವಾಗಲಿದೆ ಹಾಗೂ ಶಿರಾದಿಂದ ತಿರುಪತಿಗೆ ಸುಮಾರು 60 ಕಿ.ಮಿ. ರಸ್ತೆ ಪ್ರಯಾಣ ಕಡಿಮೆಯಾಗಲಿದೆ. ಇದಲ್ಲದೆ ವಸಂತ ನರಸಾಪುರ ಹಾಗೂ ಶಿರಾ ಕೈಗಾರಿಕಾ ಪ್ರದೇಶಗಳಿಗೆ ಚೆನ್ನೈ ಬಂದರಿಗೆ ಉತ್ತಮ ರಸ್ತೆ ಸಂಪರ್ಕ ಕಲ್ಪಿಸಲಿದೆ. ಈ ಹೆದ್ದಾರಿ ಶಿರಾ–ಬೆಂಗಳೂರಿನ ನಡುವಿನ ಪರ್ಯಾಯ ರಸ್ತೆ ಸಂಪರ್ಕವಾಗಲಿದೆ ಎಂದು ಕೇಂದ್ರ ಸಚಿವ ಹಾಗೂ ತುಮಕೂರು ಲೋಕಸಭಾ ಸದಸ್ಯ ವಿ.ಸೋಮಣ್ಣ ತಿಳಿಸಿದ್ದಾರೆ.

# ಡಿಆರ್‌ಡಿಓದಿಂದ ಕುಶ ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ



**ನವದೆಹಲಿ, ಜು.23:** ಭಾರತವು ತನ್ನ ಸ್ವದೇಶಿ ವಾಯು ರಕ್ಷಣಾ ಸಾಮರ್ಥ್ಯದಲ್ಲಿ ಗುರುವಾರ ಪ್ರಮುಖ ಮೈಲಿಗಲ್ಲು ಸಾಧಿಸಿದೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ಒಡಿಶಾ ಕರಾವಳಿಯ ಎಪಿಜೆ ಅಬ್ದುಲ್ ಕಲಾಂ ದ್ವೀಪದಿಂದ 'ಕುಶ' ಸುದೀರ್ಘ ವ್ಯಾಪ್ತಿಯ ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿಯ (LRSAM) ಮೊದಲ ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಹೆಚ್ಚಿನ ವೇಗ ಮತ್ತು ಹೆಚ್ಚಿನ ಎತ್ತರದ ವೈಮಾನಿಕ ಬೆದರಿಕೆಯನ್ನು ಹೋಲುವ ಎಲೆಕ್ಟ್ರಾನಿಕ್ ಗುರಿಯ ವಿರುದ್ಧ ಈ ಮೊದಲ ಪರೀಕ್ಷೆಯನ್ನು ನಡೆಸಲಾಯಿತು.

ರಕ್ಷಣಾ ಸಚಿವಾಲಯದ ಪ್ರಕಾರ, ಈ ಕ್ಷಿಪಣಿಯು ಗುರಿಯನ್ನು ಯಶಸ್ವಿಯಾಗಿ ತಡೆದು ಧ್ವಂಸಗೊಳಿಸಿದ್ದು, ಹೊಸದಾಗಿ ಅಭಿವೃದ್ಧಿಪಡಿಸಲಾದ ಆಯುಧ ವ್ಯವಸ್ಥೆಯ ದಕ್ಷತೆಯನ್ನು ಪ್ರದರ್ಶಿಸಿದೆ.

'ಕುಶ' ಕ್ಷಿಪಣಿ ವ್ಯವಸ್ಥೆಯನ್ನು ಯುದ್ಧ ವಿಮಾನಗಳು, ಕ್ರೂಸ್ ಕ್ಷಿಪಣಿಗಳು, ಮಾನವರಹಿತ ವೈಮಾನಿಕ ವಾಹನಗಳು ಮತ್ತು ಶತ್ರುಗಳ ಬೃಹತ್ ವಿಮಾನಗಳು ಸೇರಿದಂತೆ ವಿವಿಧ ರೀತಿಯ ವೈಮಾನಿಕ ಬೆದರಿಕೆಗಳನ್ನು ವ್ಯಾಪಕ ಶ್ರೇಣಿ ಮತ್ತು ಎತ್ತರದಲ್ಲಿ ಎದುರಿಸಲು ವಿನ್ಯಾಸಗೊಳಿಸಲಾಗಿದೆ.

ಕ್ಷಿಪಣಿ, ರೇಡಾರ್‌ಗಳು, ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್ ಹಾಗೂ ಸಂಬಂಧಿತ ಉಪಕರಣಗಳು ಸೇರಿದಂತೆ ಸಂಪೂರ್ಣ ಆಯುಧ ವ್ಯವಸ್ಥೆಯನ್ನು ಡಿಆರ್‌ಡಿಒದ ವಿವಿಧ ಪ್ರಯೋಗಾಲಯಗಳು ಭಾರತೀಯ ಉದ್ಯಮ ಪಾಲುದಾರರ ಸಹಯೋಗದೊಂದಿಗೆ ಸ್ವದೇಶಿಯಾಗಿಯೇ ಅಭಿವೃದ್ಧಿಪಡಿಸಿವೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಈ ಯಶಸ್ವಿ ಪರೀಕ್ಷಾರ್ಥ ಹಾರಾಟವನ್ನು ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ವ್ಯವಸ್ಥೆಯ ಒಂದು ಐತಿಹಾಸಿಕ ಸಾಧನೆ ಎಂದು ಬಣ್ಣಿಸಿದ್ದಾರೆ. 'ಕುಶ' ಕ್ಷಿಪಣಿಯ ಯಶಸ್ವಿ ಪರೀಕ್ಷಾರ್ಥ ಹಾರಾಟವು ಭಾರತದ ರಕ್ಷಣಾ ಆರ್‌ಆಂಡ್ ಡಿ ಕ್ಷೇತ್ರದಲ್ಲಿ ಪ್ರಮುಖ ಮೈಲಿಗಲ್ಲಾಗಿದೆ. ಕೆಲವೇ ಕೆಲವು ರಾಷ್ಟ್ರಗಳು ಮಾತ್ರ ಹೊಂದಿರುವ ಸುದೀರ್ಘ ವ್ಯಾಪ್ತಿಯ ಮೇಲ್ಮೈಯಿಂದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ಇದು ಎತ್ತಿಹಿಡಿದಿದೆ. ಇದು ಇಂತಹ ವ್ಯವಸ್ಥೆಗಳಿಗಾಗಿ ವಿದೇಶಗಳ ಮೇಲಿನ ಅವಲಂಬನೆಯನ್ನು ತಪ್ಪಿಸಲಿದ್ದು, ರಾಷ್ಟ್ರದ ವಾಯು ರಕ್ಷಣಾ ಸಾಮರ್ಥ್ಯದಲ್ಲಿ ದೈತ್ಯ ಜಿಗಿತವನ್ನು ಸೂಚಿಸುತ್ತದೆ," ಎಂದು ಅವರು ಹೇಳಿದರು.

ರಕ್ಷಣಾ ಕಾರ್ಯದರ್ಶಿ ಮತ್ತು ರಕ್ಷಣಾ ಆರ್‌ಆಂಡ್ಡಿ ಇಲಾಖೆಯ ಕಾರ್ಯದರ್ಶಿ ಹಾಗೂ ಡಿಆರ್‌ಡಿಓ ಅಧ್ಯಕ್ಷ ರಾಜೇಶ್ ಕುಮಾರ್ ಸಿಂಗ್ ಅವರು ಉಡಾವಣಾ ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಿದರು ಮತ್ತು ಯಶಸ್ವಿ ಪ್ರದರ್ಶನಕ್ಕಾಗಿ ವಿಜ್ಞಾನಿಗಳು, ಎಂಜಿನಿಯರ್‌ಗಳು ಮತ್ತು ಉದ್ಯಮ ಪಾಲುದಾರರನ್ನು ಅಭಿನಂದಿಸಿದರು.

ಈ ಯಶಸ್ವಿ ಪರೀಕ್ಷೆಯು ಕ್ಷಿಪಣಿ ವ್ಯವಸ್ಥೆಯನ್ನು ಭಾರತೀಯ ಸಶಸ್ತ್ರ ಪಡೆಗಳಿಗೆ ಸೇರ್ಪಡೆಗೊಳಿಸುವ ಮುನ್ನ ಹೆಚ್ಚಿನ ಅಭಿವೃದ್ಧಿ ಮತ್ತು ಬಳಕೆದಾರರ ಪರೀಕ್ಷೆಗಳಿಗೆ ಹಾದಿ ಸುಗಮಗೊಳಿಸುವ ನಿರೀಕ್ಷೆಯಿದೆ. ಇದು ದೇಶದ ಬಹುಪದರದ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸಲಿದ್ದು, ನಿರ್ಣಾಯಕ ರಕ್ಷಣಾ ತಂತ್ರಜ್ಞಾನಗಳಲ್ಲಿ ಸ್ವಾವಲಂಬನೆ ಸಾಧಿಸುವ ಸರ್ಕಾರದ ಪ್ರಯತ್ನಕ್ಕೆ ಮತ್ತಷ್ಟು ವೇಗ ನೀಡಲಿದೆ.



# ಸಿಜೆಪಿ ಪ್ರತಿಭಟನೆ: ಎನ್‌ಐಎ ತನಿಖೆ ಕೋರಿದ್ದ ಪಿಐಎಲ್ ವಿಚಾರಣೆ ಇಂದು

**ನವದೆಹಲಿ, ಜು.23:** ಜುಲೈ 20ರಂದು ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನೇತೃತ್ವದಲ್ಲಿ ನಡೆದ ಸಂಸತ್ ಚಲೋ ಪ್ರತಿಭಟನೆ ಹಾಗೂ ಸಂಸತ್ ಮೆರವಣಿಗೆ ಕುರಿತು ರಾಷ್ಟ್ರೀಯ ತನಿಖಾ ಸಂಸ್ಥೆ ಮೂಲಕ ತನಿಖೆ ನಡೆಸುವಂತೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ದೆಹಲಿ ಹೈಕೋರ್ಟ್ ಶುಕ್ರವಾರ (ಜುಲೈ 24) ವಿಚಾರಣೆಗೆ ಕೈಗೆತ್ತಿಕೊಳ್ಳಲು ಒಪ್ಪಿದೆ. ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರಿದ್ದ ವಿಭಾಗೀಯ ಪೀಠದ ಮುಂದೆ ಅರ್ಜಿಯನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡುವಂತೆ ಅರ್ಜಿದಾರರ ಪರ ವಕೀಲ ಬರುಣ್ ಕುಮಾರ್ ಸಿನ್ಹಾ ಮನವಿ ಮಾಡಿದರು.




ಇದು ವಿದ್ಯಾರ್ಥಿಗಳ ಪ್ರತಿಭಟನೆ ಎಂದು ಹೇಳಲಾಗುತ್ತಿರುವ ಹೋರಾಟಕ್ಕೆ ಸಂಬಂಧಿಸಿದ ಪ್ರಕರಣ. ಇಡೀ ದೆಹಲಿಯನ್ನೇ ಒತ್ತೆಯಾಳಾಗಿಸಲಾಗಿದೆ. ರಸ್ತೆಗಳನ್ನು ಬಂದ್ ಮಾಡಲಾಗಿದ್ದು, ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ನಾಳೆಯೇ ವಿಚಾರಣೆಗೆ ಪಟ್ಟಿ ಮಾಡಬೇಕು ಎಂದು ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದರು. ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಅಖಿಲ ಭಾರತ ಹಿಂದೂ ಮಹಾಸಭಾದ ಮಾಜಿ ಉಪಾಧ್ಯಕ್ಷ ಸತೀಶ್ ಕುಮಾರ್ ಅಗರ್ವಾಲ್ ಸಲ್ಲಿಸಿದ್ದಾರೆ. ಪ್ರತಿಭಟನೆ ರಾಜಕೀಯ ಪ್ರೇರಿತವಾಗಿದ್ದು, ದೇಶವನ್ನು ಅಸ್ಥಿರಗೊಳಿಸುವ ಉದ್ದೇಶದಿಂದ ವಿದೇಶಿ ಶಕ್ತಿಗಳ ಬೆಂಬಲ ಮತ್ತು ಹಣಕಾಸು ನೆರವಿನೊಂದಿಗೆ ನಡೆಸಲಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.ಜುಲೈ 20ರ ಪ್ರತಿಭಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ದಾಖಲಿಸಿರುವ ಎಲ್ಲ ಎಫ್‌ಐಆರ್‌ಗಳನ್ನು ಎನ್‌ಐಎ ಅಥವಾ ಇನ್ನಾವುದೇ ವಿಶೇಷ ತನಿಖಾ ಸಂಸ್ಥೆಗೆ ವರ್ಗಾಯಿಸುವಂತೆ, ಹಿಂಸಾಚಾರ, ಸಾರ್ವಜನಿಕ ಆಸ್ತಿ ಹಾನಿ ಹಾಗೂ ತುರ್ತು ಸೇವೆಗಳಿಗೆ ಅಡ್ಡಿಪಡಿಸಿದವರನ್ನು ಗುರುತಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಅರ್ಜಿಯಲ್ಲಿ ಕೋರಲಾಗಿದೆ. ಜುಲೈ 20ರಂದು ನಡೆದ ಪ್ರತಿಭಟನೆಯ ವೇಳೆ ಸಾರ್ವಜನಿಕ ಸಂಚಾರಕ್ಕೆ ಅಡ್ಡಿ ಉಂಟುಮಾಡಲಾಗಿದೆ,ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಪಾಸ್ತಿಗಳಿಗೆ ಹಾನಿ ಮಾಡಲಾಗಿದೆ, ಪತ್ರಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ, ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ ಹಾಗೂ ಸಂಸತ್ ಕಡೆಗೆ ಸಾಗಲು ಪ್ರಯತ್ನಿಸಲಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.



ಪರೀಕ್ಷೆಯಲ್ಲಿನ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಗೆ ಆಗ್ರಹಿಸಿ 'ಕಾಕ್ರೋಚ್ ಜನತಾ ಪಕ್ಷ' ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡಿರುವವರಿಗಾಗಿ, ದೇಶಾದ್ಯಂತದ ಬೆಂಬಲಿಗರು ಕಳುಹಿಸಿದ ಆನ್‌ಲೈನ್ ಆರ್ಡರ್‌ಗಳನ್ನು ಹೊತ್ತುಕೊಂಡು ಆಹಾರ ವಿತರಣಾ ಸಿಬ್ಬಂದಿ ಗುರುವಾರ ನವದೆಹಲಿಯ ಜಂತರ್ ಮಂತರ್‌ಗೆ ಆಗಮಿಸಿದರು.

# ಪ್ರತಿಭಟನಾನಿರತರ ಮೇಲಿನ ಬಲಪ್ರಯೋಗಕ್ಕೆ ಬಿಜೆಪಿ ಹಿರಿಯ ನಾಯಕ ಮುರಳಿಮನೋಹರ್ ಜೋಶಿ ಕಳವಳ

**ನವದೆಹಲಿ, ಜು.23:** ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ವಿದ್ಯಾರ್ಥಿಗಳ ಮೇಲೆ ನಡೆದ ಬಲಪ್ರಯೋಗಕ್ಕೆ ಮಾಜಿ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಹಾಗೂ ಬಿಜೆಪಿ ಹಿರಿಯ ನಾಯಕ ಮುರಳಿ ಮನೋಹರ್ ಜೋಶಿ ಕಳವಳ ವ್ಯಕ್ತಪಡಿಸಿದ್ದಾರೆ. ಪರೀಕ್ಷಾ ವ್ಯವಸ್ಥೆಯ ಕುರಿತು ವಿದ್ಯಾರ್ಥಿಗಳ ಕುಂದುಕೊರತೆ "ನ್ಯಾಯಸಮ್ಮತವಾಗಿವೆ" ಮತ್ತು ಇದನ್ನು ಕೇವಲ "ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆ"ಯಾಗಿ ನೋಡಬಾರದು ಎಂದು ಹೇಳಿದ್ದಾರೆ.



ಪ್ರತಿಭಟನಾಕಾರರ ಮೇಲಿನ ಪೊಲೀಸ್ ಲಾಠಿಚಾರ್ಜ್‌ನ್ನು ಉಲ್ಲೇಖಿಸಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, "ಈ ರೀತಿಯ ಬಲಪ್ರಯೋಗವು ಭಾರತೀಯ ಸಮಾಜದ ದೊಡ್ಡ ವರ್ಗವನ್ನು ವಿಕಸಿತ ಭಾರತ'ದ ರಾಷ್ಟ್ರೀಯ ಗುರಿಯಿಂದ ದೂರ ಮಾಡುತ್ತದೆ, ಎಂದು ಎಚ್ಚರಿಸಿದ್ದಾರೆ.

ದೇಶದ ವಿವಿಧ ಭಾಗಗಳಿಂದ ಬಂದ ವಿದ್ಯಾರ್ಥಿಗಳು ದಿನಗಟ್ಟಲೆ ರಾಜಧಾನಿಯ ರಸ್ತೆಗಳಲ್ಲಿ ಬೀಡುಬಿಟ್ಟಿರುವುದನ್ನು ನೋಡುವುದು ಬೇಸರ ತಂದಿದೆ ಎಂದು ಮಾಜಿ ಬಿಜೆಪಿ ಅಧ್ಯಕ್ಷರು ತಿಳಿಸಿದ್ದಾರೆ.

"ದೇಶದ ವಿವಿಧ ಭಾಗಗಳಿಂದ ಬಂದ ಯುವ ವಿದ್ಯಾರ್ಥಿಗಳು ದಿನಗಟ್ಟಲೆ ನವದೆಹಲಿಯ ರಸ್ತೆಗಳಲ್ಲಿ ಒಟ್ಟುಗೂಡಿರುವುದನ್ನು ನೋಡುವುದು ಅತ್ಯಂತ ಬೇಸರದ ಸಂಗತಿ. ಪರೀಕ್ಷಾ ವ್ಯವಸ್ಥೆಯ ಬಗ್ಗೆ ಅವರಲ್ಲಿರುವ ಆತಂಕಗಳು ಮತ್ತು ಕಳವಳಗಳು ನ್ಯಾಯಸಮ್ಮತವಾದವು. ಇವುಗಳನ್ನು ಅನುಕಂಪದಿಂದ ಹಾಗೂ ಶಾಶ್ವತ ಪರಿಹಾರ ಕಂಡುಕೊಳ್ಳುವ ಇಚ್ಛೆಯೊಂದಿಗೆ ನಿರ್ವಹಿಸಬೇಕು."

ಇದನ್ನು ಬಲಪ್ರಯೋಗದ ಮೂಲಕ ಹತೋಟಿಗೆ ತರುವ ಕೇವಲ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಾಗಿ ನೋಡಲಾಗುವುದಿಲ್ಲ ಎಂದು ನಾನು ಬಲವಾಗಿ ಆಶಿಸುತ್ತೇನೆ. ಯುವತಿಯರನ್ನು ಸಹ ಅಷ್ಟೊಂದು ಕ್ರೂರವಾಗಿ ನಡೆಸಿಕೊಂಡಿರುವುದನ್ನು ನೋಡುವುದು ತುಂಬಾ ನೋವುಂಟುಮಾಡುತ್ತದೆ ಎಂದು ಹಿರಿಯ ಬಿಜೆಪಿ ನಾಯಕರು ಹೇಳಿದ್ದಾರೆ.

# ಪ್ರಧಾನಿ ನಿವಾಸದ ಬಳಿ ಕಾಂಗ್ರೆಸ್ ಪ್ರತಿಭಟನೆ ಪ್ರಾಮಾಣಿಕತೆಯಿಂದ ಕೂಡಿಲ್ಲ; ವಾಂಗ್ಚುಕ್ ಪತ್ನಿ ವಾಗ್ದಾಳಿ

**ನವದೆಹಲಿ, ಜು.23:** ಪ್ರಧಾನಿ ನರೇಂದ್ರ ಮೋದಿ ನಿವಾಸದ ಬಳಿ ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ನಾಯಕರು ನಡೆಸಿದ ಪ್ರತಿಭಟನೆಯನ್ನು ಹೋರಾಟಗಾರ ಸೋನಮ್ ವಾಂಗ್ಚುಕ್ ಅವರ ಪತ್ನಿ ಗೀತಾಂಜಲಿ ಜೆ. ಅಂಗ್ಮೊ ಕಟುವಾಗಿ ಟೀಕಿಸಿದ್ದಾರೆ.

ರಾಹುಲ್ ಗಾಂಧಿ ಸೇರಿದಂತೆ ಹಲವು ಹಿರಿಯ ನಾಯಕರನ್ನು ಪೊಲೀಸರು ವಶಕ್ಕೆ ಪಡೆದ ಜುಲೈ 21ರ ಪ್ರತಿಭಟನೆಯು ಪ್ರಾಮಾಣಿಕತೆಯಿಂದ ಕೂಡಿರಲಿಲ್ಲ ಎಂದು ಹೇಳಿರುವ ಅವರು, ಕಾಂಗ್ರೆಸ್ ನಾಯಕರು ರಾಜಕೀಯ ನಾಟಕ ಮಾಡುವ ಬದಲು ಜಂತರ್ ಮಂತರ್‌ನಲ್ಲಿ ಧರಣಿ ಕುಳಿತಿರುವ ವಿದ್ಯಾರ್ಥಿಗಳ ಜೊತೆ ಸೇರಿಕೊಳ್ಳಬೇಕಿತ್ತು ಎಂದು ತಿರುಗೇಟು ನೀಡಿದ್ದಾರೆ.



ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಶಿಕ್ಷಣ ತಜ್ಞೆ ಹಾಗೂ ಸಾಮಾಜಿಕ ಉದ್ಯಮಿಯಾಗಿರುವ ಗೀತಾಂಜಲಿ, ರಾಜಕಾರಣಿಗಳು ಈಗ ಸೋನಮ್ ವಾಂಗ್ಚುಕ್ ಅವರ ಹೆಸರು ಮತ್ತು ಪ್ರತಿಷ್ಠೆಯನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ.

ಆದರೆ ದೇಶದ ಜನರನ್ನು ಇನ್ನು ಮುಂದೆ ಮೂರ್ಖರನ್ನಾಗಿ ಮಾಡಲು ಸಾಧ್ಯವಿಲ್ಲ ಎಂದಿದ್ದಾರೆ.

ನಮಗೆ ಆಡಳಿತ ಪಕ್ಷವೂ ಇಲ್ಲ, ವಿರೋಧ ಪಕ್ಷವೂ ಇಲ್ಲ. ನಮಗೆ ಸಂಸತ್ತೇ ಅತ್ಯುನ್ನತ ಸಂಸ್ಥೆ. ಸಂಸತ್ತು ಶಿಕ್ಷಣವನ್ನು ಅತ್ಯಂತ ಮೂಲಭೂತ ವಿಷಯವಾಗಿ ಪರಿಗಣಿಸಬೇಕು ಎಂಬುದಷ್ಟೇ ನಮ್ಮ ಆಶಯ ಎಂದರು.

ಪ್ರಾಮಾಣಿಕತೆ ಇಲ್ಲದ ರಾಜಕಾರಣಿಗಳನ್ನು ದೇಶದ [illegible] ಹೊರಹಾಕಲಿದ್ದಾರೆ. ಯಾವುದೇ ರಾಜಕೀಯ ಅಜೆಂಡಾ ಇಲ್ಲದೆ, ಕೇವಲ ಬೆಂಬಲ ನೀಡಲು ಬರುವ ಯಾರನ್ನಾದರೂ ಚಳವಳಿಗೆ ಸ್ವಾಗತಿಸಲಾಗುತ್ತದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ದೆಹಲಿ ಪ್ರತಿಭಟನೆಗೆ ಸುಪ್ರೀಂ ವಕೀಲರ ಬೆಂಬಲ

**ನವದೆಹಲಿ, ಜು.23:** ದೆಹಲಿಯ ಜಂತರ್ ಮಂತರ್‌ನಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಪ್ರತಿಭಟನೆಗೆ ಬೆಂಬಲ ಸೂಚಿಸಿ, ಸುಪ್ರೀಂ ಕೋರ್ಟ್ ವಕೀಲರು ಗುರುವಾರ ಸಂವಿಧಾನದ ಪೀಠಿಕೆ ಓದಿ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳ ಮೇಲಿನ ಪೊಲೀಸ್ ಕ್ರಮವನ್ನು ಖಂಡಿಸಿರುವ ಅವರು, ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿದ್ದಾರೆ.

ಈ ವೇಳೆ ಹಿರಿಯ ವಕೀಲೆ ಇಂದಿರಾ ಜೈಸಿಂಗ್ ಮಾತನಾಡಿ, ಸ್ವಂತ ಹಿತಾಸಕ್ತಿಗಾಗಿ ಅಲ್ಲ, ವಿದ್ಯಾರ್ಥಿಗಳ ಹಕ್ಕುಗಳ ಪರವಾಗಿ ನಿಂತಿದ್ದೇವೆ. ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಲು ಬಂದಿದ್ದೇವೆ. ಇದು ನಮ್ಮ ಹೋರಾಟವಲ್ಲ. ಇದು ವಿದ್ಯಾರ್ಥಿಗಳ ಹಕ್ಕುಗಳಿಗೆ ಸಂಬಂಧಿಸಿದ ವಿಷಯ. ಅವರ ಪರವಾಗಿ ಸುಪ್ರೀಂ ಕೋರ್ಟ್ ಮುಂದೆ ನಿಂತು ನ್ಯಾಯವನ್ನು ಕೋರುವುದು ವಕೀಲರ ಕರ್ತವ್ಯ. ಭಾರತದ ಸುಪ್ರೀಂ ಕೋರ್ಟ್‌ನ ಕರ್ತವ್ಯ ನ್ಯಾಯವನ್ನು ಒದಗಿಸುವುದು. ಅದಕ್ಕಾಗಿಯೇ ನಾವು ನ್ಯಾಯ ಮಂದಿರದ ಮುಂದೆ ನಮ್ಮ ಬೇಡಿಕೆಗಳೊಂದಿಗೆ ನಿಂತಿದ್ದೇವೆ ಎಂದು ಜೈಸಿಂಗ್ ಪ್ರತಿಕ್ರಿಯಿಸಿದ್ದಾರೆ.



ಪ್ರತಿಭಟನೆಯ ವೇಳೆ ವಕೀಲರು ಭಾರತದ ಸಂವಿಧಾನದ ಪೀಠಿಕೆಯನ್ನು ಸಾಮೂಹಿಕವಾಗಿ ವಾಚಿಸಿ, ವಿದ್ಯಾರ್ಥಿಗಳ ಹಕ್ಕುಗಳನ್ನು ರಕ್ಷಿಸುವಂತೆ ಮತ್ತು ಪ್ರತಿಭಟನಾಕಾರರ ವಿರುದ್ಧದ ಪೊಲೀಸ್ ಕ್ರಮದ ಕುರಿತು ನ್ಯಾಯಸಮ್ಮತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು ಎಂದು ಪಿಟಿಐ ವರದಿ ಮಾಡಿದೆ.

# ವಿದ್ಯಾರ್ಥಿ ಪ್ರತಿಭಟನಾಕಾರರಿಗೆ ಬೆದರಿಕೆ ಹಾಕಿದ್ದ ಮುಂಬೈ ಪೊಲೀಸ್ ಪವನ್ ಸಾಂಗ್ಲೆ ವಜಾ

**ಮುಂಬೈ, ಜು.23:** ದೆಹಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ ನಡೆಸುತ್ತಿದ್ದು, ಮುಂಬೈನಲ್ಲೂ ಸಿಜೆಪಿ ಪ್ರತಿಭಟನೆ ನಡೆಯುತ್ತಿದೆ. ಈ ಪ್ರತಿಭಟನೆಯಲ್ಲಿ ಮತ್ತೆ ಭಾಗಿಯಾದರೆ ನಕಲಿ ಡ್ರಗ್ಸ್ ಕೇಸ್ ದಾಖಲಿಸುವೆ. ನೀವು ಜೈಲಿನಲ್ಲೇ ಕೊಳೆಯುವಂತೆ ಮಾಡುವೆ ಎಂದು ಬೆದರಿಕೆ ಹಾಕಿದ್ದ ಮುಂಬೈ ಪೊಲೀಸ್ ಪವನ್ ಸಾಂಗ್ಲೆಯನ್ನು ವಜಾಗೊಳಿಸಲಾಗಿದೆ.

ಪೊಲೀಸ್ ಪೇದೆ ಪವನ್ ಸಾಂಗ್ಲೆ ವಿದ್ಯಾರ್ಥಿಗಳಿಗೆ ಬೆದರಿಕೆ ಹಾಕುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರಿ ವೈ ರಲ್ ಆಗಿತ್ತು. ಈ ವಿಡಿಯೋದಲ್ಲಿ ಪೊಲೀಸ್ ವಿದ್ಯಾರ್ಥಿಗಳು ಸಿಜೆಪಿ ಪ್ರತಿಭಟನೆಯಲ್ಲಿ ಭಾಗಯಾಗದಂತೆ ಬೆದರಿಸುವುದು ಕಂಡುಬಂದಿತ್ತು. ಮುಂದಿನ ಪ್ರತಿಭಟನೆಗಳಲ್ಲಿ ಭಾಗವಹಿಸಿದರೆ ಉಳಿದ ಜೀವನವನ್ನು ಜೈಲಿನಲ್ಲಿ ಕಳೆಯಬೇಕಾಗುತ್ತದೆ ಎಂದೂ ಬೆದರಿಕೆ ಹಾಕುವ ವಿಡಿಯೋ ನೆಟ್ಟಿಗರ ಆಕ್ರೋಶಕ್ಕೆ ಕಾರಣವಾಗಿತ್ತು.ಪೊಲೀಸ್ ಪೇದೆ ಪವನ್ ಸಾಂಗ್ಲೆ ಮೋಟಾರು ವಾಹನ ಇಲಾಖೆಗೆ ಸೇರಿದ್ದು, ಪ್ರಸ್ತುತ ಸಿಯಾನ್ ಪೊಲೀಸ್ ಠಾಣೆಯಲ್ಲಿ ನಿಯೋಜನೆಗೊಂಡಿದ್ದಾರೆ.

ಘಟನೆಯ ಬಗ್ಗೆ ತನಿಖೆಗೆ ಆದೇಶಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.ಸತ್ಯಾಸತ್ಯತೆಯನ್ನು ಪರಿಶೀಲಿಸಿ ಸಂಬಂಧಪಟ್ಟವರನ್ನು ವಿಚಾರಣೆಗೆ ಒಳಪಡಿಸುವ ವರೆಗೂ ಹುದ್ದೆಯಿಂದ ತೆಗೆದುಹಾಕಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ವಿವಿಧ ಅಕ್ರಮಗಳ ಹೊಣೆಯನ್ನು ಹೊತ್ತು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಒತ್ತಾಯಿಸಿ ಪ್ರತಿಭಟನೆ ತೀವ್ರಗೊಂಡಿದೆ. ವಿದ್ಯಾರ್ಥಿಗಳ ಮೇಲೆ ದೆಹಲಿ ಪೊಲೀಸರು ಕ್ರೂರವಾಗಿ ದೌರ್ಜನ್ಯ ಎಸಗಿ, ಥಳಿಸಿದ್ದಾರೆ. ಈ ವಿಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಈ ನಡುವೆ ಬೆಂಗಳೂರಿನ ಫ್ರೀಡಂ ಪಾರ್ಕ್, ಮುಂಬೈ ಸೇರಿದಂತೆ ದೇಶದ ಹಲವೆಡೆ ಪ್ರತಿಭಟನೆಗಳು ನಡೆಯುತ್ತಿವೆ.

# ಮಹಾರಾಷ್ಟ್ರ ವಿಧಾನ ಪರಿಷತ್ತ್‌ನ ಉಪಸಭಾಪತಿ ಸಚಿನ್ ಭಾವು ಅಹಿರೆ ಅವರನ್ನು ಅಭಿನಂದಿಸಿದ ಎನ್‌ಸಿಪಿ ಧುರೀಣ ಲಕ್ಷ್ಮಣ ಪೂಜಾರಿ ಚಿತ್ರಾಪು

**ಮುಂಬಯಿ, ಜು.23:** ಮಹಾರಾಷ್ಟ್ರ ವಿಧಾನ ಪರಿಷತ್ತ್‌ಗೆ ನೂತನವಾಗಿ ಚುನಾಯಿತರಾದ ಉಪ ಸಭಾಪತಿ ಸಚಿನ್ ಭಾವು ಅಹಿರೆ ಅವರನ್ನು ಬೃಹನ್ಮುಂಬಯಿ ಅಲ್ಲಿನ ಹಿರಿಯ ತುಳು-ಕನ್ನಡಿಗ ರಾಜಕೀಯ ಧುರೀಣ, ಮುಂಬಯಿ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ (ಶರದ್‌ಪವಾರ್), ಎನ್‌ಸಿಪಿ ಪಕ್ಷದ ಉತ್ತರ ಮಧ್ಯ ಜಿಲ್ಲಾ ನಿರೀಕ್ಷಕ ಲಕ್ಷ್ಮಣ ಸಿ.ಪೂಜಾರಿ ಚಿತ್ರಾಪು ಮತ್ತು ಬೃಹನ್ಮುಂಬಯಿ ಮಹಾನಗರ ಪಾಲಿಕಾ ಪರಿಮಂಡಳದ 3ಕೆ ಪೂರ್ವ ಸಮಿತಿ ಸದಸ್ಯ, ಮುಂಬಯಿ ವಾಯುವ್ಯ ಜಿಲ್ಲಾ ಎನ್‌ಸಿಪಿ (ಎಸ್‌ಪಿ) ಉಪಾಧ್ಯಕ್ಷ ನಿರಂಜನ್ ಲಕ್ಷ್ಮಣ್ ಪೂಜಾರಿ, ಮುಂಬಯಿ ಎನ್‌ಸಿಪಿ (ಎಸ್‌ಪಿ) ಯುವ ಅಧ್ಯಕ್ಷ ಅಮೋಲ್ ಮೆಥ್ಲೆ ಉಪಸ್ಥಿತರಿದ್ದು ಅಭಿನಂದಿಸಿದರು.



ಇಂದಿಲ್ಲಿ ಗುರುವಾರ ನರಿಮಾನ್ ಪಾಯಿಂಟ್‌ನಲ್ಲಿನ ವಿಧಾನ ಭವನದಲ್ಲಿರುವ ಸಭಾಪತಿ ಕಛೇರಿಯಲ್ಲಿ ನೂತನ ಉಪ ಸಭಾಪತಿ ಅವರನ್ನು ಭೇಟಿಗೈದು ಅವರಿಗೆ ಶಾಲು ಹೊದಿಸಿ, ಭಗವಾನ್ ವಿಠಲ-ರುಕ್ಮಿಣಿ ಅವರ ಪವಿತ್ರ್ಯಾತಾ ಮೂರ್ತಿಯನ್ನು ನೀಡಿ ಸನ್ಮಾನಿಸಲಾಗಿ ಸಾರ್ವಜನಿಕ ಹಿತಕ್ಕಾಗಿ ಸಚಿನ್ ಅಹಿರೆ ಕೈಗೊಂಡಿರುವ ಶ್ರೇಷ್ಠ ಹಾಗೂ ಯಶಸ್ವಿ ಕಾರ್ಯಗಳಿಗೆ ಶುಭಹಾರೈಸಿದರು.

ಬಳಿಕ ಪತ್ರಕರ್ತರನ್ನುದ್ದೇಶಿಸಿ ಮಾತನಾಡಿದ ಲಕ್ಷ್ಮಣ್ ಪೂಜಾರಿ, ತಮ್ಮ ರಾಜಕೀಯ ಪಯಣದುದ್ದಕ್ಕೂ, ಸ್ಥಿರತೆ, ಜನರೊಂದಿಗೆ ಬಲವಾದ ಸಂಪರ್ಕ, ಅಧ್ಯಯನಶೀಲ ನಾಯಕತ್ವ ಮತ್ತು ಸಾಮಾನ್ಯ ಜನರು ಎದುರಿಸುವ ಸಮಸ್ಯೆಗಳ ಬಗೆಗಿನ ಸಂವೇದನಾಶೀಲತೆಯ ಮೂಲಕ ಸಚಿನ್ ಅಹಿರೇ ಅವರು ಸಾರ್ವಜನಿಕ ವಲಯದಲ್ಲಿ ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಕಂಡುಕೊಂಡಿದ್ದಾರೆ. ಮಹಾರಾಷ್ಟ್ರ ವಿಧಾನ ಪರಿಷತ್ತ್‌ನ ಉಪಸಭಾಪತಿಯಂತಹ ಪ್ರತಿಷ್ಠಿತ ಹುದ್ದೆಯ ಮೂಲಕ ಅವರು ಪ್ರಜಾಪ್ರಭುತ್ವ ಮೌಲ್ಯಗಳನ್ನು ಮತ್ತಷ್ಟು ಬಲಪಡಿಸುತ್ತಾರೆ ಮತ್ತು ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಹೊಸ ದಿಕ್ಕಿನತ್ತ ಕೊಂಡೊಯ್ಯುತ್ತಾರೆ ಎಂಬ ದೃಢ ವಿಶ್ವಾಸ ನಮಗಿದೆ.

ಸಚಿನ್ ಅವರಿಗೆ ಅವರ ಮುಂದಿನ ಕಾರ್ಯಗಳಿಗೆ ಹೃತ್ಪೂರ್ವಕ ಶುಭಾಶಯಗಳನ್ನು ಕೋರುವೆ. ಅವರ ನಾಯಕತ್ವವು ಇನ್ನಷ್ಟು ಉಜ್ವಲವಾಗಿ ಬೆಳಗಲಿ ಹಾಗೂ ಅವರ ಈ ಸಮಾಜ ಸೇವೆಯು ಅಭೂತಪೂರ್ವ ಯಶಸ್ಸನ್ನು ಕಾಣಲಿ ಎಂದು ಪ್ರಾರ್ಥಿಸುತ್ತೇನೆ ಎಂದರು.

**ಸಂಸದೆ ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನೆಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಉತ್ತರ**

# ಉಡಾನ್ ಯೋಜನೆಯಡಿ ವಿಮಾನ ನಿಲ್ದಾಣಗಳ ಅಭಿವೃದ್ಧಿ: ಖಾಸಗಿ ಹೂಡಿಕೆಗೆ ಉತ್ತೇಜನ

**ನವದೆಹಲಿ, ಜು.23:** ದೇಶಾದ್ಯಂತ ವಿಮಾನ ನಿಲ್ದಾಣಗಳ ವಿಸ್ತರಣೆ ಮತ್ತು ಆಧುನೀಕರಣದ ಪರಿಣಾಮವಾಗಿ ವಾರ್ಷಿಕ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯವು 58 ಕೋಟಿಗೂ ಅಧಿಕಕ್ಕೆ ಏರಿಕೆಯಾಗಿದೆ. 2025-26ನೇ ಸಾಲಿನಲ್ಲಿ ಸುಮಾರು 42 ಕೋಟಿ ಪ್ರಯಾಣಿಕರು ದೇಶದ ವಿವಿಧ ವಿಮಾನ ನಿಲ್ದಾಣಗಳ ಸೇವೆ ಬಳಸಿದ್ದಾರೆ ಎಂದು ಕೇಂದ್ರ ಸರ್ಕಾರ ಮಾಹಿತಿ ನೀಡಿದೆ. ಲೋಕಸಭೆಯಲ್ಲಿ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರ ಪ್ರಶ್ನೆಗೆ ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯ ಉತ್ತರ ನೀಡಿದ್ದು, ಗರಿಷ್ಠ ಪ್ರಯಾಣದ ಅವಧಿಯಲ್ಲಿ ಉಂಟಾಗುವ ದಟ್ಟಣೆಯನ್ನು ನಿಯಂತ್ರಿಸಲು ವಿಮಾನ ನಿಲ್ದಾಣ ನಿರ್ವಾಹಕರು ಸಂಚಾರವನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಿದ್ದು, ಕ್ರಮ ಕೈಗೊಂಡು ಕಾರ್ಯಾಚರಣೆಯನ್ನು ಸುಗಮಗೊಳಿಸಲಾಗುತ್ತಿದೆ ಎಂದು ಸರ್ಕಾರ ತಿಳಿಸಿದೆ.

ವಿಕಸಿತ ಭಾರತ ಗುರಿಯಡಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳ ನಿರ್ಮಾಣ, RCS-UDAN ಯೋಜನೆಯಡಿ ಪ್ರಾದೇಶಿಕ ವಿಮಾನ ಸಂಪರ್ಕ ವಿಸ್ತರಣೆ, ಈಗಿರುವ ವಿಮಾನ ನಿಲ್ದಾಣಗಳ ಅಭಿವೃದ್ಧಿ ಹಾಗೂ ಸಾರ್ವಜನಿಕ-ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಖಾಸಗಿ ಹೂಡಿಕೆಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಉತ್ತರದಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ಸರ್ಕಾರ, ಪ್ರಯಾಣಿಕರ ಟರ್ಮಿನಲ್‌ಗಳು, ರನ್‌ವೇಗಳು, ಸರಕು ನಿರ್ವಹಣಾ ಸೌಲಭ್ಯಗಳು ಸೇರಿದಂತೆ ವಿಮಾನ ನಿಲ್ದಾಣಗಳ ಮೂಲಸೌಕರ್ಯವನ್ನು ಸಂಚಾರದ ಬೇಡಿಕೆ, ಕಾರ್ಯಾಚರಣೆಯ ಅಗತ್ಯತೆ, ಆರ್ಥಿಕ ಕಾರ್ಯಸಾಧ್ಯತೆ ಹಾಗೂ ತಾಂತ್ರಿಕ ಮಾನದಂಡಗಳ ಆಧಾರದ ಮೇಲೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಹಾಗೂ ಇತರೆ ವಿಮಾನ ನಿಲ್ದಾಣ ನಿರ್ವಾಹಕರು ಅಭಿವೃದ್ಧಿಪಡಿಸುತ್ತಿದ್ದಾರೆ ಎಂದು ತಿಳಿಸಿದೆ.

## 10 ವರ್ಷದಲ್ಲಿ 120 ಹೊಸ ತಾಣಗಳಿಗೆ ವಿಮಾನ ಸಂಪರ್ಕ

ಸರ್ಕಾರದ ಮಾಹಿತಿಯಂತೆ, ಇದುವರೆಗೆ 25 ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳಿಗೆ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಅವುಗಳಲ್ಲಿ 14 ವಿಮಾನ ನಿಲ್ದಾಣಗಳು ಕಾರ್ಯನಿರ್ವಹಿಸುತ್ತಿವೆ. 6 ಯೋಜನೆಗಳಿಗೆ ಸ್ಥಳ ಅನುಮೋದನೆ ನೀಡಲಾಗಿದ್ದು, 2026ರ ಜುಲೈ 10ರ ವೇಳೆಗೆ ಖಅಖ-ಗಆಂಓ ಯೋಜನೆಯಡಿ 95 ವಿಮಾನ ನಿಲ್ದಾಣಗಳು ಕಾರ್ಯಾರಂಭಿಸಿವೆ ಎಂದು ತಿಳಿಸಲಾಗಿದೆ. ಇದಲ್ಲದೆ, ಪರಿಷ್ಕೃತ ಗಆಂಓ ಯೋಜನೆಯಡಿ ಮುಂದಿನ 10 ವರ್ಷಗಳಲ್ಲಿ 120 ಹೊಸ ತಾಣಗಳಿಗೆ ವಿಮಾನ ಸಂಪರ್ಕ ಕಲ್ಪಿಸಿ, 4 ಕೋಟಿ ಪ್ರಯಾಣಿಕರಿಗೆ ಸೇವೆ ಒದಗಿಸುವ ಗುರಿಯನ್ನು ಕೇಂದ್ರ ಸರ್ಕಾರ ಹೊಂದಿರುವುದಾಗಿ ಸ್ಪಷ್ಟಪಡಿಸಿದೆ.

# ಭೂಮಿತಾಯಿಯ ಧನ್ಯತಾಭಾವದ ಆಚರಣೆ ಆಷಾಢೋತ್ಸವ: ಸುಜತಾ ಆರ್.ಶೆಟ್ಟಿ

**ಮುಂಬಯಿ, ಜು.23:** ಕರಾವಳಿ ಜನತೆಗೆ ಆಟಿ (ಆಷಾಢ) ತಿಂಗಳು ಮಹತ್ವದ್ದಾಗಿದೆ. ಪ್ರಕೃತಿಯೊಂದಿಗೆ ಅನಾದಿ ಬಾಂಧವ್ಯ ಹೊಂದಿರುವ ಕರಾವಳಿ ಜನತೆಗೆ ಆಟಿ ಸಂಸ್ಕೃತಿ ಇಂದು ಆಚರಣೆಯಾಗಿ ಉಳಿದಿದೆ. ಕುಟುಂಬ ವ್ಯವಸ್ಥೆ ಮತ್ತು ಐಕ್ಯತೆಗೆ ಆಟಿ ಆಚರಣೆ ಒಗ್ಗಟ್ಟು ರೂಢಿಸುವ ಸಂದೇಶವಾಗಿದೆ. ಆದ್ದರಿಂದ ತುಳುನಾಡ ಕೃಷಿ ಸಂಸ್ಕೃತಿಯ ನೆನಪು ಮತ್ತು ಕೃತಜ್ಞತೆ ಸಲ್ಲಿಸುವ, ಪರಿಸರದ ಜಾಗೃತಿ, ಕರಾವಳಿಯ ಜಾನಪದ ಕೃಷಿ ಜೀವನ, ನಿಸರ್ಗದ ಮೇಲಿನ ಗೌರವ ಮತ್ತು ಭೂಮಿತಾಯಿಗೆ ಸಲ್ಲಿಸುವ ಧನ್ಯತಾಭಾವ ಈ ಆಚರಣೆಯಿಂದ ನಡೆಸಬೇಕು. ಆ ಮೂಲಕ ಪರಿಸರ ಸಂರಕ್ಷಣೆ ಮತ್ತು ಗಿಡಮೂಲಿಕೆಗಳ ಜತನಕ್ಕೆ ನಾವೆಲ್ಲರೂ ಜಾಗೃತರಾಗ ಬೇಕು. ಸಂರಕ್ಷಣೆಯ ಸಂದೇಶವನ್ನು ಈ ವೇದಿಕೆ ಮೂಲಕ ನಾವು ಭಾವೀ ಜನಾಂಗಕ್ಕೆ ತಿಳಿಸಲು ಸ್ಥಳಿಯ ಪರಿಸರದ ಜನತೆಯೊಂದಿಗೆ ನಮ್ಮ ಕನ್ನಡ ಸಂಘವು ಇದನ್ನು ಆಚರಿಸಲು ಸಂತಸ ಪಡುತ್ತಿದೆ ಎಂದು ಕನ್ನಡ ಸಂಘ ಸಾಂತಾಕ್ರೂಜ್ ಸಂಸ್ಥೆಯು ಸಂಘದ ಅಧ್ಯಕ್ಷೆ ಸುಜತಾ ಆರ್.ಶೆಟ್ಟಿ ತಿಳಿಸಿದರು.

ಇಂದಿಲ್ಲಿ ಬುಧವಾರ ರಾತ್ರಿ ಬಾಂದ್ರಾ ಪೂರ್ವದ ಖೇರ್‌ವಾಡಿ ಅಲ್ಲಿನ ರಾಜಯೋಗ್ ಸಭಾಗೃಹದಲ್ಲಿ ಕನ್ನಡ ಸಂಘ ಸಾಂತಾಕ್ರೂಜ್ ಸಂಸ್ಥೆಯು ಸಂಘದ ಅಧ್ಯಕ್ಷೆ ಸುಜತಾ ಆರ್.ಶೆಟ್ಟಿ ಅಧ್ಯಕ್ಷತೆ ವಹಿಸಿ ದೀಪಹಚ್ಚಿ 2026ನೇ ವಾರ್ಷಿಕ ಆಷಾಢೋತ್ಸಕ್ಕೆ ಚಾಲನೆಯನ್ನಿಡಿ ಮಾತನಾಡಿದರು.

ಅತಿಥಿ ಅಭ್ಯಾಗತರುಗಳಾಗಿ ಬಿಲ್ಲವರ ಅಸೋಸಿಯೇಶನ್ ಮುಂಬಯಿ ಅಧ್ಯಕ್ಷ ಹರೀಶ್ ಜಿ.ಅಮೀನ್, ಉಪಾಧ್ಯಕ್ಷರುಗಳಾದ ಪುರುಷೋತ್ತಮ ಎಸ್.ಕೋಟ್ಯಾನ್, ಮೋಹನ್ ಸಿ.ಕೋಟ್ಯಾನ್, ಬಿಲ್ಲವ ಛೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀ ಕಾರ್ಯಾಧ್ಯಕ್ಷ ಎನ್.ಟಿ ಪೂಜಾರಿ, ಬಂಟ್ಸ್ ಸಂಘ ಮುಂಬಯಿ ಇದರ ಮಹಿಳಾ ವಿಭಾಗದ ಜೊತೆ ಕೋಶಾಧಿಕಾರಿ ರತ್ನಾ ಪಿ.ಶೆಟ್ಟಿ, ಉದ್ಯಮಿಗಳಾದ ಜಯಶಂಕರ್ ಶೆಟ್ಟಿ, ಮೋಹನ್‌ದಾಸ್ ಎಸ್.ಶೆಟ್ಟಿ, ಡಾ। ಸರಸ್ವತಿ ಶೆಟ್ಟಿ, ಡಾ। ಶಶಾಂಕ್ ಕಿಶೋರ್, ಕನ್ನಡ ಸಂಘ ಸಾಂತಾಕ್ರೂಜ್‌ನ ಗೌರವಾಧ್ಯಕ್ಷ ಎಲ್.ವಿ ಅಮೀನ್, ಸೇರಿದಂತೆ ಅನೇಕ ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.




ಸಂಘದ ಸದಸ್ಯ ಮಹಿಳೆಯರೇ ತಿಂಡಿ ತಿನಿಸುಗಳ ತಯಾರಿ ಮಾಡಿದ್ದ ಕಾರಣ ಇದು ಮಹಿಳಾ ಪ್ರಧಾನ ಕಾರ್ಯಕ್ರಮ ಅನ್ನಬಹುದು. ಸಂಸ್ಕೃತಿಯ ಜೋಪಾನ, ಶಿಕ್ಷಣದ ಕಾಳಜಿವನ್ನಿರಿಸಿ ಸ್ಥಾನೀಯವಾಗಿ ಈ ಕನ್ನಡ ಸಂಘ ತುಂಬಾ ಶ್ರಮಿಸುತ್ತಿದೆ ಎಂದು ಎನ್.ಟಿ ಪೂಜಾರಿ ತಿಳಿಸಿದರು. ದುಷ್ಟಶಕ್ತಿಗಳ ನಿವಾರಣೆಯ ಸಂಕೇತವಾಗಿ ಆಚರಿಸುವ ಆಷಾಡವು ಸಾಂಪ್ರದಾಯಿಕ ಆಚರಣೆ ಆಗಿದೆ. ನಮ್ಮ ಬಾಲ್ಯಾವಸ್ಥೆಯ ದಿನಗಳನ್ನು ಸಾಂಘಿಕವಾಗಿ ಆಚರಿಸುವ ಅವಕಾಶ ಈ ಕನ್ನಡ ಸಂಘ ಮಾಡುತ್ತಿದೆ. ಕರಾವಳಿಯ ಜನಪದೀಯ ನಂಬಿಕೆ ನೆನಪಿಸಿಕೊಂಡು ಆಚರಿಸಿಕೊಳ್ಳಲು ಇದೊಂದು ಅವಕಾಶ ಆಗಿದೆ. ಆ ದಿನಗಳಲ್ಲಿ ನಮಗೆ ಮನೆಯೇ ಔಷಧಾಲಯವಾಗಿತ್ತು. ಆಹಾರ ವೈವಿಧ್ಯ, ಪಾಕಸಂಸ್ಕೃತಿ ಹಾಗೂ ಆರೋಗ್ಯಕರ ತಿನುಸುಗಳನ್ನು ಸವಿಯುವ ಕಾಲ ಅದಾಗಿತ್ತು. ಕರಾವಳಿಯ ವೈಜ್ಞಾನಿಕ ಆಹಾರ ಪದ್ಧತಿಯನ್ನು ಬಿಂಬಿಸುವ ಆ ದಿನಗಳನ್ನು ಸದ್ಯ ಸಂಘಸಂಸ್ಥೆಗಳ ಮೂಲಕವಾದರೂ ಆಚರಿಸಿಕೊಳ್ಳುವ ನಾವುಗಳು ಭಾಗ್ಯವಂತರು ಎಂದು ಎಲ್.ವಿ ಅಮೀನ್ ನುಡಿದರು.

ಸಂಘ-ಸಂಸ್ಥೆಗಳಲ್ಲಿ 'ಆಟಿ ಕೂಟ' ಆಚರಿಸುವುದರಿಂದ ಯುವಪೀಳಿಗೆಗೆ ಪ್ರೋತ್ಸಾಹ ನೀಡುವಂತಾಗುವುದು. ಶೈಕ್ಷಣಿಕ ಸಂಸ್ಥೆಗಳಲ್ಲೂ ಹಾಗೂ ಸಾಂಸ್ಕೃತಿಕ ವೇದಿಕೆಗಳಲ್ಲಿ 'ಆಟಿಡೊಂಜಿ ದಿನ' (ಆಟಿಯಲ್ಲೊಂದು ದಿನ) ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸಿ, ಯುವಜನತೆಗೆ ಕರಾವಳಿ ಪಾಕವಿಧಾನ ಮತ್ತು ಜಾನಪದ ಕಲೆಗಳ ಪರಿಚಯ ಮಾಡಿಕೊಡುವುದು ಉತ್ತಮಕ್ರಮವಾಗಿದೆ. ಆದ್ದರಿಂದ ಆಟಿಯ ಸುಖದ ದಿನ ಬೇರೊಂದಿಲ್ಲ. ಇದು ಸಂಬಂಧಗಳನ್ನು ಕೂಡಿಸುವ ಭಾಗ್ಯದಾಯಕ ತಿಂಗಳೂ ಹೌದು ಎಂದು ಕನ್ನಡ ಸಂಘದ ಉಪಾಧ್ಯಕ್ಷ ದೊಡ್ಡಗುತ್ತು ಭುಜಂಗ ಆರ್.ಶೆಟ್ಟಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಸಂಘದ ಪ್ರೋತ್ಸಹಕರಾದ ಸೂರಜ್ ಸದಾನಂದ ಸಫಲಿಗ, ರತ್ನಾ ಪಿ.ಶೆಟ್ಟಿ, ಪ್ರಮೋದಾ ಎಸ್.ಶೆಟ್ಟಿ, ವಜ್ರಾ ಪೂಂಜ, ಸುಚಿತಾ ಶೆಟ್ಟಿ, ಸುಧಾ ಎಲ್.ಅಮೀನ್, ಹರಿಣಿ ಶೆಟ್ಟಿ, ಸುಜತಾ ಶೆಟ್ಟಿ, ಉಷಾ ವಿ.ಶೆಟ್ಟಿ, ಪ್ರಸನ್ನ ಶೆಟ್ಟಿ, ದೇವೇಂದ್ರ ಬಂಗೇರಾ, ಕನ್ನಡ ಸಂಘದ ಗೌ। ಪ್ರ। ಕಾರ್ಯದರ್ಶಿ ಜಯ ವಿ.ಪೂಜಾರಿ ಗೌರವ ಕೋಶಾಧಿಕಾರಿ ಸುಧಾಕರ್ ಉಚ್ಚಿಲ್, ಜತೆ ಕಾರ್ಯದರ್ಶಿ ಚಂದ್ರಹಾಸ ಜೆ.ಕೋಟ್ಯಾನ್, ಜತೆ ಕೋಶಾಧಿಕಾರಿ ಬನ್ನಂಜೆ ರವೀಂದ್ರ ಅಮೀನ್, ಶಿಕ್ಷಣ ಸಮಿತಿ ಕಾರ್ಯಾಧ್ಯಕ್ಷ ವಿಜಯಕುಮಾರ್ ಕೆ.ಕೋಟ್ಯಾನ್, ಕಾರ್ಯದರ್ಶಿ ಶಕಿಲಾ ಪಿ.ಶೆಟ್ಟಿ, ಸಲಹಾ ಸಮಿತಿ ಸದಸ್ಯ ಭೋಜ ಎನ್.ಶೆಟ್ಟಿ ಸೇರಿದಂತೆ ಸಂಘದ ವಿಶೇಷ ಆಮಂತ್ರಿತರು, ಸದಸ್ಯರುಗಳನೇಕರು ಹಾಜರಿದ್ದರು.

ಆರಂಭದಲ್ಲಿ ಕಷಾಯ, ಬೆಲ್ಲ ನೀಡಿ ಸದಸ್ಯೆಯರು ಸಂಪ್ರದಾಯಿಕವಾಗಿ ಸುಖಾಗಮನ ಬಯಸಿದರು. ಪವಿತ್ರ ದೇವಾಡಿಗ ಪ್ರಾರ್ಥನೆಯನ್ನಾಡಿದರು. ಸುಜತಾ ಶೆಟ್ಟಿ ಮತ್ತು ಎಲ್.ವಿ ಅಮೀನ್ ಗಣ್ಯರಿಗೆ ಪುಷ್ಪಗುಪ್ಛ ನೀಡಿ ಗೌರವಿಸಿದರು. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಿತಿ ಕಾರ್ಯಾಧ್ಯಕ್ಷೆ ವನಿತಾ ವೈ.ನೋಂದಾ ಪ್ರಸ್ತಾವನೆಗೈದು ಕಾರ್ಯಕ್ರಮ ನಿರೂಪಿಸಿದರು. ಜಯ ವಿ.ಪೂಜಾರಿ ಸ್ವಾಗತಿಸಿ ವಂದಿಸಿದರು. ಸಂಘದ ಮಹಿಳಾ ಸದಸ್ಯೆಯರು ಆಷಾಡದ ಸಾಂಪ್ರದಾಯಿಕ ಶೈಲಿಯ ಖಾದ್ಯಗಳನ್ನು ಸಿದ್ಧಪಡಿಸಿ ನೆರೆದವರಿಗೆ ರಸದೌತಣದೊಂದಿಗೆ ಉಣಬಡಿಸಿದರು.

ಎಫ್‌ಕೆಸಿಸಿಐ ಜಾಗತಿಕ ಸಿಎಸ್‌ಆರ್ ಮತ್ತು ಸುಸ್ಥಿರ ಅಭಿವೃದ್ಧಿ ಶೃಂಗಸಭೆಯಲ್ಲಿ ಭಾಗಿ

# 10 ಸಾವಿರ ಕೋಟಿ ರೂ. ಸಿಎಸ್‌ಆರ್ ನಿಧಿ ಗ್ರಾಮೀಣ ಭಾಗದ ಶಿಕ್ಷಣಕ್ಕೆ ವಿನಿಯೋಗವಾಗಲಿ: ಸಿಎಂ ಡಿ.ಕೆ. ಶಿವಕುಮಾರ್ ಕರೆ



**ಬೆಂಗಳೂರು, ಜು.23:** ರಾಜ್ಯದಲ್ಲಿ ಸುಮಾರು 10 ಸಾವಿರ ಕೋಟಿಯಷ್ಟು ಸಿಎಸ್‌ಆರ್ ನಿಧಿ ಇದ್ದು, ಇದರ ಪ್ರತಿಯೊಂದು ಪೈಸೆ ಗ್ರಾಮೀಣ ಭಾಗದ ಪ್ರಾಥಮಿಕ ಶಿಕ್ಷಣಕ್ಕೆ ವಿನಿಯೋಗವಾಗಬೇಕು ಎಂದು ಸಿಎಂ ಡಿ ಕೆ ಶಿವಕುಮಾರ್ ಕರೆ ನೀಡಿದರು.

ಕೆ.ಜಿ ರಸ್ತೆಯಲ್ಲಿರುವ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಯ ಎಂ.ವಿ ಸಭಾಂಗಣದಲ್ಲಿ ಎಫ್‌ಕೆಸಿಸಿಐ ಜಾಗತಿಕ ಸಿಎಸ್‌ಆರ್ ಮತ್ತು ಸುಸ್ಥಿರ ಅಭಿವೃದ್ಧಿ ಶೃಂಗಸಭೆಯನ್ನು ಶಿವಕುಮಾರ್ ಗುರುವಾರ ಉದ್ಘಾಟಿಸಿ ಮಾತನಾಡಿದರು.

ನಾವು ಅಧಿಕಾರಕ್ಕೆ ಬಂದ ಬಳಿಕ ನಮ್ಮ ಸಚಿವರ ಜೊತೆ ಚರ್ಚೆ ಮಾಡಿ, ಸಿಎಸ್‌ಆರ್ ನಿಧಿಯನ್ನು ಶಿಕ್ಷಣ ಕ್ಷೇತ್ರಕ್ಕೆ ಬಳಸಲು ತೀರ್ಮಾನಿಸಿದ್ದೇವೆ. ಕೆಲವರು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಆದರೆ 50% ಉದ್ಯಮಿಗಳು ಈ ಸಿಎಸ್‌ಆರ್ ನಿಧಿ ದುರುಪಯೋಗ ಮಾಡುತ್ತಿದ್ದಾರೆ. ಹೀಗಾಗಿ ಪ್ರತ್ಯೇಕ ಅಧಿಕಾರಿಗಳ ತಂಡ ನೇಮಿಸಿ ನಿಧಿಯನ್ನು ಎಲ್ಲೆಲ್ಲಿ ಬಳಸಲಾಗುತ್ತಿದೆ ಎಂದು ಪರಿಶೀಲನೆ ಮಾಡಲಾಗುವುದು ಎಂದರು.

ಸಿಎಸ್‌ಆರ್ ನಿಧಿಯನ್ನು ಮೊದಲು ಪ್ರಾಥಮಿಕ ಶಿಕ್ಷಣಕ್ಕೆ ವಿನಿಯೋಗಿಸಿ, ನಂತರ ಆರೋಗ್ಯ ಕ್ಷೇತ್ರದತ್ತ ಗಮನಹರಿಸಬಹುದು. ನಾವು ಈ ವಿಚಾರವಾಗಿ ನೀತಿ ರೂಪಿಸಿ, ಎಲ್ಲಾ ಕೈಗಾರಿಕೋದ್ಯಮಿಗಳ ಜೊತೆ ಚರ್ಚೆ ಮಾಡಲಾಗುವುದು ಎಂದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್ ಕೆಸಿಸಿಐ) ಮಹಾರಾಜರ ಕಾಲದಿಂದ ಇಂದಿನವರೆಗೂ ಎಲ್ಲರನ್ನು ಒಟ್ಟಾಗಿ ಮುನ್ನಡೆಸಿಕೊಂಡು ಬಂದು ಅತ್ಯುತ್ತಮ ಕೆಲಸ ಮಾಡುತ್ತಿದ್ದು, ಕರ್ನಾಟಕ ಹಾಗೂ ಭಾರತದ ಪ್ರಗತಿಗೆ ತನ್ನದೇ ಆದ ಕೊಡುಗೆ ನೀಡಿದೆ ಎಂದು ತಿಳಿಸಿದರು.

**ನಿಮ್ಮ ಹೆಸರಲ್ಲೇ ಶಾಲೆ ಕಟ್ಟಡ ನಿರ್ಮಿಸಿ**

ಗ್ರಾಮೀಣ ಭಾಗದ ಮಕ್ಕಳಿಗೆ ನಗರ ಪ್ರದೇಶದಂತೆ ಗುಣಮಟ್ಟದ ಶಿಕ್ಷಣ ಸಿಗಬೇಕು. ಹೀಗಾಗಿ ನೀತಿ ರೂಪಿಸುತ್ತಿದ್ದು, ಎಲ್ಲರೂ ಸಿಎಸ್‌ಆರ್ ನಿಧಿಯನ್ನು ಪ್ರಾಥಮಿಕ ಶಿಕ್ಷಣಕ್ಕೆ ವಿನಿಯೋಗಿಸಬೇಕು. ಸಿಎಸ್‌ಆರ್ ನಿಧಿಯಲ್ಲಿ ಶಾಲೆಗಳನ್ನು ಗ್ರಾಮೀಣ ಭಾಗದಲ್ಲಿ ನಿರ್ಮಾಣ ಮಾಡಬೇಕು. ನಮ್ಮ ಸರ್ಕಾರ ರಾಜ್ಯದಲ್ಲಿ 2 ಸಾವಿರ ಜಾಗಗಳನ್ನು ಗುರುತಿಸಿದ್ದು, ಪ್ರತಿ ಕಾರ್ಪೊರೇಟ್ ಸಂಸ್ಥೆ ಈ ಜಾಗಗಳಲ್ಲಿ ಅತ್ಯುತ್ತಮ ಮೂಲಸೌಕರ್ಯವಿರುವ ಶಾಲೆಗಳನ್ನು ನಿರ್ಮಾಣ ಮಾಡಬೇಕು. ನೀವು ನಮಗೆ ಹಣ ನೀಡಬೇಡಿ, ನೀವೇ ಹಣ ಹಾಕಿ ಶಾಲೆ ನಿರ್ಮಿಸಿ. ಶಾಲೆಗೆ ನಿಮ್ಮ ಸಂಸ್ಥೆಯ ಹೆಸರನ್ನು ಸೇರಿಸಿ. ಟೊಯೋಟಾ ಬೆಂಗಳೂರಿನಲ್ಲಿ 7–8 ಶಾಲೆಗಳನ್ನು ನಿರ್ಮಿಸುತ್ತಿವೆ. ಟೋಯೋಟಾ ದವರು ಪ್ರತಿ ಶಾಲೆಗೆ 10–15 ಕೋಟಿ ಹಣ ವೆಚ್ಚ ಮಾಡಿ ನಿರ್ಮಿಸುತ್ತಿದ್ದಾರೆ ಉಪಆಯುಕ್ತರು ನಿಮಗೆ ಜಾಗ ನೀಡುತ್ತಾರೆ. ಆ ಜಾಗದಲ್ಲಿ ನೀವು ಶಾಲೆ ನಿರ್ಮಿಸಬಹುದು. ನಿಮಗೆ ಒಬ್ಬರಿಂದಲೇ ಸಂಪೂರ್ಣ ಶಾಲೆಗಳನ್ನು ನಿರ್ಮಾಣ ಮಾಡಲು ಸಾಧ್ಯವಾಗದಿದ್ದರೆ, ಶಾಲೆಯ ಕೆಲವೊಂದು ಭಾಗವನ್ನು ನಿರ್ಮಾಣ ಮಾಡಲು ಅವಕಾಶ ಮಾಡಿಕೊಡಲಾಗುವುದು. ಇದಕ್ಕಾಗಿಯೇ ಒಂದು ವೇದಿಕೆ ರೂಪಿಸಲಾಗುವುದು ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

**ಸರ್ಕಾರಿ ಶಾಲೆ ದತ್ತು ಪಡೆಯದಿದ್ದರೆ ಶುಲ್ಕಕ್ಕೆ ಮಿತಿ ಹೇರಿಕೆ**

ಸರ್ಕಾರಿ ಶಾಲೆಗಳನ್ನು ನಗರದ ಖಾಸಗಿ ಶಾಲೆಗಳು ದತ್ತು ಪಡೆಬೇಕು, ಪಡೆಯದಿದ್ದರೆ ಆ ಶಾಲೆಗಳಿಗ ಶುಲ್ಕಕ್ಕೆ ಮಿತಿ ಹಾಕಲಾಗುವುದು ನಗರ ಪ್ರದೇಶಗಳಲ್ಲಿ 50 ಸಾವಿರಕ್ಕಿಂತ ಹೆಚ್ಚು ಶುಲ್ಕ ಪಡೆಯುತ್ತಿರುವ ಶಾಲೆಗಳು ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳನ್ನು ಕಡ್ಡಾಯವಾಗಿ ದತ್ತು ಪಡೆಯಬೇಕು. ಒಂದು ವೇಳೆ ಈ ಶಾಲೆಗಳು ದತ್ತು ಪಡೆಯದೇ ಇದ್ದರೆ ಈ ಶಾಲೆಗಳ ಶುಲ್ಕಗಳಿಗೆ ಮಿತಿ ಹಾಕಲಾಗುವುದು. ಈ ಶಾಲೆಗಳು ಸರ್ಕಾರಿ ಶಾಲೆಗಳ ಕಟ್ಟಡ ನಿರ್ಮಾಣಕ್ಕೆ ಹಣ ಹಾಕುವುದು ಬೇಡ, ಅವರು ಕೇವಲ ಬೋಧಕರನ್ನು ನಿಯೋಜಿಸಿದರೆ ಸಾಕು. ನಮ್ಮ ರಾಜ್ಯದಲ್ಲಿ ಶಿಕ್ಷಕರ ಕೊರತೆ ಇದೆ. ಸರ್ಕಾರಿ ಶಾಲಾ ಶಿಕ್ಷಕರಿಗೆ ನಾವು ಖಾಸಗಿ ಶಾಲೆಗಳಿಗಿಂತ ಉತ್ತಮ ವೇತನ ನೀಡುತ್ತಿದ್ದೇವೆ. ನೀವೆಲ್ಲರೂ ಇದರ ಭಾಗವಾಗಬೇಕು. ನಾನು ಕೂಡ ಮೂರು ಶಾಲೆ ನಡೆಸುತ್ತಿದ್ದೇನೆ. ನಮ್ಮ ಶಾಲೆಗಳು ಕೂಡ ಗ್ರಾಮೀಣ ಭಾಗದ ಸರ್ಕಾರಿ ಶಾಲೆ ದತ್ತು ಪಡೆಯಬೇಕು ಎಂದು ನನ್ನ ಮಗಳಿಗೆ ತಿಳಿಸಿದ್ದೇನೆ. ಆಕೆ ಮೂರು ಶಾಲೆ ದತ್ತು ಪಡೆದಿದ್ದಾರೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.



ನೀತಿ ಆಯೋಗದ ಸದಸ್ಯ ಕೆ.ರಾಜು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ವಿಧಾನಸೌಧದಲ್ಲಿ ಗುರುವಾರ ಭೇಟಿಮಾಡಿ ಸಮಾಲೋಚನೆ ನಡೆಸಿದರು. ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ರಾಜೇಂದ್ರಕುಮಾರ್ ಕಟಾರಿಯ ಮತ್ತಿತರ ಅಧಿಕಾರಿಗಳು ಉಪಸ್ಥಿತರಿದ್ದರು.



ಬೆಳಗಾವಿ ಕರ್ನಾಟಕ ಲಾ ಸೊಸೈಟಿ ಅಧ್ಯಕ್ಷ ಪ್ರದೀಪ್ ಎಸ್. ಸಾಹುಕಾರ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ವಿಧಾನಸೌಧದ ಕಚೇರಿಯಲ್ಲಿ ಗುರುವಾರ ಭೇಟಿಯಾಗಿ ಅಭಿನಂದಿಸಿದರು. ಡಾ. ಡಿ.ಎಂ.ಎಸ್. ಕುಮಾರ್, ಡಾ. ನವೀನ್ ಕುಮಾರ್ ಜತೆಗಿದ್ದರು.

## ಪಿಎಂ ಇ-ಡ್ರೈವ್ ಯೋಜನೆ ಅನುಷ್ಠಾನ- ಸಿಪಿಒಗಳ ಸಭೆ ಕರೆದ ಬೆಸ್ಕಾಂ

**ಬೆಂಗಳೂರು, ಜು.23:** ಪಿಎಂ ಇ–ಡ್ರೈವ್ ಯೋಜನೆಯ ಕ್ಯಾಟಗರಿ–ಸಿ ಅಡಿಯಲ್ಲಿ ರಾಜ್ಯದಲ್ಲಿ ಸಾರ್ವಜನಿಕ ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಸಂಬಂಧಿಸಿದಂತೆ ಬೆಸ್ಕಾಂ, ಚಾರ್ಜ್ ಪಾಯಿಂಟ್ ಅಪರೇಟರ್‌ಗಳ ಜೊತೆ (ಸಿಪಿಒ) ಜುಲೈ 27 (ಸೋಮವಾರ) ಬೆಸ್ಕಾಂ ನಿಗಮ ಕಚೇರಿಯಲ್ಲಿ ಸಮಾಲೋಚನಾ ಸಭೆ ನಡೆಸಲಿದೆ. ಇವಿ ಬಳಕೆದಾರರಿಗೆ ಇವಿ ಮೂಲಭೂತ ಸೌಲಭ್ಯ ಕಲ್ಪಿಸಲು ರಾಜ್ಯದ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿರುವ ಬೆಸ್ಕಾಂ ಸಿಪಿಒಗಳ ಜೊತೆ ಈ ಕುರಿತು ವಿಸ್ತೃತ ಚರ್ಚೆ ನಡೆಸಲಿದ್ದು, ಸಭೆ ಸೋಮವಾರ ಬೆಳಗ್ಗೆ 11 ಗಂಟೆಯಿಂದ ಬೆಳಕು ಭವನದ ಮೂರನೇ ಮಹಡಿಯಲ್ಲಿ ನಡೆಯಲಿದೆ. ಆಸಕ್ತ ಸಿಪಿಒಗಳು ಸಭೆಯಲ್ಲಿ ಭಾಗವಹಿಸಿ ಇವಿ ಮೂಲಭೂತ ಸೌಲಭ್ಯ ಕಲ್ಪಿಸುವ ಕುರಿತು ಅಗತ್ಯ ಸಲಹೆ–ಸೂಚನೆ ನೀಡಲು ಬೆಸ್ಕಾಂ ವಿನಂತಿಸಿದೆ.

## ಫುಟ್‌ಪಾತ್‌ನಲ್ಲಿ ಬೈಕ್ ಓಡಿಸಿದರೆ ದಂಡ ಸಚಿವರ ಹೇಳಿಕೆಗೆ ಬಿ. ಶ್ರೀಪತಿರಾವ್ ವ್ಯಂಗ್ಯ

**ಬೆಂಗಳೂರು, ಜು.23;** ಪಾದಚಾರಿ ಮಾರ್ಗದಲ್ಲಿ ಬೈಕ್ ಓಡಿಸಿದರೆ ದಂಡದ ಮೊತ್ತವನ್ನು 5,000ಕ್ಕೆ ಏರಿಸುವಂತೆ ಸಾರಿಗೆ ಸಚಿವರಿಗೆ ಪತ್ರ ಬರೆಯುತ್ತೇನೆಂದು ಹೇಳಿದ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣಬೈರೇಗೌಡರ ಮಾತು ಕೇಳಿ ಆಶ್ಚರ್ಯವಾಯಿತು ಎಂದು ಹಿರಿಯ ರಾಜಕಾರಣಿ ಬಿ. ಶ್ರೀಪತಿರಾವ್ ವ್ಯಂಗ್ಯವಾಡಿದ್ದಾರೆ.

ಮೋಟಾರ್ ವಾಹನ ಕಾಯ್ದೆ ಕೇಂದ್ರ ಸರ್ಕಾರದ ಕಾನೂನು. ಏನಾದರೂ ತಿದ್ದುಪಡಿಯಾಗಬೇಕಿದ್ದರೆ ಕೇಂದ್ರ ಸರ್ಕಾರವನ್ನೇ ಕೇಳಬೇಕು. ರಾಜ್ಯ ಸಾರಿಗೆ ಸಚಿವರು ನಿಮ್ಮ ಶಿಫಾರಸು ಏನಾದರೂ ಇದ್ದರೆ ಅದನ್ನು ಕೇಂದ್ರಕ್ಕೆ ಕಳುಹಿಸಬಲ್ಲರೇ ವಿನಃ ದಂಡ ಹೆಚ್ಚಿಸಲಾರರು ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ದಂಡ ಹೆಚ್ಚಿಸಿದರೆ ಜನರಲ್ಲಿ ಕಾನೂನಿನ ಭಯ ಉಂಟಾಗುತ್ತದೆ ಎಂದು ಹೇಳುವ ನೀವು – ಪ್ರತೀ ಆರು ತಿಂಗಳಿಗೊಮ್ಮೆ ಟ್ರಾಫಿಕ್ ಉಲ್ಲಂಘನೆಯ ದಂಡದ ಮೊತ್ತದಲ್ಲಿ ಶೇಕಡ 50ರಂತೆ ರಿಯಾಯಿತಿ ಘೋಷಿಸಿ ಜನರಿಗೆ ಇನ್ನೂ ಹೆಚ್ಚು ಹೆಚ್ಚು ಕಾನೂನು ಉಲ್ಲಂಘನೆ ಮಾಡುವಂತೆ ಪ್ರಚೋದಿಸುವ ತಮ್ಮದೇ ಸರ್ಕಾರದ ನಿಲುವನ್ನು ಪ್ರತಿಭಟಿಸುವ ಧೈರ್ಯ ವಿದೆಯೇ. ಸಚಿವರೇ, ಕುಣಿಯಲಾರದವರೂ ಕ್ಯಾಮೆರಾ ಎದುರು ಇದ್ದಾಗ ಮಹಾನ್ ನೃತ್ಯಗಾರರಂತೆ ವರ್ತಿಸುತ್ತಾರೆ. ಭಾಷಣಕಾರರಿಗೆ ಮೆದುಳಿನ ಸಂಪರ್ಕ ತಪ್ಪಿ ಹೋಗುತ್ತದೆ. ಗಾಳಿಯಲ್ಲಿ ಹಾರಿ ಹೋಗಿ ಇನ್ನಿಲ್ಲದಂತೆ ಆಗಿ ಹೋಗುವ ಮಾತುಗಳಲ್ಲೂ ಒಂದಷ್ಟು ತೂಕವಿರಲಿ ಎಂದು ಬಿ ಶ್ರೀಪತಿರಾವ್ ಕಿವಿ ಮಾತು ಹೇಳಿದ್ದಾರೆ.

## ಪತ್ರಿಕೋದ್ಯಮದಲ್ಲಿ ನೈತಿಕತೆ ತರಲು ಮಾಧ್ಯಮ ಆಯೋಗ ಅಥವಾ ಒಂಬುಡ್ಸ್ ಮನ್ ರಚಿಸಿ: ಮುಖ್ಯಮಂತ್ರಿಗೆ ಎಂ.ಎ.ಪೊನ್ನಪ್ಪ ಮನವಿ



**ಬೆಂಗಳೂರು, ಜು.23:** ಮುದ್ರಣ. ದೂರದರ್ಶನ, ಡಿಜಿಟಲ್ ಸುದ್ದಿ, ಆನ್‌ಲೈನ್ ಪ್ರಕಟಣೆಗಳು ಮತ್ತು ಸಾಮಾಜಿಕ ಮಾಧ್ಯಮ ಸೇರಿದಂತೆ ಎಲ್ಲಾ ವೇದಿಕೆಗಳಲ್ಲಿ ಮಾಧ್ಯಮ ವೃತ್ತಿಪರರ ನಡವಳಿಕೆಯಲ್ಲಿ ಹೊಣೆಗಾರಿಕೆಯನ್ನು ಮೇಲ್ವಿಚಾರಣೆ ಮಾಡಲು ಮಾಧ್ಯಮ ಆಯೋಗ ಅಥವಾ ಒಂಬುಡ್ಸ್ ಮನ್ ಸ್ಥಾಪಿಸಬೇಕೆಂದು ಹಿರಿಯ ಪತ್ರಕರ್ತರ ವೇದಿಕೆ ಅಧ್ಯಕ್ಷ ಎಂ.ಎ. ಪೊನ್ನಪ್ಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ.

ನಗರದಲ್ಲಿಂದು ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿರುವ ಎಂ.ಎ. ಪೊನ್ನಪ್ಪ ಮಾಧ್ಯಮ ಕ್ಷೇತ್ರದ ಮೇಲ್ವಿಚಾರಣೆ ಮಾಡಲು ಕಾನೂನು, ಶೈಕ್ಷಣಿಕ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಪ್ರಾತಿನಿಧ್ಯದೊಂದಿಗೆ ನಿವೃತ್ತ ಹೈಕೋರ್ಟ್ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಸ್ವತಂತ್ರ ಮಾಧ್ಯಮ ಆಯೋಗವನ್ನು (ಮಾಧ್ಯಮ ಒಂಬುಡ್ಸ್ ಮನ್) ಸ್ಥಾಪಿಸುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ಇಂತಹ ಶಾಸನಬದ್ಧ, ಸ್ವಾಯತ್ತ ಸಂಸ್ಥೆಯು ನೈತಿಕ ಪತ್ರಿಕೋದ್ಯಮವನ್ನು ಎತ್ತಿಹಿಡಿಯಲು, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು ಮತ್ತು ಸ್ವಾತಂತ್ರ್ಯದ ಜವಾಬ್ದಾರಿತನವನ್ನು ಖಚಿತಪಡಿಸಿಕೊಳ್ಳಲು, ತಪ್ಪು ಮಾಹಿತಿ, ಪಾವತಿ ಸುದ್ದಿ, ದ್ವೇಷ ಭಾಷಣ, ಅನೈತಿಕ ವರದಿಗಾರಿಕೆ ತಡೆಯಲು ನಿಷ್ಪಕ್ಷಪಾತವಾಗಿ ಮಾಧ್ಯಮ ಕಾರ್ಯನಿರ್ವಹಿಸಲು ಇಂತಹ ಆಯೋಗದ ಅಗತ್ಯವಿದೆ. ಆಯೋಗವನ್ನು ಸ್ಪಷ್ಟ ಮಾಧ್ಯಮ ನೀತಿಯ ಆಧಾರದ ಮೇಲೆ ರಚಿಸಬೇಕು ಮತ್ತು ಅದರ ಮೂಲ ಉದ್ದೇಶಗಳಲ್ಲಿ ಒಂದು ಪತ್ರಕರ್ತರ ಹಕ್ಕುಗಳನ್ನು ರಕ್ಷಿಸುವ ಕಾನೂನಾಗಿರಬೇಕು. ಎಂದು ಪ್ರತಿಪಾದಿಸಿದ್ದಾರೆ. ಜೊತೆಗೆ ಹಿರಿಯ ಪತ್ರಕರ್ತರ ಕಲ್ಯಾಣದ ಜೊತೆಗೆ ಅವರ ಘನತೆ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸಲು ಕ್ರಮ ತೆಗೆದುಕೊಳ್ಳಬೇಕು. ಹಿರಿಯ ಪತ್ರಕರ್ತರು ಜನರ ಧ್ವನಿಯನ್ನು ಪ್ರತಿನಿಧಿಸುವಲ್ಲಿ ಮತ್ತು ಸಂಸ್ಥೆಗಳನ್ನು ಹೊಣೆಗಾರರನ್ನಾಗಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪತ್ರಿಕೋದ್ಯಮವು ವಾಣಿಜ್ಯ ಹಿತಾಸಕ್ತಿಗಳಿಗಿಂತ ಹೆಚ್ಚಾಗಿ ಸೇವಾ ಮನೋಭಾವದಿಂದ ಪ್ರೇರೇಪಿಸಲ್ಪಟ್ಟಿದ್ದ ಕಾಲಘಟ್ಟದಲ್ಲಿ, ಅನೇಕರು ತಮ್ಮ ಇಡೀ ವೃತ್ತಿಜೀವನವನ್ನು ಸಾರ್ವಜನಿಕ ಸೇವೆಗಾಗಿ ಮುಡಿಪಾಗಿಟ್ಟಿದ್ದಾರೆ. ಅವರು ಹೆಚ್ಚಾಗಿ ಅತ್ಯಲ್ಪ ವೇತನಕ್ಕೆ ಕಠಿಣ ಪರಿಸ್ಥಿತಿಗಳಲ್ಲಿ ಮತ್ತು ಶಾಸನಬದ್ಧ ವೇತನ ರಕ್ಷಣೆಗಳ ಸಂಪೂರ್ಣ ಪ್ರಯೋಜನಗಳಿಲ್ಲದೆ ಸೇವೆ ಸಲ್ಲಿಸಿದ್ದಾರೆ.

ಇಂದು ಅನೇಕ ಹಿರಿಯ ಪತ್ರಕರ್ತರು ಆರ್ಥಿಕ ಸಂಕಷ್ಟ, ಅಸಮರ್ಪಕ ಆರೋಗ್ಯ ಸೇವೆಗಳು ಮತ್ತು ಪದೇಪದೇ ಆಡಳಿತಾತ್ಮಕ ತೊಂದರೆಗಳನ್ನು ಎದುರಿಸುತ್ತಿದ್ದಾರೆ. ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಪಡೆಯಲು ಅವರು ಅನೇಕ ಅಧಿಕಾರಿಗಳ ಬಳಿ ಅಲೆಯಬೇಕಾದ ಅನಿವಾರ್ಯತೆಗೆ ಸಿಲುಕಿದ್ದಾರೆ. ಸುಸ್ಥಿರ ಪಿಂಚಣಿ ಯೋಜನೆ, ಕೈಗೆಟುಕುವ ದರದಲ್ಲಿ ಆರೋಗ್ಯ ಸೇವೆಗಳ ಲಭ್ಯತೆ, ಗೌರವಧನ ಮತ್ತು ರಾಜ್ಯಮಟ್ಟದ ಮಾನ್ಯತೆ ನೀಡಲು ಕ್ರಮ ತೆಗೆದುಕೊಳ್ಳಬೇಕು.

ಸ್ವತಂತ್ರ ಪತ್ರಕರ್ತರ ಮಾನ್ಯತಾ ಪತ್ರದ ಪ್ರಕ್ರಿಯೆಯ ಸರಳೀಕರಣಗೊಳಿಸಬೇಕು. 25 ವರ್ಷಗಳಿಗೂ ಹೆಚ್ಚು ವೃತ್ತಿಪರ ಸೇವೆ ಸಲ್ಲಿಸಿರುವ ಅನೇಕ ಹಿರಿಯ ಪತ್ರಕರ್ತರು ವಾರ್ಷಿಕ ನವೀಕರಣದ ಸಮಯದಲ್ಲಿ ಅನಗತ್ಯ ಅಧಿಕಾರಶಾಹಿ ಅಡೆತಡೆಗಳು ಮತ್ತು ಅಸಮರ್ಪಕ ನಡವಳಿಕೆಗಳನ್ನು ಎದುರಿಸುತ್ತಿದ್ದಾರೆ. ಸೂಕ್ತ ವೃತ್ತಿಪರ ಮಾನದಂಡಗಳು ಮತ್ತು ಪರಿಶೀಲನೆಗೆ ಒಳಪಟ್ಟು, ಅರ್ಹ ಹಿರಿಯ ಪತ್ರಕರ್ತರಿಗೆ ದೀರ್ಘಾವಧಿಯ, ಜೀವಿತಾವಧಿಯ ಅಥವಾ ಸರಳೀಕೃತ ಮಾನ್ಯತಾ ಪ್ರಕ್ರಿಯೆಯನ್ನು ಪರಿಚಯಿಸಬೇಕೆಂದು ಎಂ.ಎ. ಪೊನ್ನಪ್ಪ ಮನವಿ ಮಾಡಿದ್ದಾರೆ.

## ಶೃಂಗೇರಿ ಕ್ಷೇತ್ರ ಅಂಚೆಮತ ಮರುಎಣಿಕೆ: ಜು.30ಕ್ಕೆ ವಿಚಾರಣೆ ಮುಂದೂಡಿದ ಸುಪ್ರೀಂ ಕೋರ್ಟ್



**ಬೆಂಗಳೂರು, ಜು.23:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ, ಯಥಾಸ್ಥಿತಿ ಮುಂದುವರಿಸಲು ಸೂಚನೆ ನೀಡಿ ವಿಚಾರಣೆಯನ್ನು ಸುಪ್ರೀಂಕೋರ್ಟ್ ಜುಲೈ 30ಕ್ಕೆ ಮುಂದೂಡಿಕೆ ಮಾಡಿದೆ.

2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಶೃಂಗೇರಿ ಕ್ಷೇತ್ರದಲ್ಲಿ ಒಟ್ಟು 1,811 ಅಂಚೆ ಮತಗಳು ಚಲಾವಣೆಯಾಗಿದ್ದವು.ಅದರಲ್ಲಿ 279 ಮತಗಳನ್ನು ತಿರಸ್ಕರಿಸಲಾಗಿತ್ತು. ಅಂತಿಮ ಫಲಿತಾಂಶದಲ್ಲಿ ಟಿ.ಡಿ. ರಾಜೇಗೌಡ ಅವರು 201 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು.

ಈ ಫಲಿತಾಂಶವನ್ನು ಪ್ರಶ್ನಿಸಿದ ಬಿಜೆಪಿ ಅಭ್ಯರ್ಥಿ ಡಿ.ಎನ್. ಜೀವರಾಜ್ ಅವರು ಹೈಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಏಪ್ರಿಲ್ 6ರಂದು ಮಹತ್ವದ ಆದೇಶ ನೀಡಿ, ತಿರಸ್ಕೃತಗೊಂಡ 279 ಅಂಚೆ ಮತಗಳನ್ನು ಮರು ಪರಿಶೀಲನೆ ಮಾಡಿ, ಬಳಿಕ ಎಲ್ಲಾ ಅಂಚೆ ಮತಗಳನ್ನು ಮರು ಎಣಿಕೆ ಮಾಡಿ ಹೊಸ ಫಲಿತಾಂಶ ಪ್ರಕಟಿಸುವಂತೆ ಸೂಚಿಸಿತ್ತು.

ಇದರ ಬೆನ್ನಲ್ಲೇ ಶಾಸಕ ಟಿ.ಡಿ. ರಾಜೇಗೌಡ ಅವರಿಗೆ ಆಕ್ಷೇಪಣೆ ಸಲ್ಲಿಸಲು ಎರಡು ವಾರಗಳ ಕಾಲಾವಕಾಶ ನೀಡಲಾಗಿತ್ತು. ಏಪ್ರಿಲ್ 20ರಂದು ಆ ಅವಧಿ ಮುಕ್ತಾಯವಾದ ಹಿನ್ನೆಲೆಯಲ್ಲಿ ಜಿಲ್ಲಾ ಚುನಾವಣಾಧಿಕಾರಿ ಮರು ಮತ ಎಣಿಕೆ ಪ್ರಕ್ರಿಯೆಗೆ ಮುಂದಾಗಿದ್ದರು.

ಆ ಬಳಿಕ ಅಂಚೆ ಮತಗಳ ಮರು ಎಣಿಕೆ ನಡೆದು, ಅದರಲ್ಲಿ 52 ಮತಗಳಿಂದ ಡಿ.ಎನ್. ಜೀವರಾಜ್ ಜಯಗಳಿಸಿದ್ದರು. ಆದಾದ ಬಳಿಕ ಪ್ರಮಾಣವಚನ ಕೂಡ ಸ್ವೀಕರಿಸಿದ್ದರು. ನಂತರ ಪ್ರಕರಣ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದು, ವಿಚಾರಣೆಯಲ್ಲಿ ಟಿ.ಡಿ. ರಾಜೇಗೌಡರ ಶಾಸಕತ್ವವನ್ನು ತಾತ್ಕಾಲಿಕವಾಗಿ ಪುನಃ ಸ್ಥಾಪಿಸುವಂತೆ ಸುಪ್ರೀಂಕೋರ್ಟ್ ಆದೇಶಿಸಿತ್ತು. ಬಳಿಕ ಮುಂದಿನ ವಿಚಾರಣೆಯನ್ನು ಗುರುವಾರಕ್ಕೆ ಕಾಯ್ದಿರಿಸಿತ್ತು. ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಮತ್ತೆ ಜುಲೈ 30ಕ್ಕೆ ಮುಂದೂಡಿಕೆ ಮಾಡಿದೆ.

## ನಂದಿನಿ ತುಪ್ಪ, ಬೆಣ್ಣೆ ಬೆಲೆ ಏರಿಕೆ, ಇಂದಿನಿಂದಲೇ ಜಾರಿ




**ಬೆಂಗಳೂರು, ಜು.23:** ಅಡುಗೆಎಣ್ಣೆ ಸೇರಿ ಗೃಹೋಪಯೋಗಿ ವಸ್ತುಗಳ ಬೆಲೆ ಏರಿಕೆಯಿಂದ ಕಂಗಾಲಾಗಿರುವ ರಾಜ್ಯದ ಗ್ರಾಹಕರಿಗೆ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ಮತ್ತೊಂದು ಹೊರೆ ನೀಡಿದೆ. ಸಾರ್ವಜನಿಕರ ಮೆಚ್ಚಿನ 'ನಂದಿನಿ' ಬ್ರ್ಯಾಂಡ್‌ನ ಬೆಣ್ಣೆ ಹಾಗೂ ತುಪ್ಪದ ದರ ಗಣನೀಯವಾಗಿ ಹೆಚ್ಚಳ ಮಾಡಲಾಗಿದ್ದು, ನೂತನ ದರಗಳು ನಾಳೆಯಿಂದಲೇ ಜಾರಿಗೆ ಬರಲಿವೆ. ಹಾಲಿನ ಉತ್ಪನ್ನಗಳ ದರ ಪರಿಷ್ಕರಣೆ ಮಾಡಿರುವ ಕೆಎಂಎಫ್, ತುಪ್ಪದ ಬೆಲೆ ಪ್ರತಿ ಕೆಜಿಗೆ 15 ರೂಪಾಯಿ ಹಾಗೂ ಬೆಣ್ಣೆ ದರವನ್ನು ಪ್ರತಿ ಕೆಜಿಗೆ 22 ರೂಪಾಯಿಗಳಷ್ಟು ಏರಿಸಿದೆ. ಇದರಿಂದಾಗಿ ಮನೆಬಳಕೆದಾರರಿಗೆ ಮಾತ್ರವಲ್ಲದೆ ನಂದಿನಿ ತುಪ್ಪ ಮತ್ತು ಬೆಣ್ಣೆಯನ್ನು ಹೆಚ್ಚಾಗಿ ನೆಚ್ಚಿಕೊಂಡಿರುವ ಬೇಕರಿ, ಸಿಹಿತಿಂಡಿ ತಯಾರಕರು ಹಾಗೂ ಹೋಟೆಲ್ ಉದ್ಯಮಿಗಳ ಬಜೆಟ್ ಕೂಡ ಏರುಪೇರಾಗಲಿದೆ. ಹಾಲು ಸಂಸ್ಕರಣೆ, ಪ್ಯಾಕೇಜಿಂಗ್ ವೆಚ್ಚ, ಇಂಧನ ದರ ಏರಿಕೆಯಿಂದಾಗಿ ಸಾಗಣೆ ವೆಚ್ಚದಲ್ಲಿ ಆಗಿರುವ ಹೆಚ್ಚಳ ಮತ್ತು ಒಕ್ಕೂಟಗಳ ನಿರ್ವಹಣಾ ವೆಚ್ಚವನ್ನು ಸರಿದೂಗಿಸಲು ಈ ದರ ಹೆಚ್ಚಳ ಅನಿವಾರ್ಯ ಎಂದು ಕೆಎಂಎಫ್ ಮೂಲಗಳು ಸಮರ್ಥಿಸಿಕೊಂಡಿವೆ.

ಮಾರುಕಟ್ಟೆಯಲ್ಲಿರುವ ಇತರ ಖಾಸಗಿ ಸಂಸ್ಥೆಗಳ ಉತ್ಪನ್ನಗಳಿಗೆ ಹೋಲಿಸಿದರೆ ನಂದಿನಿ ದರಗಳು ಇಂದಿಗೂ ಕಡಿಮೆಯಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಸಾಲು ಸಾಲು ಹಬ್ಬಗಳ ಹಿನ್ನೆಲೆಯಲ್ಲಿ ಮನೆಗಳಲ್ಲಿ ಸಿಹಿ ತಿಂಡಿಗಳ ತಯಾರಿಕೆ ಹೆಚ್ಚಾಗುವ ಸಮಯದಲ್ಲೇ ಸರ್ಕಾರ ಹಾಗೂ ಕೆಎಂಎಫ್ ಕೈಗೊಂಡಿರುವ ಈ ನಿರ್ಧಾರ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

## ರಾಜ್ಯದ ಹಲವು ಹೆದ್ದಾರಿಗಳಲ್ಲಿ ಟೋಲ್ ದರ ಹೆಚ್ಚಳ: ಮಾರ್ಚ್ 31 ರವರೆಗೆ ಅನ್ವಯ



**ಬೆಂಗಳೂರು, ಜು.23:** ರಾಜ್ಯದ ಹಲವು ಹೆದ್ದಾರಿಗಳಲ್ಲಿ ಟೋಲ್ ದರಗಳನ್ನು ಹೆಚ್ಚಿಸಲಾಗಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್‌ವೇಯ ಕರ್ನಾಟಕ ವಿಭಾಗ ಮತ್ತು ರಾಜ್ಯದ ಮೂಲಕ ಹಾದುಹೋಗುವ ಇತರ ಎರಡು ಹೆದ್ದಾರಿಗಳಿಗೆ ಟೋಲ್ ಶುಲ್ಕವನ್ನು ಹೆಚ್ಚಿಸಿದೆ.

ರಾಷ್ಟ್ರೀಯ ಎಕ್ಸ್‌ಪ್ರೆಸ್‌ವೇ 7ರ ಬೆಂಗಳೂರು–ಬೇತಮಂಗಲ ವಿಭಾಗ ಮತ್ತು ರಾಹೆ4ರಲ್ಲಿ ಇಂಟರ್ಚೇಂಜ್ ಹೊಂದಿರುವ ರಾಹೆ 207 ಕಡೆಗೆ 0.7 ಕಿಮೀ ಸಂಪರ್ಕ ರಸ್ತೆಗೆ ಈ ಹೆಚ್ಚಳ ಅನ್ವಯಿಸುತ್ತದೆ. ಹೆದ್ದಾರಿ ಪ್ರಾಧಿಕಾರದ ಪ್ರಕಾರ, ಶುಲ್ಕಗಳು ಮಾರ್ಚ್ 31, 2027 ರವರೆಗೆ ಜಾರಿಯಲ್ಲಿರುತ್ತವೆ.

ಕರ್ನಾಟಕದಲ್ಲಿ, 70.7 ಕಿಮೀ ಎಕ್ಸ್‌ಪ್ರೆಸ್‌ವೇ ಹೊಸಕೋಟೆಯಿಂದ ಬೇತಮಂಗಲದವರೆಗೆ ಸಾಗಿ, ಆಂಧ್ರಪ್ರದೇಶದ ಗಡಿಯನ್ನು ತಲುಪುತ್ತದೆ. ಇದು ನಾಲ್ಕು ಟೋಲ್ ಪ್ಲಾಜಾಗಳನ್ನು ಹೊಂದಿದೆ: ಹೆಡಗಿನಬೆಲೆ (ಹೊಸಕೋಟೆ ಬಳಿ), ಅಗ್ರಹಾರ (ಕೋಲಾರ ಜಿಲ್ಲೆಯ ಮಾಲೂರು ಬಳಿ), ಕೃಷ್ಣರಾಜಪುರ (ಬಂಗಾರಪೇಟೆ ಬಳಿ) ಮತ್ತು ಸುಂದರಪಾಳ್ಯ (ಬೇತಮಂಗಲ ಬಳಿ). ಟೋಲ್ ಗೇಟ್ ಗಳಿವೆ. ಹೆಡಗಿನಬೆಲೆ ಟೋಲ್ ಪ್ಲಾಜಾದಲ್ಲಿ, ಕಾರುಗಳು/ಜೀಪ್‌ಗಳು/ವ್ಯಾನ್‌ಗಳು/ಲಘು ಮೋಟಾರು ವಾಹನಗಳು ಈಗ ಅಗ್ರಹಾರದಿಂದ 50 ರೂ., ಕೃಷ್ಣರಾಜಪುರದಿಂದ 120 ರೂ. ಮತ್ತು ಸುಂದರಪಾಳ್ಯದಿಂದ 150 ರೂ. ಪಾವತಿಸಬೇಕಾಗುತ್ತದೆ.

ಅಗ್ರಹಾರದಲ್ಲಿ, ಕಾರುಗಳು/ಜೀಪ್‌ಗಳು/ವ್ಯಾನ್‌ಗಳು/ಲಘು ಮೋಟಾರು ವಾಹನಗಳಿಗೆ ಹೆಡಗಿನಬೆಲೆಯಿಂದ 50 ರೂ., ಕೃಷ್ಣರಾಜಪುರದಿಂದ 70 ರೂ. ಮತ್ತು ಸುಂದರಪಾಳ್ಯದಿಂದ 95 ರೂ. ಪಾವತಿಸಬೇಕು. ಕೃಷ್ಣರಾಜಪುರದಲ್ಲಿ, ಕಾರುಗಳು/ಜೀಪ್‌ಗಳು/ವ್ಯಾನ್‌ಗಳು/ಲಘು ಮೋಟಾರು ವಾಹನಗಳಿಗೆ ಹೆಡಗಿನಬೆಲೆಯಿಂದ 120 ರೂ., ಅಗ್ರಹಾರದಿಂದ 70 ರೂ. ಮತ್ತು ಸುಂದರಪಾಳ್ಯದಿಂದ 30 ರೂ.ಹಣ ಪಾವತಿಸಬೇಕು. ಸುಂದರ ಪಾಳ್ಯದಲ್ಲಿ, ಕಾರುಗಳು/ಜೀಪ್‌ಗಳು/ವ್ಯಾನ್‌ಗಳು/ಲಘು ಮೋಟಾರು ವಾಹನಗಳಿಗೆ ಹೆಡಗಿನ ಬೆಲೆಯಿಂದ 150 ರೂ., ಅಗ್ರಹಾರದಿಂದ 95 ರೂ. ಮತ್ತು ಕೃಷ್ಣರಾಜಪುರದಿಂದ 30 ರೂ. ಹಣ ಪಾವತಿಸಬೇಕು.

ಮಿನಿ ಬಸ್‌ಗಳು, ಟ್ರಕ್‌ಗಳು ಮತ್ತು ಬಸ್‌ಗಳು ಸೇರಿದಂತೆ ಇತರ ವಾಹನಗಳಿಗೂ ಟೋಲ್ ಶುಲ್ಕವನ್ನು ಹೆಚ್ಚಿಸಲಾಗಿದೆ. 24 ಗಂಟೆಗಳ ಒಳಗೆ ಹಿಂತಿರುಗುವ ಪ್ರಯಾಣಕ್ಕೆ 50% ಕಡಿಮೆ ವೆಚ್ಚವಾಗುತ್ತದೆ. ಒಂದು ತಿಂಗಳಲ್ಲಿ 50 ಏಕ ಪ್ರಯಾಣಗಳಿಗೆ, ಟೋಲ್ ಅನ್ವಯವಾಗುವ ಶುಲ್ಕದ ಮೂರನೇ ಎರಡರಷ್ಟು ಇರುತ್ತದೆ.

ರಾಷ್ಟ್ರೀಯ ಹೆದ್ದಾರಿ 48 ರ 19.5 ಕ.ಮೀ ಬೆಂಗಳೂರು–ನೆಲಮಂಗಲ ವಿಭಾಗವನ್ನು ಬಳಸುವುದರಿಂದ ವಾಹನಗಳು ಹೆಚ್ಚಿನ ಶುಲ್ಕವನ್ನು ಪಾವತಿಸ ಬೇಕಾಗುತ್ತದೆ. ಕಾರುಗಳು/ಜೀಪ್‌ಗಳು/ವ್ಯಾನ್‌ಗಳು/ಲಘು ಮೋಟಾರು ವಾಹನಗಳಿಗೆ ಪರಿಷ್ಕೃತ ಶುಲ್ಕಗಳು ರೂ. 105 (ಒಂದು ಮಾರ್ಗ) ಮತ್ತು ರೂ. 155 (24 ಗಂಟೆಗಳ ಒಳಗೆ ಹಿಂತಿರುಗುವ ಪ್ರಯಾಣ) ಹಣ ಪಾವತಿಸಬೇಕಾಗುತ್ತದೆ.

ಉದಾಸೀನತೆ ತೋರುತ್ತಿರುವುದಕ್ಕೆ ಅಸಮಾಧಾನ

## ಕನ್ನಡ ಅನುಷ್ಠಾನ ಮಾಡದೆ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ: ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಎಚ್ಚರಿಕೆ

**ಬೆಂಗಳೂರು, ಜು.23:** ಸರ್ಕಾರಿ ಕಚೇರಿಗಳಲ್ಲಿ ಕನ್ನಡ ಭಾಷೆಯನ್ನು ಆಡಳಿತದ ಎಲ್ಲಾ ಹಂತಗಳಲ್ಲಿ ಸಮರ್ಪಕವಾಗಿ ಅಳವಡಿಸಿಕೊಳ್ಳದೇ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ 2022ರ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಅವಕಾಶಗಳಡಿ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಎಚ್ಚರಿಕೆ ನೀಡಿದರು.

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ನಡೆದ ಕನ್ನಡ ಅನುಷ್ಠಾನ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಮಾತನಾಡಿದ ಬಿಳಿಮಲೆ, ರಾಜ್ಯ ಸರ್ಕಾರವು ಆಡಳಿತದಲ್ಲಿ ಕನ್ನಡವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ನಿರಂತರ ನಿರ್ದೇಶನಗಳನ್ನು ನೀಡುತ್ತಿದ್ದರೂ, ಕೆಲ ಸರ್ಕಾರಿ ಅಧಿಕಾರಿಗಳು ತೋರುತ್ತಿರುವ ಸಿನಿಕತೆ, ಉದಾಸೀನತೆ ಮತ್ತು ನಿರಾಸಕ್ತಿಯ ಮನೋಭಾವ ಸರ್ಕಾರದ ಆಶಯವನ್ನು ದುರ್ಬಲಗೊಳಿಸುತ್ತಿದೆ. ಇದನ್ನು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯ ಮುಂದಿನ ರಾಜ್ಯಸಮಿತಿ ಸಭೆಯಲ್ಲಿ ಚರ್ಚಿಸಿ ಕನ್ನಡ ವಿರೋಧಿ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಆಡಳಿತ ಭಾಷೆಯಾಗಿ ಕನ್ನಡವನ್ನು ಅಳವಡಿಸಿಕೊಳ್ಳುವುದು ಕೇವಲ ಕಾನೂನುಬದ್ಧ ಕರ್ತವ್ಯವಲ್ಲ. ಅದು ಜನ–ಸಾಮಾನ್ಯರೊಂದಿಗೆ ಸರ್ಕಾರದ ಸಂಪರ್ಕವನ್ನು ಬಲಪಡಿಸುವ ಹೊಣೆಗಾರಿಕೆಯೂ ಆಗಿದೆ ಎಂದ ಬಿಳಿಮಲೆ, ಇಂದಿನ ಪರಿಸ್ಥಿತಿಯಲ್ಲಿ ಕನ್ನಡವನ್ನು ಸಾಮಾಜಿಕವಾಗಿ ಕಾಡಿಬೇಡಿ ಉಳಿಸಬೇಕಾದ ಸ್ಥಿತಿ ನಿರ್ಮಾಣವಾಗಿರುವುದು ದುಃಖದ ಸಂಗತಿ ಎಂದರು.

ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿಯೂ ಇದೇ ರೀತಿಯ ನಿರ್ಲಕ್ಷ್ಯ ಕಂಡು ಬರುತ್ತಿರುವುದು ಕನ್ನಡದ ಭವಿಷ್ಯದ ದೃಷ್ಟಿಯಿಂದ ಗಂಭೀರ ಆತಂಕಕ್ಕೆ ಕಾರಣವಾಗಿದೆ ಎಂದ ಬಿಳಿಮಲೆ, ವಿಜ್ಞಾನ, ವಾಣಿಜ್ಯ ಹಾಗೂ ವೃತ್ತಿಪರ ಶಿಕ್ಷಣದಂತಹ ಪ್ರಮುಖ ಕ್ಷೇತ್ರಗಳಲ್ಲಿ ಕನ್ನಡ ಬೋಧನೆ ಕ್ರಮೇಣ ಮರೆಯಾಗುತ್ತಿರುವುದು ಅಪಾಯಕಾರಿ ಬೆಳವಣಿಗೆ ಎಂದು ಅಭಿಪ್ರಾಯಪಟ್ಟರು.



ಆಡಳಿತ ವ್ಯವಸ್ಥೆಯಲ್ಲಿಯೇ ಕನ್ನಡಕ್ಕೆ ಅಗತ್ಯ ಗೌರವ ಮತ್ತು ಆದ್ಯತೆ ದೊರೆಯದಿದ್ದರೆ ಸರ್ಕಾರದ ಕನ್ನಡಪರ ನೀತಿಗಳು ಸಂಪೂರ್ಣವಾಗಿ ಸಾಕಾರಗೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಎಲ್ಲಾ ಇಲಾಖೆಗಳು ಕನ್ನಡ ಅನುಷ್ಠಾನವನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದ ಬಿಳಿಮಲೆ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆಯಲ್ಲಿ ಕನ್ನಡಕ್ಕೆ ಗೌರವ ನೀಡದೆ ಆಂಗ್ಲ ಭಾಷೆಯಲ್ಲಿಯೇ ವ್ಯವಹರಿಸುತ್ತಿರುವ ಅಧಿಕಾರಿಗಳ ಮೇಲೆ ನಿಯಮಾನುಸಾರ ಕ್ರಮವಹಿಸಲು ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆಯ ರಾಜ್ಯಸಮಿತಿಯ ಮುಂದೆ ಪ್ರಸ್ತಾವನೆಯನ್ನು ಮಂಡಿಸಲಿದೆ ಎಂದರು.

ಕನ್ನಡವು ಕೇವಲ ಭಾವನಾತ್ಮಕ ಗುರುತಿನ ಭಾಷೆಯಲ್ಲ. ಅದು ಆಡಳಿತ ಶಿಕ್ಷಣ ಮತ್ತು ಸಾರ್ವಜನಿಕ ಬದುಕಿನ ಎಲ್ಲಾ ಕ್ಷೇತ್ರಗಳಲ್ಲಿಯೂ ಸಮರ್ಥವಾಗಿ ಬಳಕೆಯಾಗಬೇಕಾದ ಜ್ಞಾನದ ಭಾಷೆಯಾಗಿದೆ ಎಂದ ಬಿಳಿಮಲೆ, ಈ ನಿಟ್ಟಿನಲ್ಲಿ ಪ್ರತಿಯೊಬ್ಬ ಸರ್ಕಾರಿ ಅಧಿಕಾರಿ ತಮ್ಮ ಭಾಷಾ ಹೊಣೆಗಾರಿಕೆಯನ್ನು ಅರಿತು ಕೆಲಸ ಮಾಡಬೇಕೆಂದರು.



ನೀಟ್ ಹಗರಣದಲ್ಲಿ ರಾಜಕೀಯ ನಡೆಸುತ್ತಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್ ಪಕ್ಷದ ವಿರುದ್ಧ ಧಾರವಾಡದಲ್ಲಿ ಬಿಜೆಪಿ ಕಾರ್ಯಕರ್ತರು ಗುರುವಾರ ಪ್ರತಿಭಟನೆ ನಡೆಸಿದರು.

### ಬಳ್ಳಾರಿ: ಪೀಪಲ್ ಟ್ರೀ ಪ್ರೌಢಶಾಲೆಯಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಕಾರ್ಯಕ್ರಮ

## ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಅಗತ್ಯ: ಸರ್ಮಸ್ ವಲಿ

**ಬಳ್ಳಾರಿ, ಜು.23.** ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಬಗ್ಗೆ ಜಾಗೃತಿ ಹೊಂದುವುದು ಅಗತ್ಯವಾಗಿದೆ ಎಂದು ಕ್ಲಿನಿಕಲ್ ಸೈಕಾಲಜಿಸ್ಟ್ ಸರ್ಮಸ್ ವಲಿ ಅವರು ಹೇಳಿದರು.

ಪ್ರೌಢಶಾಲಾ ಹಂತವು ಹದಿಹರೆಯದ ವಯಸ್ಸಾಗಿದ್ದು, ಈ ಸಮಯದಲ್ಲಿ ಮಕ್ಕಳಲ್ಲಿ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಬದಲಾವಣೆಗಳು ವೇಗವಾಗಿ ನಡೆಯುತ್ತವೆ. ಪರೀಕ್ಷೆಯ ಭಯ, ಗೆಳೆಯರ ಒತ್ತಡ ಹಾಗೂ ಭವಿಷ್ಯದ ಆತಂಕದಿಂದ ಮಕ್ಕಳು ತೊಂದರೆಗೆ ಒಳಗಾಗುವ ಸಾಧ್ಯತೆ ಇರುತ್ತದೆ ಎಂದು ತಿಳಿಸಿದರು. ದೈಹಿಕವಾಗಿ ಆರೋಗ್ಯವಾಗಿರುವುದು ಎಷ್ಟು ಮುಖ್ಯವೋ, ಮಾನಸಿಕವಾಗಿ ಪ್ರಶಾಂತವಾಗಿ ಮತ್ತು ಸಕ್ರಿಯವಾಗಿರುವುದೂ ಅಷ್ಟೇ ಮುಖ್ಯ. ಕೋಪ, ದುಃಖ, ಭಯ, ಸಂತೋಷ ಇವೆಲ್ಲವೂ ಸಹಜ ಭಾವನೆಗಳು. ಈ ಭಾವನೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವುದೇ ಉತ್ತಮ ಮಾನಸಿಕ ಆರೋಗ್ಯ ಎಂದರು.

**ವಿದ್ಯಾರ್ಥಿಗಳು ಎದುರಿಸುವ ಮುಖ್ಯ ಸವಾಲುಗಳು:** ಪರೀಕ್ಷೆ ಮತ್ತು ಅಭ್ಯಾಸದ ಒತ್ತಡ: ಅಂಕಗಳ ಚಿಂತೆ ಮತ್ತು ಪೋಷಕರು/ಶಿಕ್ಷಕರ ನಿರೀಕ್ಷೆಗಳು.

**ಗೆಳೆಯರ ಒತ್ತಡ:** ಇತರರಂತೆ ಕಾಣಿಸಿಕೊಳ್ಳಬೇಕು ಅಥವಾ ಅವರ ನಿಯಮಗಳಿಗೆ ಒಗ್ಗಿಕೊಳ್ಳಬೇಕು ಎಂಬ ಹಠ. ಸಾಮಾಜಿಕ ಮಾಧ್ಯಮಗಳ ಪ್ರಭಾವ: ಇತರರ ಜೀವನವನ್ನು ನೋಡಿ ತಮ್ಮನ್ನು ತಾವು ಹೋಲಿಸಿಕೊಂಡು ಬೇಸರಪಡುವುದು. ದೇಹದ ಬದಲಾವಣೆಗಳ ಆತಂಕ: ಹದಿಹರೆಯದಲ್ಲಿ ದೇಹದಲ್ಲಾಗುವ ಬದಲಾವಣೆಗಳ ಬಗ್ಗೆ ಕೀಳರಿಮೆ ಹೊಂದುವುದು.

**ಮಾನಸಿಕವಾಗಿ ಗಟ್ಟಿಯಾಗಿರಲು ಸರಳ ಸೂತ್ರಗಳು:** ಭಾವನೆಗಳನ್ನು ಹಂಚಿಕೊಳ್ಳಿ, ಬೇಸರ ಅಥವಾ ಭಯವಾದಾಗ ಮನಸ್ಸಿನಲ್ಲೇ ಇಟ್ಟುಕೊಳ್ಳದೆ ಇಷ್ಟವಾದ ಸ್ನೇಹಿತರು, ಪೋಷಕರು ಅಥವಾ ಶಿಕ್ಷಕರ ಜೊತೆ ಮುಕ್ತವಾಗಿ ಮಾತನಾಡಿ.

**ಸರಿಯಾದ ನಿದ್ರೆ ಮತ್ತು ಆಹಾರ:** ದಿನಕ್ಕೆ 7–8 ಗಂಟೆಗಳ ನಿದ್ರೆ ಮತ್ತು ಪೌಷ್ಟಿಕ ಆಹಾರ ಮನಸ್ಸನ್ನು ಶಾಂತವಾಗಿಡುತ್ತದೆ.

**ದೈಹಿಕ ಚಟುವಟಿಕೆ:** ದಿನವೂ ಆಟವಾಡುವುದು, ಓಡುವುದು ಅಥವಾ ಯೋಗ ಮಾಡುವುದರಿಂದ ಮನಸ್ಸಿನಲ್ಲಿ 'ಸಂತೋಷದ ಹಾರ್ಮೋನ್‌ಗಳು' ಉತ್ಪತ್ತಿಯಾಗುತ್ತವೆ.

**ಹೋಲಿಕೆ ಬೇಡ:** ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯೂ ವಿಭಿನ್ನ. ನಿಮ್ಮನ್ನು ಬೇರೆಯವರೊಂದಿಗೆ ಹೋಲಿಸಿಕೊಳ್ಳಬೇಡಿ.

**ವಿರಾಮ ತೆಗೆದುಕೊಳ್ಳಿ:** ನಿರಂತರವಾಗಿ ಓದುವ ಬದಲು ಮಧ್ಯೆ ಸಣ್ಣ ವಿರಾಮ ತೆಗೆದುಕೊಳ್ಳುವುದು ಗಮನ ಕೇಂದ್ರೀಕರಿಸಲು ನೆರವಾಗುತ್ತದೆ.

**ಉಚಿತ 'ಟೆಲಿ–ಮಾನಸ್' ಸಹಾಯವಾಣಿ ಬಳಕೆಗೆ ಕರೆ:** ಕರ್ನಾಟಕ ರಾಜ್ಯ ಸರ್ಕಾರವು ರಾಷ್ಟ್ರೀಯ ಟೆಲಿ ಮಾನಸಿಕ ಆರೋಗ್ಯ ಕಾರ್ಯಕ್ರಮದಡಿ 'ಟೆಲಿ–ಮಾನಸ್' (14416) ಎಂಬ ಉಚಿತ ಸಹಾಯವಾಣಿಯನ್ನು ಆರಂಭಿಸಿದೆ. ಈ ಸಹಾಯವಾಣಿಗೆ ಕರೆ ಮಾಡಿದವರ ವಿವರಗಳನ್ನು ಸಂಪೂರ್ಣ ಗೌಪ್ಯವಾಗಿ ಇಡಲಾಗುವುದು ಮತ್ತು ಧ್ವನಿಮುದ್ರಣ ಮಾಡುವುದಿಲ್ಲ.

ಪರೀಕ್ಷಾ ಒತ್ತಡಕ್ಕೊಳಗಾದವರು, ಕೌಟುಂಬಿಕ ಸಮಸ್ಯೆ, ಆತ್ಮಹತ್ಯೆ ಆಲೋಚನೆ, ಮಾದಕ ವ್ಯಸನ, ಸಂಬಂಧಗಳ ಸಮಸ್ಯೆ, ಜ್ಞಾಪಕ ಶಕ್ತಿ ತೊಂದರೆ ಅಥವಾ ಇತರ ಯಾವುದೇ ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಈ ಸೌಲಭ್ಯದ ಪ್ರಯೋಜನ ಪಡೆಯಬಹುದು ಎಂದು ಅವರು ತಿಳಿಸಿದರು.




### ಮೊಬೈಲ್ ಹಾವಳಿಯಿಂದ ವಿದ್ಯಾರ್ಥಿಗಳಲ್ಲಿ ಓದು ಕ್ಷೀಣಿಸುತ್ತಿದೆ

## ಮೊಬೈಲ್ ಗೀಳಿನಿಂದ ಹೊರಬನ್ನಿ: ವಿದ್ಯಾರ್ಥಿಗಳಿಗೆ ವಲಿಬಾಷ ಕರೆ




**ಕಂಪ್ಲಿ ಜು.23.** ಇಂದಿನ ಆಧುನಿಕ ಕಾಲದಲ್ಲಿ ಮೊಬೈಲ್ ಹಾವಳಿಯಿಂದ ವಿದ್ಯಾರ್ಥಿಗಳಲ್ಲಿ ಓದುವ ಹವ್ಯಾಸ ಕಡಿಮೆಯಾಗಿದೆ. ಮೊಬೈಲ್‌ನಲ್ಲಿ ಹೆಚ್ಚಿನ ಸಮಯ ಕಳೆಯುತ್ತಿರುವ ವಿದ್ಯಾರ್ಥಿಗಳು, ತಮ್ಮ ಜೀವನವನ್ನೂ ಹಾಳು ಮಾಡಿಕೊಳ್ಳುತ್ತಿದ್ದಾರೆ ಎಂದು ಕರ್ನಾಟಕ ಪತ್ರಕರ್ತರ ಸಂಘದ ಬಳ್ಳಾರಿ ಜಿಲ್ಲಾಧ್ಯಕ್ಷ ಯಾಳ್ಪಿ ವಲಿಬಾಷ ಹೇಳಿದರು.

ವಿದ್ಯಾರ್ಥಿಗಳು ಮೊಬೈಲ್ ಬಿಟ್ಟು, ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು.

ಅಂದಾಗ ಮಾತ್ರ ಜೀವನದಲ್ಲಿ ಯಶಸ್ಸು ಸಾಧಿಸಬಹುದು. ವಿದ್ಯಾರ್ಥಿಗಳು ಜೀವನದಲ್ಲಿ ಉನ್ನತ ಗುರಿಯನ್ನು ಹೊಂದುವ ಸಂಕಲ್ಪ ಮಾಡಬೇಕು ಎಂದರು.

ಸಮಾಜ ಹಾಗೂ ದೇಶದ ಬಗ್ಗೆ ಕಾಳಜಿ ವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕಾದರೆ, ಉತ್ತಮ ಚಿಂತನೆ ಮತ್ತು ವಿವೇಚನಾ ಶಕ್ತಿ ಅಗತ್ಯ. ಪ್ರತಿಯೊಂದು ವಿಷಯವನ್ನೂ ಮೌಲ್ಯಮಾಪನ ಮಾಡುವ ಗುಣವನ್ನು ವಿದ್ಯಾರ್ಥಿ ಜೀವನದಲ್ಲೇ ರೂಢಿಸಿಕೊಳ್ಳಬೇಕು ಅಲ್ಲದೇ, ಪತ್ರಿಕೆಗಳನ್ನು ಹೆಚ್ಚು ಹೆಚ್ಚು ಓದುವ ಹವ್ಯಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂದು ಅವರು ಹೇಳಿದರು.

ಜನಪ್ರತಿನಿಧಿಗಳ ಮಾತುಗಳು ವೇದಿಕೆಗೆ ಸೀಮಿತವಾಗಿ ಅದು ಕಾರ್ಯರೂಪಕ್ಕೆ ಬಾರದಿದ್ದಾಗ ಅದನ್ನು ನೆನಪು ಮಾಡುವ ಕಾರ್ಯವನ್ನು ಪತ್ರಕರ್ತರು ಮಾಡುವ ಮೂಲಕ ಅಂಕುಶವಾಗಿ ಕೆಲಸ ಮಾಡುತ್ತಾರೆ. ತಪ್ಪು–ಸರಿಗಳನ್ನು ಸಮಾಜಕ್ಕೆ ತಿಳಿಸುವ ಕಾರ್ಯ ಅತಿ ಅಗತ್ಯವಾಗಿದೆ. ಪತ್ರಿಕೋದ್ಯಮದಲ್ಲಿ ಎಐ ಬಳಕೆ ಹೆಚ್ಚು ಪರಿಣಾಮಕಾರಿಯಾಗಲಿದ್ದುಅದರ ಟೂಲ್‌ಗಳನ್ನು ಬಳಸಿಕೊಂಡು ಲೇಖನಗಳನ್ನು ಹೆಚ್ಚು ಸ್ಪಷ್ಟಗೊಳಿಸುವ ಜತೆಗೆ ತಪ್ಪುಗಳನ್ನು ದೂರ ಮಾಡಬಹುದು. ನಮ್ಮ ಅನುಭವ, ಸೃಜನಶೀಲತೆಗಳ ಮೂಲಕ ಲೇಖನಗಳಿಗೆ ಶಕ್ತಿ ತುಂಬುವ ಕಾರ್ಯ ಮಾಡಬಹುದು ಎಂದರು.

## ಮಕ್ಕಳಿಗೆ ಕೊಡಬೇಕಿದ್ದ 50 ಸಾವಿರ ಐರನ್ ಮಾತ್ರೆ ಶಾಲೆಯ ಟಾಯ್ಲೆಟ್‌ನಲ್ಲಿ ಪತ್ತೆ!



**ರಾಯಚೂರು, ಜು. 23:** ಜಿಲ್ಲೆಯಲ್ಲಿ ಇತ್ತೀಚೆಗೆ ಪೌಷ್ಟಿಕ ಹಾಲಿನಪುಡಿ ದನದ ಕೊಟ್ಟಿಗೆಯಲ್ಲಿ ಪತ್ತೆಯಾದ ಸುದ್ದಿ ಮಾಸುವ ಮುನ್ನವೇ ಮತ್ತೊಂದು ಘಟನೆ ನಾಗರಿಕರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಸರ್ಕಾರಿ ಶಾಲೆಯಲ್ಲಿ ಮಕ್ಕಳಿಗೆ ವಿತರಿಸಬೇಕಾದ 50,000ಕ್ಕೂ ಅಧಿಕ ಮಾತ್ರೆಗಳನ್ನು ಶೌಚಾಲಯದಲ್ಲಿ ಎಸೆದ ಘಟನೆ ತಡವಾಗಿ ಬೆಳಕಿಗೆ ಬಂದಿದ್ದು, ಶಿಕ್ಷಣ ಇಲಾಖೆಯ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಜಿಲ್ಲೆಯ ಲಿಂಗಸುಗೂರು ತಾಲೂಕಿನ ಗುರುಗುಂಟಾದ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳಿಗೆ ವಿತರಿಸಬೇಕಾದ ಕಬ್ಬಿಣ ಮತ್ತು ಫೋಲಿಕ್‌ಆಮ್ಲ ಮಾತ್ರೆಗಳನ್ನು ಶೌಚಾಲಯದಲ್ಲಿ ಎಸೆದಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ಆರೋಗ್ಯಾಧಿಕಾರಿ ಡಾ.ಅಮರೇಶ ಮಾಕಾಪುರ ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ.

ಡಬ್ಲೂಐಎಫ್‌ಎಸ್ ಮಾತ್ರೆಗಳಾದ ಪಿಂಕ್ ಮತ್ತು ಬ್ಲೂ ಮಾತ್ರೆಗಳು 2015 ಅ.15ರಿಂದ 2017 ಸೆ.17ರ ವರೆಗೆ ಅವಧಿ ಹೊಂದಿದ್ದು, ಬ್ಯಾಚ್ ಸಂಖ್ಯೆ ಐಎಫ್‌ಓ 039 ಎಂಬುದು ಪರಿಶೀಲನೆ ವೇಳೆ ಪತ್ತೆಯಾಗಿದೆ ಎನ್ನಲಾಗಿದೆ. ವಶಕ್ಕೆ ಪಡೆದ ಮಾತ್ರೆಗಳನ್ನು ಮುಂದಿನ ಆದೇಶದವರೆಗೂ ಗುರುಗುಂಟಾದಲ್ಲಿರುವ ಪ್ರಾಥಮಿಕ ಆರೋಗ್ಯಕ್ಕೆ ಕೇಂದ್ರದಲ್ಲಿ ರಿಸಲಾಗಿದೆ.

ಐರನ್ ಮಾತ್ರೆಗಳನ್ನು ಮಕ್ಕಳಿಗೆ ನೀಡದೇ ಶೌಚಾಲಯದಲ್ಲಿ ಬೇಕಾಬಿಟ್ಟಿ ಎಸೆದ ಪ್ರಕರಣ ಶಿಕ್ಷಕರ ಕರ್ತವ್ಯ ಲೋಪ ಎದ್ದು ಕಾಣುತ್ತಿದೆ. ಘಟನೆ ಸಂಬಂಧ ಮಕ್ಕಳಿಗೆ ಮಾತ್ರೆಗಳು ಏಕೆ ವಿತರಣೆ ಮಾಡಿಲ್ಲ ಎಂದು ಗುರುಗುಂಟಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಮುಖ್ಯ ಶಿಕ್ಷಕರಿಗೆ ನೋಟಿಸ್ ನೀಡಿದ್ದಾರೆ.

# ನೀಟ್ ಹೆಸರಲ್ಲಿ ರಾಜಕೀಯ ಕಾಂಗ್ರೆಸ್ ವಿರುದ್ಧ ಆಕ್ರೋಶ

### ಪ್ರತಿಭಟನೆಯಲ್ಲಿ ಮಾಜ ಡಿಸಿಎಂ ಅಶ್ವತ್ಥನಾರಾಯಣ್, ಪ್ರಧಾನ ಕಾರ್ಯ ಎ.ಜಿ.ಆನಂದ್ ಗೌಡ ಭಾಗಿ

**ಬೆಂಗಳೂರು:** ರಾಷ್ಟ್ರದ ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಧರಿಸುವ ಮಹತ್ವದ ನೀಟ್ ಪರೀಕ್ಷೆಯ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ದುರುಪಯೋಗಪಡಿಸಿಕೊಳ್ಳುತ್ತಿರುವ ಸಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ನಡೆಗೆ ವಿಜಯನಗರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ಎ.ಜಿ. ಆನಂದ್ ಗೌಡ ಅವರು ತೀವ್ರ ಆಕ್ರೋಶ ವ್ಯಕ್ತಪಡಿಸಿ ಕಠೋರವಾಗಿ ಖಂಡಿಸಿದ್ದಾರೆ.

ವಿದ್ಯಾರ್ಥಿಗಳ ಭವಿಷ್ಯ ಎಂಬುದು ಯಾವುದೇ ರಾಜಕೀಯ ಪಕ್ಷದ ಆಟದ ಬೊಮ್ಮೆಯಾಗಲು ಸಾಧ್ಯವಿಲ್ಲ. ಆದರೆ, ಇಂದು ಕೆಲವು ಪಕ್ಷಗಳು ತಮ್ಮ ಸ್ವಾರ್ಥಕ್ಕಾಗಿ ಯುವಜನತೆಯ ಕನಸುಗಳನ್ನು ರಾಜಕೀಯ ವೇದಿಕೆಯಲ್ಲಿ ಹರಾಜು ಹಾಕುತ್ತಿರುವುದು ನಾಚಿಕೆಗೇಡಿತನ ಎಂದು ಅವರು ಕಿಡಿಕಾರಿದರು.

ನೀಟ್ ಪರೀಕ್ಷೆ ದೇಶದಾದ್ಯಂತ ಸಮಾನ ಅವಕಾಶ, ಪಾರದರ್ಶಕತೆ ಮತ್ತು ಮೆರಿಟ್ ಆಧಾರಿತ ಆಯ್ಕೆಯನ್ನು ಖಚಿತಪಡಿಸುವ ವ್ಯವಸ್ಥೆಯಾಗಿದ್ದು, ಇದನ್ನು ಪ್ರಶ್ನಿಸುವುದೇ ವಿದ್ಯಾರ್ಥಿಗಳ ಪರಿಶ್ರಮ ಮತ್ತು ಕನಸುಗಳ ಮೇಲೆ ಹೊಡೆತ ನೀಡುವಂತಾಗಿದೆ. ಇಂತಹ ವ್ಯವಸ್ಥೆಯನ್ನು ತಪ್ಪಾಗಿ ಬಿಂಬಿಸಿ ಜನರಲ್ಲಿ ಭಯ ಮತ್ತು ಗೊಂದಲ ಉಂಟುಮಾಡುವುದು ಜವಾಬ್ದಾರಿಯಿಲ್ಲದ ರಾಜಕೀಯದ ಸ್ಪಷ್ಟ ಉದಾಹರಣೆ ಎಂದು ಅವರು ಹೇಳಿದರು.

ಸಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ನಡೆಸುತ್ತಿರುವ ಪ್ರತಿಭಟನೆಗಳು ನಿಜವಾದ ವಿದ್ಯಾರ್ಥಿ ಹಿತಾಸಕ್ತಿಗಾಗಿ ಅಲ್ಲ; ಅವು ಸಂಪೂರ್ಣವಾಗಿ ರಾಜಕೀಯ ಪ್ರಚಾರಕ್ಕಾಗಿ ರೂಪಿಸಿದ ನಾಟಕಗಳು. "ಜನರನ್ನು ತಪ್ಪು ದಾರಿಗೆಳೆದು, ತಮ್ಮ ರಾಜಕೀಯ ಹಿತಾಸಕ್ತಿಗಾಗಿ ಈ ಪಕ್ಷಗಳು ನೀಟ್ ವಿಚಾರವನ್ನು ಬಳಸಿ ರಾಜಕೀಯ ಲಾಭ ಪಡೆಯಲು ಯತ್ನಿಸುತ್ತಿವೆ," ಎಂದು ಆನಂದಗೌಡರು ತೀವ್ರವಾಗಿ ಟೀಕಿಸಿದರು. ಇಂತಹ ನಿರ್ಲಜ್ಜ ನಡೆಗಳಿಂದ ವಿದ್ಯಾರ್ಥಿಗಳಲ್ಲಿ ಭಯ, ಆತಂಕ ಮತ್ತು ಅನುಮಾನಗಳ ವಾತಾವರಣ ಸೃಷ್ಟಿಯಾಗುತ್ತಿದೆ. ಶಿಕ್ಷಣ ವ್ಯವಸ್ಥೆಯ ಮೇಲೆ ನಂಬಿಕೆ ಕುಗ್ಗಿಸುವಂತಹ ಈ ರೀತಿಯ ಪ್ರಚಾರವು ಭವಿಷ್ಯದಲ್ಲಿ ಗಂಭೀರ ಪರಿಣಾಮಗಳನ್ನು ಉಂಟುಮಾಡಬಹುದು. "ಪ್ರತಿಭಟನೆ ಹೆಸರಿನಲ್ಲಿ ಸುಳ್ಳು ಮಾಹಿತಿಯನ್ನು ಹಬ್ಬಿಸುವುದು ದೇಶದ ಶಿಕ್ಷಣ ವ್ಯವಸ್ಥೆಯನ್ನೇ ದುರ್ಬಲಗೊಳಿಸುವ ಕಾರ್ಯ," ಎಂದರು.

ಇಂದಿನ ಯುವಜನತೆ ದೇಶದ ಶಕ್ತಿ ಮತ್ತು ಭವಿಷ್ಯ. ಅವರ ಭಾವನೆಗಳನ್ನು ಕೆದಕುವುದು, ಅವರನ್ನು ರಾಜಕೀಯದ ಸಾಧನವಾಗಿ ಬಳಸಿಕೊಳ್ಳುವುದು ಅತ್ಯಂತ ಹೀನ ಮಟ್ಟದ ರಾಜಕೀಯವಾಗಿದೆ. "ವಿದ್ಯಾರ್ಥಿಗಳ ಕಣ್ಣೀರಿನ ಮೇಲೆ ರಾಜಕೀಯ ಕಟ್ಟುವವರನ್ನು ಜನತೆ ಎಂದಿಗೂ ಕ್ಷಮಿಸುವುದಿಲ್ಲ," ಎಂದು ಅವರು ತೀಕ್ಷ್ಣವಾಗಿ ಹೇಳಿದರು.

ಕೇಂದ್ರ ಸರ್ಕಾರ ವಿದ್ಯಾರ್ಥಿಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲು, ಪಾರದರ್ಶಕ ವ್ಯವಸ್ಥೆ ರೂಪಿಸಲು ಶ್ರಮಿಸುತ್ತಿರುವ ಈ ಸಂದರ್ಭದಲ್ಲಿ, ಕೆಲವು ಪಕ್ಷಗಳು ಅದನ್ನು ವಿರೋಧಿಸುವುದು ಅವರ ದ್ವಂದ್ವ ನಿಲುವನ್ನು ಬಯಲಿಗೆಳೆಯುತ್ತದೆ. ಒಂದೆಡೆ ವಿದ್ಯಾರ್ಥಿ ಹಿತಾಸಕ್ತಿ ಎಂದು ಹೇಳಿಕೊಂಡು, ಇನ್ನೊಂದೆಡೆ ಗೊಂದಲ ಸೃಷ್ಟಿಸುವುದು ಇವರ ರಾಜಕೀಯದ ದ್ವಿಮುಖ ಸ್ವಭಾವವನ್ನು ತೋರಿಸುತ್ತದೆ. "ನೀಟ್ ವಿರುದ್ಧ ನಡೆಯುತ್ತಿರುವ ಈ ರೀತಿಯ ರಾಜಕೀಯ ಪ್ರಚೋದನೆಗಳು ಕೇವಲ ತಾತ್ಕಾಲಿಕ ಲಾಭಕ್ಕಾಗಿ. ಆದರೆ ಇದರ ಪರಿಣಾಮ ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಶಾಶ್ವತವಾಗಿ ಬೀಳುತ್ತದೆ. ಇಂತಹ ಅಪಾಯಕಾರಿ ರಾಜಕೀಯವನ್ನು ಜನತೆ ತಿರಸ್ಕರಿಸಬೇಕು. ವಿದ್ಯಾರ್ಥಿಗಳ ಭವಿಷ್ಯವನ್ನು ರಾಜಕೀಯದ ಬಲಿಪಶುವಾಗಿಸಲು ಯಾರಿಗೂ ಹಕ್ಕಿಲ್ಲ. ಇಂತಹ ಅಸಂಬದ್ಧ, ದುರಾಶಯಪೂರಿತ ಮತ್ತು ಜವಾಬ್ದಾರಿಯಿಲ್ಲದ ಪ್ರತಿಭಟನೆಗಳನ್ನು ತಕ್ಷಣ ನಿಲ್ಲಿಸಬೇಕು. ಇಲ್ಲವಾದರೆ ಭವಿಷ್ಯದಲ್ಲಿ ವಿರೋಧ ಪಕ್ಷಗಳಿಗೆ ದೇಶದ ಜನರೆ ಸರಿಯಾದ ಉತ್ತರಕೊಡಲಿದ್ದಾರೆ ಎಂದು ಆನಂದ್‌ಗೌಡ ಕಿಡಿಕಾರಿದರು.




ನೀಟ್ ವಿಚಾರದಲ್ಲಿ ಅಪಪ್ರಚಾರ ಮಾಡಿ ಪ್ರಜಾಪ್ರಭುತ್ವವನ್ನು ಬೆದರಿಸುತ್ತಿರುವ ಕಾಂಗ್ರೆಸ್ ಮತ್ತು ಸಿಜೆಪಿ ಪಕ್ಷಗಳ ವಿರುದ್ಧ ಬಿಜೆಪಿ ನಾಯಕರು ಬೆಂಗಳೂರಿನಲ್ಲಿ ಪ್ರತಿಭಟನೆಯಲ್ಲಿ ಮಾಜಿ ಡಿಸಿಎಂ ಅಶ್ವತ್ಥನಾರಾಯಣ್, ಮಾಜಿ ಬಿಬಿಎಂಪಿ ಸದಸ್ಯರಾದ ಪದ್ಮನಾಭರೆಡ್ಡಿ, ವಿಜಯನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮಂಡಲದ ಪ್ರಧಾನ ಕಾರ್ಯದರ್ಶಿಯಾದ ಎ.ಜಿ.ಆನಂದ್‌ಗೌಡ ಭಾಗವಹಿಸಿದ್ದರು.

## ನಾರಾಯಣಪುರ ಜಲಾಶಯದಿಂದ, ಭೀಮಾನದಿಗೆ ಹರಿದುಬಂದ 1.20 ಟಿಎಂಸಿ ನೀರು

**ಕಲಬುರಗಿ, ಜು. 23:** ಜಿಲ್ಲೆಯ ಅಫಜಲಪೂರ, ಕಲಬುರಗಿ, ಜೇವರ್ಗಿ ಮತ್ತು ಯಡ್ರಾಮಿ ತಾಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಮಳೆಯ ಕೊರತೆಯಿಂದಾಗಿ ಕಳೆದ 3, 4 ತಿಂಗಳಿಂದ ತಲೆದೋರಿರುವ ತೀವ್ರ ಕುಡಿಯುವ ನೀರಿನ ಅಭಾವ ನಿವಾರಣೆಗೆ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ.

ಕುಡಿಯುವ ನೀರಿಗೆ ಭೀಮಾ ನದಿಯನ್ನೇ ಅವಲಂಬಿಸಿರುವ ಕಲಬುರಗಿ ನಗರವೂ ಸೇರಿದಂತೆ ಅಫಜಲಪುರ, ಜೇವರ್ಗಿ ಪಟ್ಟಣ ಮತ್ತು ಯಾದಗಿರಿ ನಗರವೂ ಸೇರಿದಂತೆ ಭೀಮಾ ನದಿ ಸಂಪೂರ್ಣ ಒಣಗಿ ಹೋಗಿದ್ದರಿಂದ ನದಿ ತೀರದ 136 ಗ್ರಾಮಗಳ ಪರಿಸ್ಥಿತಿ ಗಂಭೀರವಾಗಿತ್ತು. ಈ ಭಾಗದ ಜನ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಉದ್ದೇಶಕ್ಕಾಗಿ ನಾರಾಯಣಪುರ ಜಲಾಶಯದಿಂದ ಕಾಲುವೆ ಮೂಲಕ ಭೀಮಾ ನದಿಗೆ ನೀರನ್ನು ಬಿಡುಗಡೆ ಮಾಡಲು ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರು ಆದೇಶ ಹೊರಡಿಸಿದ್ದಾರೆ. ದಿನಂಪ್ರತಿ 300 ಕ್ಯೂಸೆಕ್ ನೀರು ಹರಿದು ಬರಲಿದ್ದು, ಕಳೆದ ಶನಿವಾರ ನೀರು ಬಿಡುಗಡೆ ಮಾಡಿದ್ದರಿಂದ ಭೀಮಾ ನದಿಯ ನೀರು ಹರಿದು ಬರುತ್ತಿದೆ.



ಕಲಬುರಗಿ ಜಿಲ್ಲಾಧಿಕಾರಿಗಳ ಪ್ರಸ್ತಾವನೆ ಹಾಗೂ ಕೃಷ್ಣಾಭಾಗ್ಯ ಜಲ ನಿಗಮದ ಮುಖ್ಯ ಅಭಿಯಂತರರ ತಾಂತ್ರಿಕ ಅಭಿಪ್ರಾಯದ ವರದಿಯನ್ವಯ ಈ ಕ್ರಮ ಕೈಗೊಳ್ಳಲಾಗಿದೆ. ನಾರಾಯಣಪೂರ ಜಲಾಶಯದಿಂದ ಇಂಡಿ ಶಾಖಾ ಕಾಲುವೆಯ ಎಸ್ಕೇಪ್ 34.10 ಕಿ.ಮೀ ಮತ್ತು 50.00 ಕಿ.ಮೀ ಮುಖಾಂತರ 1.20 ಟಿ.ಎಂ.ಸಿ ನೀರನ್ನು ಭೀಮಾನದಿಗೆ ಹರಿಸಲಾಗುತ್ತಿದೆ. ದಿನಂಪ್ರತಿ 300 ಕ್ಯೂಸೆಕ್‌ನಂತೆ ಈ ನೀರನ್ನು ಹರಿಸುತ್ತಿರುವುದರಿಂದ ಸಂಪೂರ್ಣ ಬತ್ತಿದ್ದ ಭೀಮೆಯ ಒಡಲು ಇದೀಗ ಹಸಿಯಾಗುತ್ತಿದೆ.

ಕೃಷ್ಣಾಭಾಗ್ಯ ಜಲ ನಿಗಮದ ನಾರಾಯಣಪೂರ ಹಾಗೂ ಭೀಮರಾಯನಗುಡಿಯ ಮುಖ್ಯ ಅಭಿಯಂತರರು ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಸೂಚಿಸಲಾಗಿದೆ.

## ನವೋದ್ಯಮಕ್ಕೆ ಮಹತ್ವದ ವೇದಿಕೆ: ಶರಣಬಸಪ್ಪ ಪಪ್ಪಾ

**ಕಲಬುರಗಿ, ಜು. 23:** ಕಲ್ಯಾಣ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ (ಕೆಕೆಸಿಸಿಐ)ಯ 60ನೇ ವರ್ಷದ ಸ್ಮರಣಾರ್ಥ ನಿರ್ಮಾಣವಾಗುತ್ತಿರುವ ಡೈಮಂಡ್ ಜುಬಿಲಿ ಬಿಜಿನೆಸ್ ಇನ್‌ಕ್ಯುಬೇಶನ್ ಮತ್ತು ತರಬೇತಿ ಕೇಂದ್ರ ಉದ್ಯಮಶೀಲತೆ, ಸ್ಟಾರ್ಟಪ್, ಕೌಶಲಾಭಿವೃದ್ಧಿ, ನವೋದ್ಯಮ ಹಾಗೂ ಸಾಮರ್ಥ್ಯ ವೃದ್ಧಿಗೆ ಮಹತ್ವದ ವೇದಿಕೆ ಯಾಗಲಿದೆ ಎಂದು ಸಂಸ್ಥೆ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಹೇಳಿದರು.



ಧರಿಯಾಪುರ–ಕೋಟನೂರು ಜಸ್ಟ್ ಕ್ಲಬ್ ಹಿಂಭಾಗದ ಪ್ರಸ್ತಾವಿತ ಜಾಗದಲ್ಲಿ ಆಯೋಜಿಸಿದ್ದ ಡೈಮಂಡ್ ಜುಬಿಲಿ ಬಿಜಿನೆಸ್ ಇನ್‌ಕ್ಯುಬೇಶನ್ ಸೆಂಟರ್ ಕೇಂದ್ರದ ಭೂಮಿಪೂಜೆ ಕಾರ್ಯಕ್ರಮದಲ್ಲಿ ಅವರು, ಈ ಕೇಂದ್ರ ಕಲ್ಯಾಣ ಕರ್ನಾಟಕ ಭಾಗದ ಯುವಕರು, ಉದ್ಯಮಿಗಳು ಹಾಗೂ ಎಂಎಸ್ಎಂಇಗಳಿಗೆ ಹೊಸ ಅವಕಾಶ ಗಳನ್ನು ಸೃಷ್ಟಿಸಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

## ಜಿಲ್ಲೆಯಲ್ಲಿ ನಿರಂತರ ಜಿಟಿಜಿಟಿ ಮಳೆ: ಜನಜೀವನ ಅಸ್ತವ್ಯಸ್ತ



**ಬೀದರ್, ಜು. 23:** ಮಳೆಗಾಲ ಆರಂಭವಗಿ ಇನ್ನೇನು ಎರಡು ತಿಂಗಳು ಸಮೀಪಿಸುತ್ತಿದ್ದರೂ ಒಂದೇ ನಗರವೂ ಸೇರಿದಂತೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ನಿರಂತರ ಜಿಟಿಜಿಟಿ ಸೋನೆ ಮಳೆ ಹತ್ತಿಕೊಂಡು ಜನಜೀವನವೇ ಅಸ್ತವ್ಯಸ್ತಗೊಳಿಸಿದೆ.

ಮಳೆ ಬಂದರೆ ಒಳ್ಳೆಯದು. ಮಳೆಗಾಗಿ ಜನ ಜಾನುವಾರುಗಳು ಪರಿತಪಿಸುತ್ತಿದ್ದರು. ಆದರೆ ಈಗ ಬರುತಿರುವ ಮಳೆಯಿಂದ ನದಿ ಹಳ್ಳ, ಕರೆಗಳಲ್ಲಿ ನೀರು ಬರುವದಿಲ್ಲ. ಅಂತರ್‌ಜಲ ಹೆಚ್ಚಿ ಬತ್ತಿರುಬ ಕೊಳವೆಭಾವಿಗಳು ಮರುಜೀವ ಪಡೆಯುವದಿಲ್ಲ. ಕುಡಿಯುವ ನೀರಿಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ. ಆದರೆ ಬಿತ್ತನೆ ಮಡಲು ಒಂದಷ್ಟು ನೆಲ ಹಸಿಯಾಗುತ್ತದೆ. ರೈತರು ರಿಸ್ಕ್ ತೆಗೆದುಕೊಂಡು ಬಿತ್ತನೆ ಮಾಡಬೇಕಾಗುತ್ತದೆ. ಮುಂದೆ ಮಳೆ ಬರುತ್ತೋ ಇಲ್ಲವೋ ಗೊತ್ತಿಲ್ಲ. ಬಿತ್ತಿದ ಬೀಜ ಮೇಲೇಳುತ್ತೋ ಇಲ್ಲವೋ ಗೊತ್ತಿಲ್ಲ. ದೇವರ ಮೇಲೆ ಭಾರ ಹಾಕುವುದೆಂದು ರೈತರು ಹೇಳುತ್ತಿದ್ದಾರೆ. ಮೊನ್ನೆ ಮಂಗಳವಾರ ಸಂಜೆ ಏಳು ಗಂಟೆಗೆ ಶುರುವಾದ ಜಹಿಟಿಜಿಟಿ ಸೋನೆ ಮಳೆ ರಾತ್ರಿ 10.45ರ ನಂತರವೂ ಮುಂದುವರೆದಿತ್ತು. ಸತತ ಮಳೆಗೆ ನಗರದ ಪ್ರಮುಖ ರಸ್ತೆಗಳಲ್ಲಿ ರಾಡಿ ರಡಿಯಾಗಿವೆ. ಅನೇಕ ಕಡೆ ನೀರು ಸಂಗ್ರಹಗೊಂಡಿದ್ದು, ವಾಹನ ಸವಾರರು ಪರದಾಟ ನಡೆಸಿದರು. ವಾಹನ ಸಂಚಾರ ನಿಧಾನಗೊಂಡಿತು.

ಇಂದು ಬೆಳಿಗ್ಗೆಯಿಂದಲೇ ಮೋಡ ಕವಿದ ವಾತಾವರಣ ಇತ್ತು. ದಿನವಿಡೀ ಬಿಟ್ಟು ಬಿಟ್ಟು ಮಳೆಯಾಗುತ್ತಿದೆ. ನಿರಂತರ ಮಳೆ ಒಂದಷ್ಟು ದೊಡ್ಡ ಮಳೆಯಾದರೆ ಅನುಕೂಲವಾಗುತ್ತದೆ. ಆದರೆ ದೊಡ್ಡ ಮಳೆಯಾಗುತ್ತಿಲ್ಲ. ಬೀದರ್ ಸೇರಿದಂತೆ ಔರಾದ್, ಹುಮನಾಬಾದ್, ಚಿಟಗುಪ್ಪ ಹಾಗೂ ಭಾಲ್ಕಿಯ ಕೆಲವೆಡೆ ಇದೇ ರೀತಿ ಮಳೆಯಾಗುತ್ತಿದೆ ಎಂದು ವರದಿಯಾಗಿದೆ. ಮಳೆಗಾಲ ಆರಂಭಗೊಂಡ ನಂತರ ಇದೇ ಮೊದಲ ಬಾರಿಗೆ ಮಳೆಯಾಗುತ್ತಿರುವುದು ಸಂತಸಪಡುವಂತಾಗಿದೆ. ಜೂನ್, ಜುಲೈನಲ್ಲಿ ಉತ್ತಮ ಮಳೆಯಾಗದ ಕಾರಣ ಬಿತ್ತನೆ ಮಾಡಿದ ರೈತರು ಚಿಂತಕ್ರಾಂತರಾಗಿದ್ದರು. ಅವರಿಗೊಂದಿಷ್ಟು ಚೇತನ ಮೂಡಿದಂತಾಗಿದೆ. ಇನ್ನೂ ಕೆಲವರಿಗೆ ಬಿತ್ತನೆಗೆ ಸಾಧ್ಯವಾಗಲಿದೆ ಎನ್ನಲಾಗುತ್ತಿದೆ.

### ಬಳ್ಳಾರಿಯ ತಾರಾನಾಥ ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯದ ಸುವರ್ಣ ಸಂಭ್ರಮ

## ಆಯುರ್ವೇದ ಸೇವೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಾಧನೆ ಸಂಸ್ಥೆಗೆ ಹೆಮ್ಮೆ: ಡಾ.ಸೈಯದ್ ಅತ್ತಾರ್ ಫಾತಿಮಾ ಶ್ಲಾಘನೆ

**ಬಳ್ಳಾರಿ,ಜು.23.** ಅತ್ಯಂತ ಸರಳ ಕನಸಿನೊಂದಿಗೆ ಆರಂಭವಾದ ಈ ಮಹಾವಿದ್ಯಾಲಯ ಇಂದು ಹೆಮ್ಮರವಾಗಿ ಬೆಳೆದಿದೆ. ಇಲ್ಲಿ ವ್ಯಾಸಂಗ ಮಾಡಿದ ಹಳೆಯ ವಿದ್ಯಾರ್ಥಿಗಳು ಇಂದು ಕರ್ನಾಟಕ ಮಾತ್ರವಲ್ಲದೆ ದೇಶದ ವಿವಿಧ ಭಾಗಗಳಲ್ಲಿ ಆಯುರ್ವೇದ ಸೇವೆ ಸಲ್ಲಿಸುತ್ತಿರುವುದು ಸಂಸ್ಥೆಗೆ ಹೆಮ್ಮೆಯ ವಿಷಯ ಎಂದು ಸಂಸ್ಥೆಯ ನಿವೃತ್ತ ಪ್ರಾಂಶುಪಾಲ ಡಾ. ಸೈಯದ್ ಅತ್ತಾರ್ ಫಾತಿಮಾ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಸಂಭ್ರಮವು ಕೇವಲ ಐವತ್ತು ವರ್ಷಗಳ ಆಚರಣೆಯಲ್ಲ, ಬದಲಾಗಿ ಶತಮಾನೋತ್ಸವದತ್ತ ಸಾಗುತ್ತಿರುವ ಸಂಸ್ಥೆಯ ಪರಿವರ್ತನೆಯ ಪಯಣವಾಗಿದೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ರಾಜಶೇಖರ್ ಎಸ್. ಗಾಣಿಗೇರ ಅವರು, ಈ ಸುವರ್ಣ ಸಂಭ್ರಮವು ಸಂಸ್ಥೆಯ ಸುದೀರ್ಘ ಸಾಧನೆಗಳನ್ನು ಸ್ಮರಿಸುವುದರ ಜೊತೆಗೆ ಶತಮಾನೋತ್ಸವದತ್ತ ಸಾಗುವ ಅಭಿವೃದ್ಧಿಯ ಪಯಣಕ್ಕೆ ಹೊಸ ದಿಕ್ಕು ನೀಡಲಿದೆ ಎಂದು ಅಭಿಪ್ರಾಯಪಟ್ಟರು.

ಕೆಎಂಇಆರ್‌ಸಿ ಅನುದಾನದಡಿ ನಡೆಯುತ್ತಿರುವ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು ಹಾಗೂ ಮಹಾವಿದ್ಯಾಲಯದ ಶೈಕ್ಷಣಿಕ ಮತ್ತು ಆಸ್ಪತ್ರೆಯ ಸೇವಾವಿಸ್ತರಣೆಯ ಕುರಿತು ವಿವರಣೆ ನೀಡಿದ ಅವರು ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಕೈಗೊಳ್ಳಲಾಗಿರುವ ವಿವಿಧ ಯೋಜನೆಗಳ ಕುರಿತು ಮಾಹಿತಿ ನೀಡಿದರು.



**ಪಂಡಿತ್ ತಾರಾನಾಥ್ ಅವರ ಕಂಚಿನ ಪುತ್ಥಳಿ ನಿರ್ಮಾಣಕ್ಕೆ ಭೂಮಿಪೂಜೆ:** ಸುವರ್ಣ ಸಂಭ್ರಮದ ಅಂಗವಾಗಿ, ಸಂಸ್ಥೆಯ ಸಂಸ್ಥಾಪಕರಾದ ವೈದ್ಯರತ್ನ ಪಂಡಿತ್ ತಾರಾನಾಥ್ ಅವರ ಕಂಚಿನ ಪುತ್ಥಳಿ ನಿರ್ಮಾಣಕ್ಕೆ ಸಂಸ್ಥೆಯ ಆವರಣದಲ್ಲಿ ಭೂಮಿಪೂಜೆ ನೆರವೇರಿಸಲಾಯಿತು.

ಕಾರ್ಯಕ್ರಮದಲ್ಲಿ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಹಳೆಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಡಾ.ಮರಿದೇವ ಶರ್ಮಾ, ವೈದ್ಯರತ್ನ ತಾರಾನಾಥ ಅವರ ಸ್ಮರಣಾರ್ಥ ಮಹಾವಿದ್ಯಾಲಯದ ಆವರಣದಲ್ಲಿ ಕಂಚಿನ ಪುತ್ಥಳಿಯನ್ನು ಪ್ರತಿಷ್ಠಾಪಿಸಲಾಗುತ್ತಿದೆ.\

ಈ ಪುತ್ಥಳಿಯು ಸಂಸ್ಥಾಪಕರ ಆದರ್ಶ ಹಾಗೂ ಸಂಸ್ಥೆಯ ವೈಭವಶಾಲಿ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಶಾಶ್ವತ ಸ್ಮಾರಕವಾಗಲಿದೆ ಎಂದು ತಿಳಿಸಿದರು.

ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ರಾಜಶೇಖರ್ ಎಸ್. ಗಾಣಿಗೇರ ಅವರು ಮಾತನಾಡಿ, ಸುವರ್ಣ ಸಂಭ್ರಮದ ಅಂಗವಾಗಿ ನಡೆದ ಈ ಭೂಮಿಪೂಜೆಯು ಸಂಸ್ಥೆಯ ಇತಿಹಾಸದಲ್ಲೇ ಅತ್ಯಂತ ಮಹತ್ವದ ಮೈಲಿಗಲ್ಲಾಗಿದೆ.

ಹಲವಾರು ಏಳುಬೀಳುಗಳನ್ನು ದಾಟಿ ಹೆಮ್ಮರವಾಗಿ ಬೆಳೆದಿರುವ ಈ ಸಂಸ್ಥೆಯು ಸಾವಿರಾರು ವಿದ್ಯಾರ್ಥಿಗಳಿಗೆ ಗುಣಮಟ್ಟದ ಆಯುರ್ವೇದ ಶಿಕ್ಷಣ ಹಾಗೂ ಲಕ್ಷಾಂತರ ರೋಗಿಗಳಿಗೆ ಆರೋಗ್ಯ ಸೇವೆ ನೀಡುವ ಮೂಲಕ ಸಮಾಜದಲ್ಲಿ ವಿಶಿಷ್ಟ ಸ್ಥಾನ ಗಳಿಸಿದೆ ಎಂದು ಹರ್ಷ ವ್ಯಕ್ತಪಡಿಸಿದರು.

# ತಂಬಾಕು ಬೆಳೆಗಾರರಿಗೆ ನೀಡುವ ಬಡ್ಡಿರಹಿತ ಸಾಲದ ಮೊತ್ತ ಹೆಚ್ಚಳ: ಕೇಂದ್ರಕ್ಕೆ ಸಂಸದ ಯದುವೀರ ಒಡೆಯರ್ ಕೃತಜ್ಞತೆ

**ಮೈಸೂರು, ಜು.23:** ಪ್ರಾಕೃತಿಕ ವಿಕೋಪಗಳಿಂದ ಹಾನಿಗೊಳಗಾದ ಎಫ್‌ಸಿವಿ ತಂಬಾಕು ಬೆಳೆಗಾರರಿಗೆ ಮಹತ್ವದ ಪರಿಹಾರವಾಗಿ, ಕೇಂದ್ರ ಸರ್ಕಾರವು ತಂಬಾಕು ಮಂಡಳಿಯ ಮೂಲಕ ನೀಡಲಾಗುವ ಅನುದಾನ ಮತ್ತು ಬಡ್ಡಿರಹಿತ ಸಾಲದ ಮೊತ್ತವನ್ನು ಹೆಚ್ಚಿಸಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.

ಈ ಬಗ್ಗೆ ಪ್ರಕಟಣೆ ನೀಡಿರುವ ಅವರು, ಪ್ರಾಕೃತಿಕ ವಿಕೋಪಗಳಿಂದ ತಂಬಾಕು ಬೆಳೆಗಾರರು ಎದುರಿಸುತ್ತಿರುವ ಸಂಕಷ್ಟವನ್ನು ಮನಗಂಡು, ಅವರಿಗೆ ನೀಡಲಾಗುತ್ತಿರುವ ಆರ್ಥಿಕ ನೆರವನ್ನು ಹೆಚ್ಚಿಸುವಂತೆ ಕೋರಿದ್ದೆ. ಈ ಪರಿಣಾಮ, ತಂಬಾಕು ಮಂಡಳಿಯು ಅನುದಾನ ಹಾಗೂ ಬಡ್ಡಿರಹಿತ ಸಾಲದ ಮೊತ್ತವನ್ನು 50ಸಾವಿರದಿಂದ 75 ಸಾವಿರಕ್ಕೆ ಹೆಚ್ಚಿಸುವುದರೊಂದಿಗೆ, ಇತರ ನೆರವಿನ ವಿಭಾಗಗಳಲ್ಲೂ ಪರಿಷ್ಕೃತ ಮಾರ್ಗಸೂಚಿಗಳಂತೆ ಆರ್ಥಿಕ ನೆರವನ್ನು ಹೆಚ್ಚಿಸಿದೆ ಎಂದು ಮಾಹಿತಿ ನೀಡಿದ್ದಾರೆ.1

ಈ ಪರಿಷ್ಕೃತ ನೆರವು ಪ್ರಾಕೃತಿಕ ವಿಕೋಪದಿಂದ ಸಂಕಷ್ಟಕ್ಕೆ ಒಳಗಾದ ತಂಬಾಕು ಬೆಳೆಗಾರರಿಗೆ ಸಕಾಲದಲ್ಲಿ ಆರ್ಥಿಕ ಬಲ ನೀಡುವ ಜೊತೆಗೆ, ಅವರ ಜೀವನೋಪಾಯ ಪುನರುಜ್ಜೀವನಗೊಳಿಸಲು ನೆರವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ಕರ್ನಾಟಕದ ತಂಬಾಕು ಬೆಳೆಗಾರರಿಗೂ ನ್ಯಾಯಸಮ್ಮತ ಬೆಂಬಲ ಬೆಲೆ ದೊರಕುವಂತೆ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳಬೇಕು. ಆಂಧ್ರಪ್ರದೇಶದ ತಂಬಾಕು ಬೆಳೆಗಾರರಂತೆಯೇ ಇಲ್ಲಿಯವರನ್ನೂ ಪರಿಗಣಿಸಬೇಕು. ಕರ್ನಾಟಕದ ರೈತರೂ ಸಮಾನ ಮಾನ್ಯತೆ ಮತ್ತು ರಕ್ಷಣೆಗೆ ಅರ್ಹರು ಎಂಬುದನ್ನು ಮರೆಯಬಾರದು ಎಂದು ಕೋರಿದ್ದಾರೆ.

ಪರಿಷ್ಕೃತ ಯೋಜನೆಯಡಿ ಅರ್ಹರಾಗಿರುವ ಮೈಸೂರು ಹಾಗೂ ಕೊಡಗು ಜಿಲ್ಲೆಗಳ ತಂಬಾಕು ಬೆಳೆಗಾರರು ಮಂಡಳಿಯ ಕಚೇರಿಗಳನ್ನು ಸಂಪರ್ಕಿಸಿ ಸೌಲಭ್ಯ ಪಡೆದುಕೊಳ್ಳಬೇಕು ಎಂದು ಕೋರಿದ್ದಾರೆ.

### ಭಗವಾನ್ ಮಹಾವೀರ್ ಜೈನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

# ಜ್ಞಾನ, ಅಧ್ಯಾತ್ಮದ ಭೂಮಿ ಕರ್ನಾಟಕ: ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಬಣ್ಣನೆ

**ಗದಗ, ಜು.23:** ಜಿಲ್ಲೆಯ ಗಜೇಂದ್ರಗಡದ ಟಿ.ಟಿ.ಡಿ. ಕಲ್ಯಾಣ ಮಂಟಪದ ಆವರಣದಲ್ಲಿ ಗುರುವಾರ ಆಯೋಜಿಸಿದ್ದ ಭಗವಾನ್ ಮಹಾವೀರ್ ಜೈನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

ಕರ್ನಾಟಕವು ಜ್ಞಾನ, ಅಧ್ಯಾತ್ಮದ ಭೂಮಿ. ಹಲವರ ಯೋಗದಾನದಿಂದ ರಾಜ್ಯವು ಶ್ರೇಷ್ಠತೆ ಗಳಿಸಿದೆ. ಪ್ರಕೃತಿ ಚಿಕಿತ್ಸಾ ಕ್ಷೇತ್ರಕ್ಕೂ ಗಣನೀಯ ಕೊಡುಗೆ ನೀಡಿದೆ. ಆಯುರ್ವೇದದಲ್ಲಿ ಕರುಣೆ, ಸೇವೆಯ ಉದ್ದೇಶ ಅಡಗಿದೆ.

ಭಗವಾನ್ ಮಹಾವೀರನ ಸಂದೇಶವು ಇದೇ ಆಗಿದೆ. ನಮ್ಮ ದೇಶದಲ್ಲಿ ವೈದ್ಯರಿಗೆ ದೇವರ ಸ್ಥಾನ ನೀಡಲಾಗಿದ್ದು, ಇಂದು ಪದವಿ ಪಡೆದವರು, ಮುಂದೆ



ವೈದ್ಯರಾಗಿ ಮಾನವ ಸೇವೆ ಮಾಡುವ ಸಂಕಲ್ಪ ಮಾಡಬೇಕು ಎಂದು ಹೇಳಿದರು.

ಆಯುರ್ವೇದವು ಪ್ರಾಚೀನ ಹಾಗೂ ವೈಜ್ಞಾನಿಕ ಚಿಕಿತ್ಸಾ ಪರಂಪರೆಯಾಗಿದೆ. ಸ್ವಸ್ಥ ಜೀವನ ಸಂಪೂರ್ಣ ದರ್ಶನ ಇದರ ಧ್ಯೇಯವಾಗಿದೆ. ಆತ್ಮ, ಇಂದ್ರಿಯ, ಮನಸ್ಸನ್ನು ಸಂತುಲಿತ ಗೊಳಿಸುತ್ತದೆ. ಋಷಿ ಮನಿಗಳ ಚಿಂತನೆಯಿಂದ ಆವಿಷ್ಕಾರಗೊಂಡ ಆಯುರ್ವೇದ ಕ್ಷೇತ್ರದ ವ್ಯಾಪ್ತಿ ವಿಸ್ತಾರವಾಗಿದೆ ಎಂದು ತಿಳಿಸಿದರು.

ಯೋಗ ಹಾಗೂ ಆಯುರ್ವೇದ ಭಾರತದ ಮಹತ್ವ ಹೆಚ್ಚಿಸಿದೆ. ಭಾರತದ ಈ ಜ್ಞಾನವು ಆಧುನಿಕತೆಯೊಂದಿಗೆ ಅನುಸಂಧಾನವಾಗಬೇಕು. ಆಯುರ್ವೇದ ವಿದ್ಯಾರ್ಥಿಗಳು ವೈಜ್ಞಾನಿಕ ಅಧ್ಯಯನ, ಕ್ಲಿನಿಕಲ್ ಸಂಶೋಧನೆ ಹಾಗೂ ಔಷಧ ಸಂರಕ್ಷಣೆ ಮೂಲಕ ಆಯುರ್ವೇದವನ್ನು ವಿಶ್ವದ ಎದುರು ಪ್ರಸ್ತುತಪಡಿಸಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸರ್ಕಾರವು ಆಯುಷ್ ಸಚಿವಾಲಯ ವನ್ನು ಸಶಕ್ತಗೊಳಿಸುತ್ತಿದೆ. ಆಯುರ್ವೇದ ಶಿಕ್ಷಣಕ್ಕೆ ಆಧುನಿಕತೆಯ ಸ್ಪರ್ಶ ನೀಡಲಾಗಿದೆ. ಆಯುರ್ವೇದ ವೈದ್ಯರು ಭಗವಾನ್ ಮಹವೀರನ ಕರುಣೆ, ನೈತಿಕತೆಯ ಸಂದೇಶ ಪಾಲಿಸಿ. ಇದರಿಂದ ವೈಯಕ್ತಿಕ ಅಭಿವೃದ್ಧಿಯೊಂದಿಗೆ ರಾಷ್ಟ್ರದ ಪ್ರಗತಿಯೂ ಸಾಧ್ಯವಾಗುತ್ತೆ ಎಂದು ಅಭಿಪ್ರಾಯಪಟ್ಟರು.

# ಸಾಂಪ್ರದಾಯಿಕ ಕುಂಬಾರಿಕೆ: ಪರಿಸರಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳ ತಯಾರಿಯಲ್ಲಿ ಚಿಕ್ಕಮುಳುಗೂಡು ಗ್ರಾಮಸ್ಥರು

**ಮಂಡ್ಯ, ಜು.23:** ಆಧುನಿಕತೆಯ ಅಲೆಯ ನಡುವೆ ಪಾರಂಪರಿಕ ಕಸುಬುಗಳು ನಶಿಸುತ್ತಿರುವ ಈ ಕಾಲದಲ್ಲಿ, ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಚಿಕ್ಕಮುಳುಗೂಡು ಗ್ರಾಮದ ಯುವಕರು , ಹೊಸ ಮಾದರಿಯೊಂದನ್ನು ಸೃಷ್ಟಿಸಿದ್ದಾರೆ. ತಮ್ಮ ಸಾಂಪ್ರದಾಯಿಕ ಕುಂಬಾರಿಕೆ ಕಲೆಯನ್ನು ಸೃಜನಶೀಲವಾಗಿ ಬಳಸಿಕೊಂಡು, ಪರಿಸರಸ್ನೇಹಿ ಮಣ್ಣಿನ ಗಣಪತಿ ಮೂರ್ತಿಗಳನ್ನು ತಯಾರಿಸುವ ಮೂಲಕ , ಸುಮಾರು 15ರಿಂದ 16 ಕುಟುಂಬಗಳ ಯುವಕರು ಸ್ವಯಂ ಉದ್ಯೋಗ ಕಂಡು ಕೊಂಡಿದ್ದಾರೆ.



ಮೂರ್ತಿ ತಯಾರಕರಾದ ಚೌಡಮ್ಮ ಮಾತನಾಡಿ, ಸಾಂಪ್ರದಾಯಿಕ ಕಸುಬನ್ನೇ ನಂಬಿಕೊಂಡು ಬಂದಿರುವ ನಮ್ಮ ಕುಟುಂಬದ ಇಬ್ಬರು ಮಕ್ಕಳು ಇದೇ ಕೆಲಸದಲ್ಲಿದ್ದಾರೆ. ಕಳೆದ 40 ವರ್ಷಗಳಿಂದ ಇದೇ ಕೆಲಸ ಮಾಡಿಕೊಂಡು ಬಂದಿದೇವೆ. ನಮ್ಮ ಸಾಂಪ್ರದಾಯಿಕ ಕಸುಬನ್ನು ಗುರುತಿಸಿ ಸರ್ಕಾರ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು.

ಮೂರ್ತಿ ತಯಾರಕ ಶಿವರಾಜು ಮಾತನಾಡಿ, ನಾವು ಉನ್ನತ ಶಿಕ್ಷಣ ಪಡೆದಿದ್ದರೂ, ತಂದೆ-ತಾಯಂದಿರ ಪರಂಪರೆ ಹಾಗೂ ಹೆಸರನ್ನು ಉಳಿಸಲು, ಈ ಕಸುಬಿನಲ್ಲಿ ನಿರತರಾಗಿದ್ದೇವೆ. ಸರ್ಕಾರ ನಮಗೆ ಸಬ್ಸಿಡಿ ಅಥವಾ ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡಿದರೆ, ಇನ್ನು ಸಾವಿರಾರು ಕುಟುಂಬಗಳು ಸ್ವಾವಲಂಬಿಯಾಗಿ ಬದುಕಬಹುದು ಎಂದು ಅಭಿಪ್ರಾಯಪಟ್ಟರು.

ಮೂರ್ತಿ ತಯಾರಕ ಸುನಿಲ್ ಕುಮಾರ್ ಮಾತನಾಡಿ, ನಾವು , ಕಳೆದ 45 ವರ್ಷಗಳಿಂದ ಇದೇ ಕಸುಬು ಮಾಡುತ್ತಿದ್ದೇವೆ. 6 ತಿಂಗಳು ಕಷ್ಟಪಟ್ಟು ಮೂರ್ತಿಗಳನ್ನು ತಯಾರಿಸುತ್ತೇವೆ. ಆದರೆ ಪಿಒಪಿ ಮೂರ್ತಿಗಳ ಹಾವಳಿಯಿಂದಾಗಿ ನಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ. ಸಾರ್ವಜನಿಕರು ಮಣ್ಣಿನ ಗಣಪತಿಗಳನ್ನೇ ಬಳಸಿ, ನಮ್ಮನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಗ್ರಾಮಸ್ಥರಾದ ಗುರು, ನಮ್ಮ ಊರಿನ ಯುವಕರು ಬೇರೆಡೆಗೆ ಗುಳೆ ಹೋಗದೆ, ಕಠಿಣ ಪರಿಶ್ರಮದಿಂದ ಪರಿಸರ ಸ್ನೇಹಿ ಮೂರ್ತಿಗಳನ್ನು ಮಾಡಿ ಕಲೆಗೆ ಜೀವ ತುಂಬಿದ್ದಾರೆ ಎಂದರು.

ಮತ್ತೋರ್ವ ಗ್ರಾಮಸ್ಥ ಗಣಪತಿ ಮಾತನಾಡಿ, ಪಾರಂಪರಿಕ ಕಸುಬಿನಿಂದಲೇ ಸ್ವಾವಲಂಬನೆಯ ಬದುಕು ಕಟ್ಟಿಕೊಂಡಿರುವ ಈ ಯುವಕರ ಕಲಾಕೌಶಲ್ಯಕ್ಕೆ ಸರ್ಕಾರದ ಬೆಂಬಲ ಅತ್ಯಗತ್ಯ ಎಂ ದರು.

# ಸನ್ಮಾರ್ಗದಲ್ಲಿ ಮನುಷ್ಯ ಬದುಕಿದರೆ ಜೀವನ ಉಜ್ವಲ: ಶ್ರೀ ರಂಭಾಪುರಿ ಜಗದ್ಗುರುಗಳ ಕರೆ

**ಲಿಂಗಸುಗೂರು-ಜು 23:** ಸತ್ಯ ಮನುಷ್ಯನನ್ನು ಬದಲಿಸುತ್ತದೆ. ಮನುಷ್ಯನ ನಡೆ ನುಡಿಗಳು ಯಾವಾಗಲೂ ಸತ್ಯದ ಪರ ವಾಗಿರಬೇಕು.

ಮನಕ್ಕೆ ಶಾಂತಿ ಆತ್ಮಕ್ಕೆ ಆನಂದ ಕೊಡುವುದೇ ನಿಜವಾದ ಧರ್ಮ. ಮಹಾತ್ಮರು ತೋರಿದ ಸನ್ಮಾರ್ಗದಲ್ಲಿ ಮನುಷ್ಯ ಬಾಳಿ ಬದುಕಿದರೆ ಬದುಕು ಉಜ್ವಲಗೊಳ್ಳುವುದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ದೇವರ ಭೂಪುರ ಬೃಹನ್ಮಠದ ಅಭಿನವ ಗಜದಂಡ ಶಿವಾಚಾರ್ಯರ 21ನೇ ವರ್ಷದ ಶ್ರೀ ಗುರು ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಜರುಗಿದ ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಸದ್ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಬದುಕು ಬಲು ಸುಂದರ. ಅರಿತು ಬಾಳಿದರೆ ಬಾಳು ಬಂಗಾರ. ಮರೆತು ಮಲಗಿದರೆ ಬಂಧನಕಾರಿ. ಬದುಕು ಸುಖ ದು:ಖ, ನೋವು ನಲಿವು ಮಾನ ಅಪಮಾನ, ಜಯ ಅಪಜಯ ಮೊದಲಾದ ದ್ವಂದ್ವಗಳಿಂದ ಕೂಡಿದೆ. ಅಂತರಂಗದ ಬೆಳಕಿಗಿಂತ ಬಹಿರಂಗದ ಬೆಳಕೇ ಹೆಚ್ಚೆಂದು ಮನುಷ್ಯ ತಿಳಿಯುತ್ತಾನೆ.

ಹೊನ್ನು, ಹೆಣ್ಣು ಮತ್ತು ಮಣ್ಣಿಗಾಗಿ ಹೋರಾಡಿ ಸತ್ತವರು ಕೋಟಿ ಕೋಟಿ ಜನ. ಆದರೆ ಭಗವಂತನಿಗಾಗಿ ಹಂಬಲಿಸಿ ಸತ್ತವರನ್ನು ಕಾಣಲಾಗ ದೆಂದು ಮಹಾತ್ಮರು ಎಚ್ಚರಿಸಿದ್ದಾರೆ. ಜಾತಿ, ಮತ ಭ್ರಾಂತಿಯಲ್ಲಿ ತೊಡಗಿದ ಮನುಷ್ಯನಿಗೆ ಶಾಂತಿ ಸಹಿಷ್ಣುತೆ ಇರಲಾರದು. ಮೌಲ್ಯಗಳ ಅಳಿವು ಉಳಿವು ಮಾನವನ ಆಚರಣೆಯಲ್ಲಿವೆ.

ಶ್ರೀ ಜಗದ್ಗುರು ರೇಣುಕಾಚಾರ್ಯರು ಜೀವನ ದರ್ಶನ ಸಂದೇಶದಲ್ಲಿ ಅಮೂಲ್ಯವಾದ ಬೋಧನೆಯನ್ನು ಮಾಡಿದ್ದಾರೆ. ಭೂ ಕೈಲಾಸ ಎನಿಸಿದ ದೇವರ ಭೂಪುರ ತೊಪ್ಪಿನಕಟ್ಟಿ ಬೃಹನ್ಮಠದ ಅಭಿನವ ಗಜದಂಡ ಶಿವಾಚಾರ್ಯರ ಪಟ್ಟಾಧಿಕಾರದ 21ನೇ ವರ್ಧಂತಿ ಮಹೋತ್ಸವ ಸುಸಂದರ್ಭದಲ್ಲಿ ಶ್ರೀ ಜಗದ್ಗುರು ಪಂಚ ಪೀಠಾಧೀಶ್ವರರ ಶುಭಾಗಮನ ಈ ಭಾಗದ ಭಕ್ತರ ಸೌಭಾಗ್ಯ ಮತ್ತು ಶ್ರೀಗಳವರ ಪ್ರಾಮಾಣಿಕ ಪ್ರಯತ್ನವೇ ಕಾರಣವೆಂದರು.



ನೀಟ್ ಹಗರಣ ಖಂಡಿಸಿ ಬಾಗಲಕೋಟೆಯಲ್ಲಿ ಗುರುವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

# ನಂಜನಗೂಡು ಬಳಿ 252 ಎಕರೆಯಲ್ಲಿ ಇಎಂಸಿ ಸ್ಥಾಪನೆಗೆ ಕ್ರಮ: ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್

**ಮೈಸೂರು, ಜು.23:** ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಕೋಚನಹಳ್ಳಿಯಲ್ಲಿ 252 ಎಕರೆಯಲ್ಲಿ ಇಎಂಸಿ (ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್) ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದ್ದು, ಇದರಿಂದ ಮೈಸೂರಿಗೆ ಮತ್ತಷ್ಟು ಹೂಡಿಕೆ ಹರಿದುಬರಲಿದೆ' ಎಂದು ರಾಜ್ಯ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ. ಎಸ್.ಸೆಲ್ವಕುಮಾರ್ ಹೇಳಿದರು.

ಇಲ್ಲಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆ-ಡೆಮ್) ಹಾಗೂ ರಾಜ್ಯ ಐಟಿ ಮತ್ತು ಬಿಟಿ ಇಲಾಖೆ ವತಿಯಿಂದ ಗುರುವಾರ ಆಯೋಜಿಸಿದ್ದ 'ಮೈಸೂರು ಬಿಗ್ ಟೆಕ್ ಷೊ-2026' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಂಗಳೂರು ನಂತರದ ಪ್ರಮುಖ ನಗರವಾಗಿ ಮೈಸೂರು ಬೆಳೆಯುತ್ತಿದೆ. ಇಲ್ಲಿ ಕೈಗಾರಿಕೆ, ಉದ್ಯಮಗಳ ಬೆಳವಣಿಗೆಗೆ ಪೂರಕ ವಾತಾವರಣವಿದೆ. ಅದಕ್ಕೆ ತಕ್ಕಂತೆ ಸರ್ಕಾರದಿಂದಲೂ ಉತ್ತೇಜನ ನೀಡಲಾಗುತ್ತಿದೆ. ಭೂಮಿಗೆ ಬಹಳ ಬೇಡಿಕೆ ಬಂದಿದ್ದು, ಭೂಸ್ವಾಧೀನಕ್ಕಾಗಿ ನಾವು ನಂಜನಗೂಡು ದಾಟಿ ಹೋಗುತ್ತಿದ್ದೇವೆ' ಎಂದು ತಿಳಿಸಿದರು.

ದೇಶದಲ್ಲಿ ಕರ್ನಾಟಕವು ರಫ್ತು ವಿಷಯದಲ್ಲಿ ನಂ.1 ಸ್ಥಾನದಲ್ಲಿದೆ. (ಶೇ 24ರಷ್ಟು ಪಾಲು). ಸೇವಾ ರಫ್ತು ವಲಯದಲ್ಲೂ ನಮ್ಮದು ಶೇ 40ರಷ್ಟು ಪಾಲು ಗಳಿಸಿದೆ. ಎಫ್ಡಿಐ ಹೂಡಿಕೆ ಆಕರ್ಷಣೆಯಲ್ಲಿ ರಾಜ್ಯವು 2ನೇ ಸ್ಥಾನದಲ್ಲಿದೆ. ಎಐ ಅಥವಾ ಐಟಿ ಸಿಟಿ ರೂಪಿಸಲು ಮೈಸೂರು ಪ್ರಶಸ್ತವಾಗಿದೆ' ಎಂದು ಹೇಳಿದರು.

ಕಳೆದ ಎರಡು ವರ್ಷಗಳಲ್ಲಿ, ಅನುಮೋದನೆ ಪ್ರಕ್ರಿಯೆಯನ್ನು ಸರಳಗೊಳಿಸಿದ್ದು, ಏಕಗವಾಕ್ಷಿ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಇದರಲ್ಲಿ 110 ಸೇವೆಗಳನ್ನು ಜೋಡಿಸಲಾಗಿದೆ. ಅಫಿಡವಿಟ್ ಆಧಾರಿತ ಕ್ಲಿಯರೆನ್ಸ್ ಸಿಸ್ಟಂ ಪರಿಚಯಿಸಿದ್ದೇವೆ. ಇದರಡಿ, ನಾವು ನೀಡುವ ಸರ್ಟಿಫಿಕೆಟ್



ಆಧರಿಸಿ, ಕಟ್ಟಡ ನಿರ್ಮಾಣಕ್ಕೆ ಮುನ್ನವೇ ಕಾರ್ಯಾಚರಣೆ ಆರಂಭಿಸಬಹುದಾಗಿದೆ.

ಮುಂದೆಯೂ ಮೈಸೂರಿನಲ್ಲಿ ಉದ್ಯಮದ ಬೆಳವಣಿಗೆಗೆ ಉದ್ಯಮಿಗಳ ಪಾತ್ರ ದೊಡ್ಡದಾಗಿದೆ' ಎಂದು ತಿಳಿಸಿದರು.

ಐಟಿ-ಬಿಟಿ ಇಲಾಖೆಯ ಕಾರ್ಯದರ್ಶಿ ಎನ್. ಮಂಜುಳಾ, 'ಕೌಶಲಯುತ ಪ್ರತಿಭೆಗಳು ಅರಳುತ್ತಿರುವ ನಗರವಾಗಿ ಮೈಸೂರು ಗುರುತಿಸಿಕೊಂಡಿದ್ದು, ಬೆಂಗಳೂರಿನಿಂದಾಚೆಗೆ ಉದ್ಯಮ ವಿಸ್ತರಣೆ ಎನ್ನುವುದು ಕೇವಲ ಪರಿಕಲ್ಪನೆಯಾಗಿ ಉಳಿದಿಲ್ಲ, ಅದೀಗ ವಾಸ್ತವವಾಗಿ ಸಾಕಾರಗೊಳ್ಳುತ್ತಿದೆ. ಇನ್ನೂ ಅವಕಾಶಗಳಿವೆ. ಇದಕ್ಕೆ ತಕ್ಕಂತೆ ಸರ್ಕಾರದಿಂದಲೂ ಉತ್ತೇಜನ ನೀಡಲಾಗುತ್ತಿದೆ' ಎಂದರು.'ಎಲ್‌ಇಎಪಿ (ಲೋಕಲ್ ಎಕಾನಮಿ ಅಕ್ಸೆಲರೇಟರ್ ಪ್ರೋಗ್ರಾಂ) ಮೂಲಕ ಮೈಸೂರು, ಮಂಗಳೂರು ಸೇರಿ 2ನೇ ಹಂತದ ನಗರಗಳಿಗೆ ಆದ್ಯತೆ ಕೊಡುತ್ತಿದ್ದೇವೆ. ಪ್ರತ್ಯೇಕವಾಗಿ ಕ್ಲಸ್ಟರ್ ಫಂಡ್ ನೀಡುತ್ತಿದ್ದೇವೆ. ಎಲ್‌ಇಎಪಿ ಕ್ಲಬ್ ರಚಿಸಲಾಗುತ್ತಿದೆ' ಎಂದು ಹೇಳಿದರು.

ನಿಪುಣ ಕಾರ್ಯಕ್ರಮದಲ್ಲಿ ತರಬೇತಿ:-'ಎಲ್‌ಎಚ್‌ಎಆರ್‌ಐ-ಅಡ್ವಾನ್ಸ್ಡ್ ಎಲೆಕ್ಟ್ರಾನಿಕ್ಸ್ ಟೆಸ್ಟ್ ಫೆಸಿಲಿಟಿ ಬರಲಿದ್ದು, ಇದಕ್ಕಾಗಿ 100 ಕೋಟಿ ಬಂಡವಾಳ ಹೂಡಿಕೆ ಆಗುತ್ತಿದೆ. ಕೌಶಲ ವೃದ್ಧಿಗಾಗಿ 'ನಿಪುಣ' ಕಾರ್ಯಕ್ರಮದಲ್ಲಿ ತರಬೇತಿ ಕೊಡಲಾಗುತ್ತಿದ್ದು, ಈವರೆಗೆ 6ಸಾವಿರ ಮಂದಿ ಪಡೆದುಕೊಂಡಿದ್ದಾರೆ. ಶೈಕ್ಷಣಿಕ ಸಂಸ್ಥೆಗಳೊಂದಿಗೆ ಇಂಟರ್ನ್‌ಶಿಪ್ ಮೊದಲಾದವುಗಳಿಗೆ ಸಹಭಾಗಿತ್ವ ನೀಡಲಾಗುತ್ತಿದೆ' ಎಂದು ತಿಳಿಸಿದರು.

'ಡಿಜಿಟಲ್ ಎಕಾನಮಿಗೆ ಸಂಬಂಧಿಸಿದಂತೆ, ದೇಶದಲ್ಲೇ ಮೊದಲನೇ ಬಾರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ಸಮಿತಿ ರಚಿಸಲಾಗಿದೆ. ಮೈಸೂರಿನಲ್ಲಿ ಹೆದ್ದಾರಿಗೆ ಹೊಂದಿಕೊಂಡಂತೆ 50 ಎಕರೆ ಜಾಗ ನೀಡುವಂತೆ ಮೈಸೂರು ಜಿಲ್ಲಾಧಿಕಾರಿಯನ್ನು ಕೋರಲಾಗಿದೆ ಎಂದು ತಿಳಿಸಿದರು.

ಮೈಸೂರಿನ ಕೆಎಸ್‌ಒಯುನಲ್ಲಿ ಜಿಟಿಸಿ (ಗ್ಲೋಬಲ್ ಟೆಸ್ಟಿಂಗ್ ಸೆಂಟರ್) ಸಿದ್ಧವಿದೆ. ಒಂದು ಲಕ್ಷ ಚ.ಅಡಿಯ ಆ ಕಟ್ಟಡದಲ್ಲಿ 80ಸಾವಿರ ಚ.ಅಡಿಯನ್ನು ಉದ್ಯಮಿಗಳ ಅಗತ್ಯಕ್ಕೆ ತಕ್ಕಂತೆ ಬಾಡಿಗೆ ಕೊಡಲಾಗುವುದು. ಮೈಸೂರಿಗೆ ರೂ.25 ಕೋಟಿ ಕ್ಲಸ್ಟರ್ ಸೀಡ್ ಫಂಡ್ ಕೂಡ ದೊರೆತಿದೆ ಎಂದರು.

# ಸಾಮಾಜಿಕ ಚಿಂತನೆಯುಳ್ಳ ನಾಟಕಗಳು ಬರಲಿ: ಉಮಾಶ್ರೀ

**ಕಲಬುರಗಿ, ಜು. 23:** ನಾಟಕಗಳು, ರಂಗಭೂಮಿಯ ಉದ್ದೇಶ ಕೇವಲ ಮನರಂಜನೆಗೆ ಸೀಮಿತ ಆಗಬಾರದು. ಸಾಮಾಜಿಕ ಚಿಂತನೆಗಳುಳ್ಳ ಸಮಕಾಲೀನ ಸಮಸ್ಯೆಗಳನ್ನು ಬಿಂಬಿಸುವಂಥ ನಾಟಕಗಳ ರಚನೆ ಆಗಲಿ ಎಂದು ಮಾಜಿ ಸಚಿವೆ, ಕಲಾವಿದೆ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಹೇಳಿದರು.

ಇತ್ತೀಚೆಗೆ ದೀರ್ಘ ಅವಧಿಗೆ ಪ್ರದರ್ಶನಗೊಳ್ಳುವಂಥ ನಾಟಕಗಳೇ ಇಲ್ಲ. ಒಂದೆಡೆ ಗುಣಮಟ್ಟದ ನಾಟಕಗಳ ಕೊರತೆ ಇದ್ದರೆ, ಮತ್ತೊಂದೆಡೆ ಜನರ ಅಭಿರುಚಿಯೂ ಬದಲಾಗಿದೆ. ಸಿನಿಮಾಗಳ ವ್ಯಾಮೋಹ, ಅದರ ಛಾಪು ಬೀಳುತ್ತ-ಬೀಳುತ್ತ ರಂಗಭೂಮಿಯನ್ನೂ ಅದೇ ಛಾಪಿನೊಳಗೆ ನೋಡಲು ಜನರ ಇಷ್ಟಪಡುತ್ತಿದ್ದಾರೆ. ಅಲ್ಲಿನಂತೆಯೇ ಬಟ್ಟೆ, ಸಂಗೀತ ನಿರೀಕ್ಷಿಸುತ್ತಿದ್ದಾರೆ. ಹೊಸ ಬಗೆಯ ವಸ್ತ್ರವಿನ್ಯಾಸ, ಸಂಗೀತ, ಹಾಡು, ಸಾಹಿತ್ಯ ರಚಿಸಿದರೂ ಅದೇ ಛಾಪು ಇರಬೇಕು ಎಂದು

> **ಮೊಬೈಲ್, ಟಿ.ವಿ, ಸಿನಿಮಾ ಹಾವಳಿಯಲ್ಲಿ ನಾಟಕ ರಚನೆಯೇ ಕಡಿಮೆಯಾಗಿದೆ. ಮಕ್ಕಳನ್ನು ಉತ್ತಮ ದಾರಿಗೆ ತರಲು ಕಲೆಗಳು ಪೂರಕ. ಅವುಗಳನ್ನು ಪೋಷಿಸಿ ಜೀವಂತವಾಗಿ ಇಡುವ ಅಗತ್ಯವಿದೆ**
> **-ಅಲ್ಲಮಪ್ರಭು ಪಾಟೀಲ ಶಾಸಕ.**

ಬಯಸುತ್ತಿದ್ದಾರೆ. ಇದು ವ್ಯಾಪಾರಿ ಜಗತ್ತು. ಏನೂ ಮಾಡಲಾಗದು. ಆದರೂ, ಸ್ವಲ್ಪವಾದರೂ ತನ್ನತನ ಉಳಿಸಿಕೊಳ್ಳಬೇಕಿದೆ. ತನ್ನತನ ಉಳಿಸಿಕೊಳ್ಳಲು ನಾಟಕ ಕಂಪನಿಗಳು ಹೋರಾಡುತ್ತಿವೆ ಎಂದರು.



ಶಾಸಕ ಅಲ್ಲಮಪ್ರಭು ಪಾಟೀಲ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ರೋಟರಿ ಕ್ಲಬ್ ಅಧ್ಯಕ್ಷ ರಮೇಶ ತಿಪನೂರ ಮಾತನಾಡಿದರು. ಕಾಂಗ್ರೆಸ್ ಮುಖಂಡ ಸುಭಾಷ ಗುತ್ತೇದಾರ ಅಧ್ಯಕ್ಷತೆ ವಹಿಸಿದ್ದರು. ಹಾರಕೂಡ ಚನ್ನವೀರ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಶ್ರೀಗುರು ಕುಮಾರೇಶ್ವರ ನಾಟ್ಯ ಸಂಘದ ಮಾಲೀಕ ಎಲ್.ಬಿ.ಶೇಖ್ ಮಾಸ್ತರ್ ಪ್ರಾಸ್ತಾವಿಕ ಮಾತನಾಡಿದರು. ಕಾಂಗ್ರೆಸ್ ಮುಖಂಡ ಸುಭಾಷ ರಾಠೋಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ನಾಟಕ ಕಂಪನಿ ಸಂಚಾಲಕ ಶ್ರೀಧರ ಹೆಗಡೆ, ವಕೀಲ ಮಲ್ಲಿಕಾರ್ಜುನ ಮೇಳಕುಂದಿ, ವಕೀಲ ಮಲ್ಲಿಕಾರ್ಜುನ ಕಣ್ಣಿ, ಉದ್ಯಮಿ ರಮೇಶ ಜೇವರ್ಗಿ, ಉದ್ಯಮಿ ಚನ್ನಬಸಪ್ಪ ಸಮ್ಮಾಣಿ, ಪ್ರದೀಪ ಗಣೇಶ ಸಂಗಾ ಸೇರಿದಂತೆ ಹಲವರು ವೇದಿಕೆಯಲ್ಲಿ ಇದ್ದರು.

# ಲೋಕಾಯುಕ್ತ ಅಧಿಕಾರಿಗಳಿಂದ ಕೈಗಾರಿಕಾ ಪ್ರದೇಶದ ಕಾರ್ಖಾನೆಗಳ ಪರಿಶೀಲನೆ

**ಬೀದರ, ಜು. 23:** ಜಿಲ್ಲೆಯ ಹಮನಾಬಾದ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿನ ಕೆಲವು ಕಾರ್ಖಾನೆಗಳಿಗೆ ಕಲಬುರಗಿ ಲೋಕಾಯುಕ್ತ ಎಸ್‌ಪಿ ಸಿದ್ದರಾಜು ಅವರ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲಕ್ಷ್ಮಿ ದುರ್ಗಾ ಡ್ರಗ್ಸ್ ಕಂಪನಿ, ಕ್ಷತ್ರಿಯ ಲ್ಯಾಬೋರೇಟರೀಸ್ ಪ್ರೈವೇಟ್ ಲಿಮಿಟೆಡ್, ಸ್ಕೂಟಿಕ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್, ಆರ್-ಕೆಮ್ ಪ್ರೈವೇಟ್ ಲಿಮಿಟೆಡ್, ರಾಡಿಸನ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್, ಸತ್ಯದೀಪ್ತ ಫಾರ್ಮಾಸ್ಯುಟಿಕಲ್ಸ್ ಕಂಪನಿ, ಕೆ.ಎಸ್.ಟಿ ಫಾರ್ಮಾಸ್ಯುಟಿಕಲ್ಸ್, ಕೋರೆ ಕಂಪನಿ ಪ್ರೈ. ಲಿ.,ನಲ್ಲಿ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ನಂತರ, ಉಪ ಲೋಕಾಯುಕ್ತ ನ್ಯಾಯಮೂರ್ತಿಗಳ ಆದೇಶದ ಮೇರೆಗೆ ಕಾರ್ಖಾನೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳ ತಂಡದೊಂದಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಲಾಗಿದೆ. ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಗಳು ತ್ಯಾಜ್ಯ ವಿಲೇವಾರಿ ಸಂಬಂಧಿತ ನಿಯಮಗಳನ್ನು ಸಮರ್ಪಕವಾಗಿ ಪಾಲಿಸುತ್ತಿಲ್ಲ. ಆದ್ದರಿಂದ ವಾಯು ಮಾಲಿನ್ಯ ಮತ್ತು



ಜಲ ಮಾಲಿನ್ಯ ಹಾಗೂ ಅಂತರ ಜಲ ಗುಣಮಟ್ಟ ಹಾಳಾಗುತ್ತಿದೆ ಎಂದು ಹೇಳಿದರು.

ಅಲ್ಲದೇ ಕಂಪನಿಗಳಿಂದ ಹೊಗೆ ಸೂಸುತ್ತಿರುವುದು ಕಂಡುಬಂದಿದ್ದು, ತ್ಯಾಜ್ಯವನ್ನು ಎಸ್‌ಓಪಿ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಗದಿಪಡಿಸಿರುವ ನಿಯಮಾನುಸಾರ ವಿಲೇವಾರಿ ಮಾಡುತ್ತಿಲ್ಲ ಎಂದು ತಿಳಿಸಿದರು.

ಕೈಗಾರಿಕಾ ತ್ಯಾಜ್ಯ ನೀರು ಹಳ್ಳಗಳಿಗೆ ಸೇರುವಂತೆ ಮಾಡಿರುವುದು, ಮತ್ತು ಚೆಕ್‌ಡ್ಯಾಮ್‌ಗಳು ಒಡೆದು ತ್ಯಾಜ್ಯನೀರು ಹಳ್ಳದೊಳಗೆ ಹರಿಯುವಂತೆ ಕಂಪನಿಯವರು ಮಾಡಿಕೊಂಡಿರುವುದು ಗಮನಕ್ಕೆ ಬಂದಿದೆ. ಹುಮನಾಬಾದ್ ಪಟ್ಟಣದ ಹೊರವಲಯದ ಕೈಗಾರಿಕಾ ಪ್ರದೇಶದಲ್ಲಿ ಒಟ್ಟು 47 ಕಾರ್ಖಾನೆಗಳಿದ್ದು, ಇದರಲ್ಲಿ 18 ಕಾರ್ಖಾನೆಗಳು ಕೆಂಪು ಪಟ್ಟಿಗೆ ಸೇರಿಸಲಾಗಿದೆ. ಹೀಗಾಗಿ ಈ 18 ಕಾರ್ಖಾನೆಗಳಲ್ಲಿ 9 ಕಾರ್ಖಾನೆಗಳಿಗೆ ಭೇಟಿ ನೀಡಲಾಗಿದೆ ಎಂದು ಹೇಳಿದರು.

ತಹಶೀಲ್ದಾರ್ ಜಗದೀಶ್ ಚೌರಾ, ಡಿವೈಎಸ್‌ಪಿ ಮಡೋಳಪ್ಪ ಪಿ.ಎಸ್., ಬೀದರ್ ಲೋಕಾಯುಕ್ತ ಡಿವೈಎಸ್‌ಪಿ ಹನುಮಂತ, ತಾ.ಪಂ ಆಡಳಿತಾಧಿಕಾರಿ ದೀಪಿಕಾ ನಾಯ್ಕರ್, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಾದ ಆದಮ್ ಪಟೇಲ್, ಸಂತೋಷ್, ಜಗದೀಶ್, ಪಿಡಿಓ ಜಗದೇವಿ ಹನುಮಂತ, ಆರ್‌ಐ ರಾಹುಲ್ ಪ್ರಸಾದ್, ಕಾರ್ಮಿಕ ಅಧಿಕಾರಿ ರಾಹುಲ್ ಸೇರಿದಂತೆ ಇತರರು ಜತೆಗಿದ್ದರು.

# ಜೆಸ್ಕಾಂ ಇಲಾಖೆಯಲ್ಲಿ ನಿಲ್ಲದ ಭ್ರಷ್ಟಾಚಾರ: ಕಮರ್ಷಿಯಲ್ ಮಳಿಗೆಗಳಿಗೆ ಅಳವಡಿಸಿದ್ದ 35 ವಿದ್ಯುತ್ ಮೀಟರ್‌ಗಳು ತೆರವು, ಪ್ರಕರಣ ದಾಖಲು

**ಬಳ್ಳಾರಿ, ಜು.23:** ಜೆಸ್ಕಾಂ ಇಲಾಖೆಯಲ್ಲಿ ಕರ್ಮಕಾಂಡ ನಿಲ್ಲುವಂತೆ ಕಾಣುತ್ತಾ ಇಲ್ಲ ಅಧಿಕಾರಿ ಗಳು ನಿರ್ಲಕ್ಷ್ಯತೆ ಕಳಪೆ ಕಾಮಗಾರಿಗಳು ಆದೇಶಗಳು ಉಲ್ಲಂಘನೆಗಳು ಅಪಘಾತಗಳು ಒಂದಾದ ಮೇಲೆ ಒಂದು ಸರಣಿಯಾಗಿ ನಡೆಯುತ್ತಲೆ ಇದ್ದಾವೆ. ಬಳ್ಳಾರಿ ಜಿಲ್ಲೆಯ ಜೆಸ್ಕಾಂ ಇಲಾಖೆಯಲ್ಲಿ ಸೆಕ್ಷನ್ ಆಫೀಸರ್ ಗಳದಿಂದ ಹಿಡಿದು ಇ,ಇ,ಗಳ ವರೆಗೆ ಬಹಿರಂಗ ಭ್ರಷ್ಟಾಚಾರ ನಡೆಯುತ್ತಲೇ ಇದೆ ಮೇಲಿನ ಅಧಿಕಾರಿಗಳು ಕೂಡ ಇವರಗಳನ್ನು ನಿಯಂತ್ರಿಸಲು ಚಾಲೆಂಜಾಗಿ ಉಳಿದುಕೊಂಡಿದೆ. ಒಂದಲ್ಲ ಒಂದು ರೀತಿಯಲ್ಲಿ ಬಳ್ಳಾರಿ ಜಸ್ಕಾಂ ಇಲಾಖೆ ಭ್ರಷ್ಟಾಚಾರ ಕೇಂದ್ರ ಸ್ಥಾನ ಆಗಿದೆ. ಬಳ್ಳಾರಿ ನಗರದ ಜುಮ್ಮ ಮಸೀದ್ ಹುವ್ವಿನ ಬಜಾರ್ ಹತ್ತಿರದಲ್ಲಿ ಮೋತಿ ಕಾಂಪ್ಲೆಕ್ಸ್ ಅನ್ನುವ ಕಮರ್ಷಿಯಲ್ ಕಾಂಪ್ಲೆಕ್ಸ್ ಗೆ ಹತ್ತು ದಿನದ ಹಿಂದೆ ವಿದ್ಯುತ್ ಗುತ್ತಿಗೆದಾರ ರೊಬ್ಬರು 35 ವಿದ್ಯುತ್ ಮೀಟರ್ ಗಳನ್ನು ಸರ್ಕಾರದ ಮಾನ ದಂಡಗಳಂತೆ ಎಲ್ಲಾ ದಾಖಲಾತಿಗಳನ್ನು ನೀಡಿ ಅನುಮತಿ ಪಡೆದು ಮೀಟರ್ ಗಳನ್ನು ಅಳವಡಿಸಿದ್ದರು. ಐ.ಡಿ ನಂಬರ್ ಕೂಡ ಹಾಕಲಾಗಿತ್ತು.

ಆಭಾಗದ ಸೆಕ್ಷಣಾಧಿಕಾರಿಯಾಗಿ ರುವ ಸಂಜಯ್ ಅವರು ಕೂಡ ಪ್ರದೇಶವನ್ನು ವೀಕ್ಷಣೆ ಮಾಡಿ ಅನುಮತಿ ನೀಡಿದರು ಆದರೆ ಕೆಲ ದಿನಗಳ ಹಿಂದೆ ಅದೇ ಸೆಕ್ಷನ್ ಆಫೀಸರ್ ಆಗಿರುವ ಸಂಜಯ್ ಅವರು 35 ಮೀಟರ್ ಗಳು ಅನಧಿಕೃತ ಮೀಟರು ಗಳೆಂದು ಇವುಗಳಿಗೆ ಯಾವುದೇ ಅನುಮತಿ ಇಲ್ಲವೆಂದು ತಕ್ಷಣವೇ ವಿಜಲೆನ್ಸ್ ಅಧಿಕಾರಿಗಳನ್ನು ಕರೆಸಿ ಪ್ರಕರಣ ದಾಖಲೆ ಮಾಡಿ 35 ಮೀಟರ್ಗಳನ್ನು ತೆರುವು ಮಾಡಿ ವಿದ್ಯುತ್ ಸಂಪರ್ಕ ಇಲ್ಲದೆ ಮಾಡಿರೋದು ಆಶ್ಚರ್ಯ ಸಂಗತಿಯಾಗಿದೆ.

ಪ್ರಕರಣ: ಮೂರ್ತಿ ಕಾಂಪ್ಲೆಕ್ಸ್‌ಗೆ ಅಳವಡಿಸಿದ ವಿದ್ಯುತ್ ಮೀಟರ್‌ಗಳು ಆರಂಭದಿಂದ ಪ್ರತಿಯೊಂದು ಸರ್ಕಾರದ ದಾಖಲಾತಿಯಂತೆ ಆದೇಶ ಪಡೆದು ಜಸ್ಕಾಂ ಇಲಾಖೆಯಲ್ಲಿ ವಿದ್ಯುತ್ ಸಂಪರ್ಕ ಅನಂತ ಪಡೆದು ಮೀಟರುಗಳನ್ನು ಖರೀದಿ ಮಾಡಿ ಅಳವಡಿಸಲಾಗಿತ್ತು ಆದರೆ ಇತ್ತೀಚಿಗೆ ಸುಪ್ರೀಂ ಕೋರ್ಟ್ ಆದೇಶಗಳನ್ನು ನೀಡಿತ್ತು ಒಸಿ.ಸಿಸಿ. ಇರುವ ಕಮರ್ಷಿಯಲ್ ಕಾಂಪ್ಲೆಕ್ಸ್‌ಗಳಿಗೆ ವಿದ್ಯುತ್ ಸಂಪರ್ಕ ಸಂಪರ್ಕವನ್ನು ನೀಡಬೇಕು ಅನ್ನುವ ಆದೇಶ ಇದೆ, ಆದರೆ ನಗರದ ನಡಭಾಗದಲ್ಲಿರುವ ಈ ಕಾಂಪ್ಲೆಕ್ಸ್‌ಗೆ ಸಂಬಂಧಿತ ಅಧಿಕಾರಿಗಳೇ ಡೊಮೆಸ್ಟಿಕ್ ಅಡಿಯಲ್ಲಿ ಐ.ಖಿ. 1.L.T. 2. ತಾರೀಫ್ ಅಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿ ಆದೇಶ ನೀಡಿದ್ದಾರೆ, ಆದರೆ ಇದು ಮಹಾ ಅಪರಾಧವೆಂದು ತಿಳಿದುಕೊಡ ಕಮರ್ಷಿಯಲ್ ಕಾಂಪ್ಲೆಕ್ಸ್ ಗೆ ಈ ತಾರೀಫ್ ಅಡಿಯಲ್ಲಿ ಸಂಪರ್ಕ ನೀಡಬಾರದು ಇದಕ್ಕೆ. L. T. 3 ತಾರೀಫ್ ಅಡಿಯಲ್ಲಿ ಕೊಡ ಬೇಕು ಕಡಿಮೆ ತಾರಿಫ್ ಅಡಿಯಲ್ಲಿ ಸಂಪರ್ಕ ನೀಡಿ ಸರ್ಕಾರಕ್ಕೆ ಬರುವ ಆದಾಯವನ್ನು ಕಡಿತ ಗೊಳಿಸಿ, ಸಂಬಂಧಿತ ಅಧಿಕಾರಿಗಳು ವ್ಯವಸ್ಥೆಯನ್ನು ದಾರಿ ಪಡಿಸಿ ಭ್ರಷ್ಟಾಚಾರ ಮಾಡಿ ಹಣಗಳಿಸುವ ಇದೊಂದು ಮಹಾಪರಾಧವೆಂದು ಪರಿಗಣಿಸಲಾ ಗುತ್ತದೆ.

ಇಲಾಖೆಯಲ್ಲಿ ಯಾವುದೇ ಸಣ್ಣ ಕಾಮಗಾರಿ ಮಾಡಲು ಮೀಟರ್ ಅಳವಡಿಸಲು ಸಂಬಂಧಿತ ಎಸ್‌ಓಎಡಬ್ಲ್ಯೂ ಇನ್ನು ಮುಂತಾದ ಅಧಿಕಾರಿಗಳು ಸಂಪೂರ್ಣವಾಗಿ ಪರಿಶೀಲನೆ ಮಾಡುತ್ತಾರೆ ಆದರೆ ಮೂವತ್ತೈದು ಮೀಟರ್ ಗಳಿಗೆ ಅನುಮತಿ ನೀಡುವ ಮುನ್ನವೇ, ಹಣಕಾಸಿನ ವ್ಯವಹಾರದಲ್ಲಿ (ಭ್ರಷ್ಟಾಚಾರ) ವ್ಯತ್ಯಾಸ ಅಗಿದ್ದು, ಎಂಜಲಿ ಕಾಸು ದೊಡ್ಡ ಮಟ್ಟದಲ್ಲಿ ಸಿಗದ ಕಾರಣ ಮೀಟರ್ಗಳನ್ನು ತೆರುವು ಗೊಳಿಸಿ ಗ್ರಹಕರಿಗೆ ವಿನಾ ಕಾರಣ ತೊಂದರೆ ಮಾಡಿದ್ದಾರೆ ಅನ್ನೋದು ಮೇಲೆ ನೋಟಕ್ಕೆ ಕಾಣುತ್ತದೆ. ಈಗಾಗಲೇ ಗ್ರಹಕರು ಮೂರು ಲಕ್ಷ ಮೇಲ್ಪಟ್ಟು ಹಣವನ್ನು ನೀಡಿ ವಿದ್ಯುತ್ ಸಂಪರ್ಕವನ್ನು ಪಡೆದಿದ್ದಾರೆ. ಸಂಬಂಧಿತ SO ಸಂಜಯ್ ಈ ವಿಚಾರವನ್ನು ಮೇಲಿನ ಅಧಿಕಾರಿಗಳ ಗಮನಕ್ಕೆ, ತಿಳಿಸದೆ ಏಕಾಏಕಿ ವಿಜಲೆನ್ಸ್ ಪ್ರಕಾರಣ ದಾಖಲೆ ಮಾಡಿದ್ದು 35 ಮೀಟರ್‌ಗಳಿಗೆ 5.5ಲಕ್ಷ ದವರೆಗೆ ದಂಡ ಹಾಕಲಾಗಿದೆ. ಯಾರದೋ ಮಾತುಕೇಳಿ ಪ್ರಕರಣ ಮಾಡಿ ಮಂಗನಾಗಿ ಮನೆಗೆ ಹೋಗಬೇಕು ಆಗಿದೆ. ವಿಜಿಲೆನ್ಸ್ ಪ್ರಕರಣದಲ್ಲಿ ಕೂಡ ಅಲ್ಲಿಯಾ AEE, ಸಹಿ ಇಲ್ಲದೆ ಸಂಜಯ್ ಮಾಡಿದ್ದಾರೆ,ಇದು ಕೂಡ ಅನುಮಾನ ಮೂಡಿಸಿದೆ. ಈ ಪ್ರಕರಣದಲ್ಲಿ ಕೆಲ ಜೆಸ್ಕಾಂ ಅಧಿಕಾರಿಗಳ ನೆರಳು ಇರಬೇಕು.. ಘಟನೆ ನಡೆದ ವಾರ ಆಗಿದೆ ಇಷ್ಟುವರೆಗೆ ಯಾವದೇ ಕ್ರಮ ಆಗಿಲ್ಲ. ರಾಜಕಾರಣಿಗಳ ಸುತ್ತಾ ಅಲೆದಾಟ ಆಗುತ್ತಿದೆ. ನಗರದಲ್ಲಿ ಇದೇ ರೀತಿ ಕಮರ್ಷಿಯಲ್ ಕಾಂಪ್ಲೆಕ್ಸ್ ಗಳಿಗೆ ಡೊಮೆಸ್ಟಿಕ್ ನೀಡಿ ಸರ್ಕಾರಕ್ಕೆ ಅಪಾರ ನಷ್ಟ ಮಾಡಿರೋದು ಈ ಪ್ರಕರಣದಿಂದಲೇ ಬಹಿರಂಗ ಆಗಿದೆ. ಜಿಲ್ಲೆ ಮತ್ತು ನಗರದಲ್ಲಿ ಬಹುತೇಕ ಕಾಂಪ್ಲೆಕ್ಸ್ ಗಳಿಗೆ ಭ್ರಷ್ಟಾಚಾರ ವಸಿಗಿ ಹಣಗಳಿಕೆ ಮಾಡಿದ್ದಾರೆ ಅನ್ನೋದು ಕೇಳಿಬರುತ್ತಿದೆ. ಅಧಿಕಾರಿಗಳು ಯಾವ ಕ್ರಮ ಮಾಡಲಿದ್ದಾರೆ ಭ್ರಷ್ಟಾಚಾರ ನಿಯಂತ್ರಣ ಆಗಬಹುದಾ ಅನ್ನೋದು ಕಾದು ನೋಡಬೇಕು 35 ಮೀಟರ್ ಗಳ ಪ್ರಕರಣದಲ್ಲಿ ಯಾರು ಮೇಲೆ ಕ್ರಮ ಆಗುತ್ತೆ ಎಂದು ಕಾದು ನೋಡಬೇಕು. ಆದರೇ ಇದರಲ್ಲಿ ಒಂದು ಟ್ವಿಸ್ಟ್ ಇದೇ. 35 ಮೀಟರ್‌ಗಳ ಧಾಖಲೆಗಳು ಇಲ್ಲ, SO ಸಂಜಯ್ ಸಹಿ ಮಾಡಿಲ್ಲ ಅನ್ನುತ್ತಾರೆ ಆದರೇ ಕಚೇರಿನಲ್ಲಿ ಎಲ್ಲಾ ದಾಖಲೆ ಇದ್ದಾವೆ ಸಿಸ್ಟಮ್ ನಲ್ಲಿ ಎಂಟ್ರಿ ಆಗಿದೆ ಆದರೇ ಫೀಲ್ಡ್ ರಿಪೋರ್ಟ್ ಇಲ್ಲ ಎಂದು, ಸಂಜಯ್ ವಾದ ಇದೇ, ಆದರೇ ಯಾರು ಕಳ್ಳರು.. ಸಹಿ ನಕೀಲಿ ಆಗಿರಬಹುದಾ?.

ವಿಜಿಲೆನ್ಸ್, ಅಧಿಕಾರಿಗಳು ಇವರಗೆ, ಆರೋಪಿತರುಗೆ ನೋಟೀಸ್ ಕೊಟ್ಟಿಲ್ಲ, ಶಾಸಕರ ಕರೆ ಬರುತ್ತದೆ, ಮತ್ತೊಂದು ಫೋನ್ ಬರುತ್ತದೆ ಎಂದು ಬಾಗಿಲು ತೆರೆದು ಕೂತು ಕೊಂಡಿದ್ದಾರೆ. ಅಂದರೇ ಏನು ಮರ್ಮ, ದಂಡ ಯಾರು ಕಟ್ಟಬೇಕು, ಮಾಲೀಕರ ಅಥವಾ SO, ಗುತ್ತೆದಾರ ರಾಜಕಾರಣಿಗಳ ಗುತ್ತೆದಾರ ಶಿವು, ಗುತ್ತೆದಾರರ ಸಂಘದ ಅಧ್ಯಕ್ಷ ಜಗನ್, SO ಸಂಜಯ್, AEE, ನೂರ್ ಜಹಾನ್ ಅವರು ಕಚೇರಿಯಲ್ಲಿ ಕೂತು ನಡೆಸಿದ ಮೀಟಿಂಗ್ ನಡೆಸಿದ್ದಾರೆ.

## ಮತ್ತೆ ಮಾತುಕತೆ ನಡೆಸಿ: ಅಮೆರಿಕ–ಇರಾನ್‌ಗೆ ವಿಶ್ವಸಂಸ್ಥೆ ತಜ್ಞರ ಆಗ್ರಹ

**ಜಿನೀವಾ, ಜು.23:** ಯುನೈಟೆಡ್ ಸ್ಟೇಟ್ಸ್ ಮತ್ತು ಇರಾನ್ ನಡುವೆ ಮರುಕಳಿಸಿರುವ ಸಂಘರ್ಷವನ್ನು ಗುರುವಾರ ಖಂಡಿಸಿರುವ ವಿಶ್ವಸಂಸ್ಥೆಯ ತಜ್ಞರು, ಎರಡೂ ದೇಶಗಳು ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶದಿಂದ 14–ಅಂಶಗಳ ತಿಳುವಳಿಕಾ ಪತ್ರಕ್ಕೆ ಸಹಿ ಹಾಕಿದ ಕೆಲವೇ ವಾರಗಳಲ್ಲಿ ನಡೆದಿರುವ ಈ ಹೊಸ ಉಲ್ಬಣವು ನಾಗರಿಕರ ಪ್ರಾಣ, ಪ್ರಾದೇಶಿಕ ಸ್ಥಿರತೆ ಮತ್ತು ಜಾಗತಿಕ ಕಡಲ ವ್ಯಾಪಾರಕ್ಕೆ ಧಕ್ಕೆ ತರುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಒಪ್ಪಂದದಡಿಯಲ್ಲಿನ ಬದ್ಧತೆಗಳನ್ನು ಕೈಬಿಡುವುದು "ಶಾಂತಿಯ ಭರವಸೆಗಳನ್ನು ಹಾಳುಮಾಡುತ್ತದೆ, ಯುದ್ಧದ ಸಂತ್ರಸ್ತರ ಮಾನವ ಹಕ್ಕುಗಳಿಗೆ ಹಾನಿ ಮಾಡುತ್ತದೆ ಮತ್ತು ಸಂಘರ್ಷವನ್ನು ಶಾಶ್ವತವಾಗಿ ಅಂತ್ಯಗೊಳಿಸಲು ಅಗತ್ಯವಿರುವ ಒಪ್ಪಂದಗಳ ಮೇಲಿನ ಪರಸ್ಪರ ನಂಬಿಕೆಯನ್ನು ಕುಗ್ಗಿಸುತ್ತದೆ" ಎಂದು ತಜ್ಞರು ಹೇಳಿದ್ದಾರೆ. ಜುಲೈ 12–13 ರಂದು ಅಮೆರಿಕ ಮತ್ತು ಇರಾನ್ ನಡುವೆ ನಡೆದ ಮಿಲಿಟರಿ ದಾಳಿ ಮತ್ತು ಪ್ರತಿದಾಳಿ ಪ್ರಮುಖ ಸಂಘರ್ಷದ ಉಲ್ಬಣವನ್ನು ಸೂಚಿಸುತ್ತವೆ, ಇದರ ಪರಿಣಾಮಗಳು ವಲಯದ ಹಲವಾರು ದೇಶಗಳ ಮೇಲೆ ಬಿದ್ದಿವೆ ಎಂದು ವರದಿಯಾಗಿದೆ ಎಂದು ಅವರು ತಿಳಿಸಿದ್ದಾರೆ.ಹಾರ್ಮುಜ್ ಜಲಸಂಧಿಯಲ್ಲಿ ವಾಣಿಜ್ಯ ಹಡಗುಗಳ ಮೇಲಿನ ದಾಳಿಯ ಕುರಿತು ಕಳವಳ ವ್ಯಕ್ತಪಡಿಸಿದ ತಜ್ಞರು, ನಾಗರಿಕ ನಾವಿಕರ ಪ್ರಾಣಕ್ಕೆ ಅಪಾಯ ಉಂಟಾಗಿದೆ ಮತ್ತು ಈ ಆಯಕಟ್ಟಿನ ಜಲಮಾರ್ಗದ ಮೂಲಕ ನಡೆಯುವ ನೌಕಾಯಾನದ ಸ್ವಾತಂತ್ರ್ಯ ಹಾಗೂ ವಾಣಿಜ್ಯ ಸಂಚಾರಕ್ಕೆ ಅಡ್ಡಿಯಾಗಿದೆ ಎಂದು ಹೇಳಿದ್ದಾರೆ. ಈ ವಲಯದಾದ್ಯಂತ ಇರುವ ನಾಗರಿಕರು ಈ ಸಂಘರ್ಷದ ಬೆಲೆಯನ್ನು ತೆರಬಾರದು," ಎಂದು ತಜ್ಞರು ಹೇಳಿದ್ದು, ನಾಗರಿಕರು ಮತ್ತು ನಾಗರಿಕ ಮೂಲಸೌಕರ್ಯಗಳನ್ನು ರಕ್ಷಿಸಲು ಪ್ರತ್ಯೇಕತೆ,



ಪ್ರಮಾಣಾನುಪಾತ ಮತ್ತು ಮುನ್ನೆಚ್ಚರಿಕೆಯ ತತ್ವಗಳು ಸೇರಿದಂತೆ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಕಾನೂನು ಮತ್ತು ಅಂತರರಾಷ್ಟ್ರೀಯ ಮಾನವೀಯ ಕಾನೂನುಗಳನ್ನು ಪಾಲಿಸುವಂತೆ ಎಲ್ಲಾ ಕಕ್ಷಗಳಿಗೆ ಒತ್ತಾಯಿಸಿದ್ದಾರೆ. ಇರಾನ್‌ನಲ್ಲಿರುವ ಬಂದರುಗಳು, ಸಾರಿಗೆ ಸಂಪರ್ಕಗಳು, ವಿದ್ಯುತ್ ಮೂಲಸೌಕರ್ಯಗಳು ಮತ್ತು ಉಪ್ಪು ನೀರನ್ನು ಸಿಹಿ ನೀರಾಗಿಸುವ ಪ್ಲಾಂಟ್ ಮೇಲಿನ ದಾಳಿಗಳ ವರದಿಗಳನ್ನು ಅವರು ಉಲ್ಲೇಖಿಸಿದ್ದಾರೆ.

ಅಲ್ಲದೆ ಬುಶೆಹರ್ ಪರಮಾಣು ವಿದ್ಯುತ್ ಸ್ಥಾವರದ ಬಳಿ ಕ್ಷಿಪಣಿಗಳು ಬಿದ್ದಿದ್ದು, ಪರಮಾಣು ಸುರಕ್ಷತೆಯ ಕುರಿತು ಕಳವಳವನ್ನು ಹೆಚ್ಚಿಸಿದೆ ಎಂದು ಹೇಳಿದ್ದಾರೆ. ಇರಾನ್ನ ಆರೋಗ್ಯ ಸಚಿವಾಲಯದ ಪ್ರಕಾರ, ಇತ್ತೀಚಿನ ದಾಳಿಗಳಲ್ಲಿ 50 ಜನರು ಮೃತಪಟ್ಟಿದ್ದು, 500ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ಬಂದರುಗಳು, ವಿದ್ಯುತ್ ಜಾಲಗಳು ಮತ್ತು ಸಾರಿಗೆ ಮೂಲಸೌಕರ್ಯಗಳ ಮೇಲಿನ ದಾಳಿಗಳು ಈಗಾಗಲೇ ತೀವ್ರ ಆರ್ಥಿಕ ಕಷ್ಟಗಳನ್ನು ಎದುರಿಸುತ್ತಿರುವ ದೇಶದಲ್ಲಿ ಆಹಾರ, ಔಷಧಗಳು ಮತ್ತು ಜೀವನೋಪಾಯದ ಲಭ್ಯತೆಗೆ ಅಡ್ಡಿಪಡಿಸುತ್ತಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ.

"ಬಂದರುಗಳು, ವಿದ್ಯುತ್ ಸರಬರಾಜು ಮತ್ತು ಸಾರಿಗೆ ಸಂಪರ್ಕಗಳ ಮೇಲಿನ ದಾಳಿಗಳು ಸಮುದಾಯಗಳನ್ನು ಆಹಾರ, ಔಷಧ ಮತ್ತು ಜೀವನೋಪಾಯದಿಂದ ವಂಚಿತಗೊಳಿಸುತ್ತವೆ... ಪರಮಾಣು ವಿದ್ಯುತ್ ಸ್ಥಾವರದ ಬಳಿ ಬಿದ್ದ ಕ್ಷಿಪಣಿಗಳು ಸುರಕ್ಷತಾ ಕಳವಳವನ್ನು ಹೆಚ್ಚಿಸುತ್ತವೆ. ಈ ಎಲ್ಲಾ ಗಮನಾರ್ಹ ಮಾನವ ಹಕ್ಕುಗಳ ಕಳವಳಗಳು ಇರಾನ್ ಗಡಿಗಳನ್ನು ದಾಟಿ ವಿಸ್ತರಿಸುತ್ತವೆ," ಎಂದು ಅವರು ಹೇಳಿದ್ದಾರೆ. ಸಾಮಾನ್ಯ ಇರಾನಿಯನ್ನರು "ಮತ್ತೊಮ್ಮೆ ಯುಎಸ್ನ ನವೀಕೃತ ದಾಳಿಗಳು ಮತ್ತು ತಮ್ಮದೇ ಸರ್ಕಾರದ ಆಂತರಿಕ ದಬ್ಬಾಳಿಕೆಯ ನಡುವೆ ಸಿಲುಕಿಕೊಂಡಿದ್ದಾರೆ" ಎಂದು ತಜ್ಞರು ಹೇಳಿದ್ದು, ಸಂಘರ್ಷದ ಜೊತೆಗೆ ನಿರಂತರ ಮರಣದಂಡನೆಗಳು, ಸಾಮೂಹಿಕ ಬಂಧನಗಳು, ಕಿರುಕುಳ ಮತ್ತು ಬಲವಂತದ ಕಣ್ಮರೆಗಳು ಮುಂದುವರಿದಿವೆ ಎಂದು ಆರೋಪಿಸಿದ್ದಾರೆ. ಮಹಿಳೆಯರು, ಮಕ್ಕಳು, ವಿಕಲಚೇತನರು, ಅಲ್ಪಸಂಖ್ಯಾತರು, ನಿರಾಶ್ರಿತರು ಮತ್ತು ಬಡತನದಲ್ಲಿರುವ ಜನರು ಸೇರಿದಂತೆ ದುರ್ಬಲ ವರ್ಗದವರು ಈ ಹಿಂಸಾಚಾರದ ಅಸಮಾನ ಹೊರೆಯನ್ನು ಹೊರಬೇಕಾಗಿ ಬಂದಿದೆ ಎಂದು ಅವರು ಹೇಳಿದ್ದಾರೆ. "ಇರಾನ್, ಈ ಪ್ರದೇಶ ಮತ್ತು ಅದಕ್ಕೂ ಮೀರಿದ ನಾಗರಿಕರ ಪ್ರಾಣ ಮತ್ತು ನಾಗರಿಕ ಮೂಲಸೌಕರ್ಯಗಳ ರಕ್ಷಣೆಯು ತಕ್ಷಣದ ಆದ್ಯತೆಯಾಗಬೇಕು. ಪ್ರಪಂಚದಾದ್ಯಂತ ಜೀವನೋಪಾಯಕ್ಕೆ ಹಾನಿ ಮಾಡಿರುವ ಪ್ರಮುಖ ಕಡಲ ವ್ಯಾಪಾರದ ಅಡಚಣೆಯು ಕೊನೆಗೊಳ್ಳಬೇಕು," ಎಂದು ತಜ್ಞರು ಹೇಳಿದ್ದಾರೆ. ಎಲ್ಲಾ ಕಡೆಯವರು ಉದ್ವಿಗ್ನತೆಯನ್ನು ಕಡಿಮೆ ಮಾಡಲು ಮತ್ತು ಮಾತುಕತೆಗೆ ಮರಳಲು ಅವರು ಕರೆ ನೀಡಿದ್ದಾರೆ.

## ನಾವಿಕರು–ನಾಗರಿಕ ಹಡಗುಗಳ ಮೇಲಿನ ದಾಳಿ ಒಪ್ಪಲು ಸಾಧ್ಯವಿಲ್ಲ: ಜೈಶಂಕರ್

**ಮನಿಲಾ, ಜು.23:** ನಾವಿಕರು, ನಾಗರಿಕ ಹಡಗುಗಳು ಅಥವಾ ನಿರ್ಣಾಯಕ ಮೂಲಸೌಕರ್ಯಗಳನ್ನು ಗುರಿಯಾಗಿಸಿಕೊಂಡು ನಡೆಸುವ ದಾಳಿಗಳನ್ನು ಸಹಿಸಲು ಸಾಧ್ಯವಿಲ್ಲ ಹಾಗೂ ಕಡಲ ಸುರಕ್ಷತೆ ಮತ್ತು ಅಂತರರಾಷ್ಟ್ರೀಯ ಕಾನೂನುಗಳನ್ನು ಎತ್ತಿಹಿಡಿಯುವ ಅಗತ್ಯವಿದೆ ಎಂದು ವಿದೇಶಾಂಗ ಸಚಿವ ಜೈಶಂಕರ್ ಪ್ರತಿಪಾದಿಸಿದ್ದಾರೆ.

ಮನಿಲಾದಲ್ಲಿ ನಡೆದ 21ನೇ 'ಈಸ್ಟ್ ಏಷ್ಯಾ ಶೃಂಗಸಭೆ'ಯಲ್ಲಿ ಮಾತನಾಡಿದ ಅವರು, ಪಶ್ಚಿಮ ಏಷ್ಯಾ ಮತ್ತು ಗಲ್ಫ್ ಪ್ರದೇಶದಲ್ಲಿ ನಡೆಯುತ್ತಿರುವ ಉದ್ವಿಗ್ನತೆಯನ್ನು ಬಗೆಹರಿಸಲು ರಾಜತಾಂತ್ರಿಕ ತೊಡಗಿಸಿಕೊಳ್ಳುವಿಕೆ ಮತ್ತು ರಚನಾತ್ಮಕ ಮಾತುಕತೆಗೆ ಕರೆ ನೀಡಿದರು. ಅಂತರರಾಷ್ಟ್ರೀಯ ಜಲಮಾರ್ಗಗಳ ಮೂಲಕ ಸುರಕ್ಷಿತ ಮತ್ತು ಅಡೆತಡೆಗಳಿಲ್ಲದ ಸಂಚಾರವನ್ನು ಖಚಿತಪಡಿಸಿಕೊಳ್ಳುವ ಹಾಗೂ ಸ್ಥಾಪಿತ ಜಾಗತಿಕ ಕಾನೂನು ಚೌಕಟ್ಟುಗಳನ್ನು ಗೌರವಿಸುವ ಭಾರತದ ನಿಲುವನ್ನು ಪುನರುಚ್ಚರಿಸಿದರು.

ಯಾವುದೇ ಕಾರಣಕ್ಕೂ ನಾವಿಕರು, ನಾಗರಿಕ ಹಡಗುಗಳು ಅಥವಾ ಮೂಲಸೌಕರ್ಯಗಳ ಮೇಲಿನ ದಾಳಿಗಳನ್ನು ಅನುಮೋದಿಸಲು ಸಾಧ್ಯವಿಲ್ಲ. ಆಸಿಯಾನ್ ಕೇಂದ್ರಿತತೆ, ಪ್ರಾದೇಶಿಕ ಸ್ಥಿರತೆ ಮತ್ತು ಮುಕ್ತ, ಸ್ವತಂತ್ರ ಹಾಗೂ ಸಮೃದ್ಧ ಇಂಡೋ–ಪೆಸಿಫಿಕ್ ದೃಷ್ಟಿಕೋನಕ್ಕೆ ಭಾರತದ ಬದ್ಧತೆಯನ್ನು ಸಚಿವರು ಎತ್ತಿ ತೋರಿಸಿದರು. ಪ್ರಸ್ತುತ ಜಾಗತಿಕ ವಾತಾವರಣವು ಅನಿಶ್ಚಿತತೆಯಿಂದ ಕೂಡಿದ್ದು, ದೇಶಗಳು ಆರ್ಥಿಕ ಪರಸ್ಪರಾವಲಂಬನೆ, ತಾಂತ್ರಿಕ ಸ್ಪರ್ಧೆ ಮತ್ತು ಭೌಗೋಳಿಕ ರಾಜಕೀಯ ಸವಾಲುಗಳ ಮಿಶ್ರಣವನ್ನು ಎದುರಿಸುತ್ತಿವೆ ಎಂದು ಹೇಳಿದರು. ಶೃಂಗಸಭೆಯ ನಂತರ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಜೈಶಂಕರ್, ಜಾಗತಿಕ ಸಂಘರ್ಷಗಳು ಗಮನಾರ್ಹ ಆರ್ಥಿಕ ಒತ್ತಡಗಳನ್ನು ಸೃಷ್ಟಿಸಿದ್ದು, ಇಂಧನ, ಆಹಾರ ಮತ್ತು ಆರೋಗ್ಯ ಭದ್ರತೆಯ ಮೇಲೆ ಪರಿಣಾಮ ಬೀರುತ್ತಿವೆ, ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ತೊಂದರೆಯುಂಟುಮಾಡುತ್ತಿವೆ ಎಂದು ಹೇಳಿದ್ದಾರೆ.

"ಜಾಗತಿಕ ಆರ್ಥಿಕತೆಯು ಇಂದು ಹಲವು ಸಂಘರ್ಷಗಳ ಪರಿಣಾಮದಿಂದ ತತ್ತರಿಸುತ್ತಿದೆ; ಇಂಧನ, ಆಹಾರ ಮತ್ತು ಆರೋಗ್ಯ ಭದ್ರತೆಯನ್ನು ಸುಲಭವಾಗಿ ಪಡೆದುಕೊಳ್ಳಲು ಸಾಧ್ಯವಿಲ್ಲ, ವಿಶೇಷವಾಗಿ ಜಾಗತಿಕ ದಕ್ಷಿಣ ದೇಶಗಳಿಗೆ ಇದು ಸವಾಲಾಗಿದೆ," ಎಂದು ಅವರು ಹೇಳಿದರು.

ಬದಲಾಗುತ್ತಿರುವ ಜಾಗತಿಕ ಗತಿಯನ್ನು ಉಲ್ಲೇಖಿಸಿದ ಅವರು, ಹೊಸ ಸಾಮರ್ಥ್ಯಗಳು, ದುರ್ಬಲತೆಗಳು ಮತ್ತು ಸಂಬಂಧಗಳು ಅಂತರರಾಷ್ಟ್ರೀಯ ವ್ಯವಹಾರಗಳನ್ನು ಮರುರೂಪಿಸುತ್ತಿದ್ದು, ರಾಜಕೀಯ ಮತ್ತು ಭದ್ರತಾ ಕಳವಳಗಳು ಆರ್ಥಿಕ ನಿರ್ಧಾರಗಳ ಮೇಲೆ ಹೆಚ್ಚಾಗಿ ಪ್ರಭಾವ ಬೀರುತ್ತಿವೆ ಎಂದು ಹೇಳಿದರು.

ದಕ್ಷಿಣ ಚೀನಾ ಸಮುದ್ರದಲ್ಲಿನ ಕಡಲ ಭದ್ರತೆಯ



ಕುರಿತು ಮಾತನಾಡಿದ ಜೈಶಂಕರ್, 1982ರ ವಿಶ್ವಸಂಸ್ಥೆಯ ಸಮುದ್ರ ಕಾನೂನಿನ ಸಮಾವೇಶಕ್ಕೆ ಅನುಗುಣವಾಗಿ ಅರ್ಥಪೂರ್ಣ ಮತ್ತು ಕಾನೂನುಬದ್ಧವಾಗಿ ಬದ್ಧವಾಗಿರುವ ನಡಾವಳಿ ಸಂಹಿತೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವುದಕ್ಕೆ ಭಾರತದ ಬೆಂಬಲವನ್ನು ಪುನರುಚ್ಚರಿಸಿದರು. ಇಂತಹ ಒಪ್ಪಂದವು ಮಾತುಕತೆಯಿಂದ ಹೊರಗಿರುವ ದೇಶಗಳ ಕಾನೂನುಬದ್ಧ ಹಕ್ಕುಗಳ ಮೇಲೆ ಪರಿಣಾಮ ಬೀರಬಾರದು ಎಂದು ಅವರು ಒತ್ತು ನೀಡಿದರು. ಪ್ರಾದೇಶಿಕ ಸವಾಲುಗಳ ಕುರಿತು ಚರ್ಚಿಸಿದ ಜೈಶಂಕರ್, ಮ್ಯಾನ್ಮಾರ್‌ನಲ್ಲಿನ ಬಿಕ್ಕಟ್ಟಿಗೆ ಶಾಂತಿಯುತ ಪರಿಹಾರವನ್ನು ಭಾರತ ಬೆಂಬಲಿಸುತ್ತದೆ ಮತ್ತು ಈ ನಿಟ್ಟಿನಲ್ಲಿ ಆಸಿಯಾನ್ ನೇತೃತ್ವದ ಪ್ರಯತ್ನಗಳಿಗೆ ಬೆಂಬಲ ನೀಡುತ್ತದೆ ಎಂದು ಹೇಳಿದರು.

ಅನೇಕ ಭಾರತೀಯ ಪ್ರಜೆಗಳ ಮೇಲೆ ಪ್ರಭಾವ ಬೀರಿರುವ ಗಡಿದಾಟಿದ ಸೈಬರ್ ವಂಚನೆ ಜಾಲಗಳ ವಿರುದ್ಧ ಬಲವಾದ ಅಂತರರಾಷ್ಟ್ರೀಯ ಸಹಕಾರಕ್ಕೂ ಅವರು ಕರೆ ನೀಡಿದರು. ಭಾರತದ ಮಾನವೀಯ ಉಪಕ್ರಮಗಳನ್ನು ಎತ್ತಿ ತೋರಿಸಿದ ಜೈಶಂಕರ್, ನವದೆಹಲಿಯು ವಿಶ್ವಾದ್ಯಂತ ಪರಿಹಾರ ಮತ್ತು ಪುನರ್ವಸತಿ ಪ್ರಯತ್ನಗಳಿಗೆ ಗಮನಾರ್ಹ ಕೊಡುಗೆ ನೀಡಿದೆ ಮತ್ತು 'ವಿಶ್ವಸಂಸ್ಥೆಯ ಪರಿಹಾರ ಮತ್ತು ಕಾರ್ಯಗಳ ಸಂಸ್ಥೆ'ಗೆ ಪ್ರಮುಖ ಉದಯೋನ್ಮುಖ ದಾನಿಯಾಗಿ ಹೊರಹೊಮ್ಮಿದೆ ಎಂದು ಹೇಳಿದರು. ದ್ವಿ–ರಾಷ್ಟ್ರ ಪರಿಹಾರವು ಪ್ರದೇಶದಲ್ಲಿ ಶಾಶ್ವತ ಶಾಂತಿಗೆ ಏಕೈಕ ಮಾರ್ಗವಾಗಿದೆ ಎಂಬ ಭಾರತದ ಅಭಿಪ್ರಾಯವನ್ನು ಅವರು ಪುನರುಚ್ಚರಿಸಿದರು. "ಭಾರತವು ಗಮನಾರ್ಹ ಪರಿಹಾರ ಮತ್ತು ಪುನರ್ವಸತಿ ಕೊಡುಗೆಗಳನ್ನು ನೀಡಿದೆ ಮತ್ತು ಯುಎನ್‌ಆರ್‌ಡಬ್ಲ್ಯುಎಯ ಪ್ರಮುಖ ದಾನಿಯಾಗಿದೆ. ದ್ವಿ–ರಾಷ್ಟ್ರ ಪರಿಹಾರವು ಶಾಶ್ವತ ಮತ್ತು ಸುಸ್ಥಿರ ಶಾಂತಿಗೆ ದಾರಿ ಮಾಡಿಕೊಡುತ್ತದೆ ಎಂದು ನಾವು ನಂಬುತ್ತೇವೆ," ಎಂದು ಅವರು ಹೇಳಿದರು.

ಕೊಚ್ಚಿಯಲ್ಲಿ ಕಡಲ ಭದ್ರತಾ ಸಹಕಾರದ ಕುರಿತ 7ನೇ ಈಸ್ಟ್ ಏಷ್ಯಾ ಶೃಂಗಸಭೆ ಸಮ್ಮೇಳನವನ್ನು ಭಾರತ ಆಯೋಜಿಸಲಿದೆ ಮತ್ತು ಐತಿಹಾಸಿಕ ಬಂದರು ತಾಣವಾದ ಲೋಥಾಲ್‌ನಲ್ಲಿ ಕಡಲ ಪರಂಪರೆ ಉತ್ಸವವನ್ನು ಸಂಘಟಿಸಲಿದೆ ಎಂದೂ ಜೈಶಂಕರ್ ಪ್ರಕಟಿಸಿದರು.

## ಹಾರ್ಮುಜ್‌ನಲ್ಲಿ ಹೌತಿ ಉಗ್ರರು ನಡೆಸುವ ಯಾವುದೇ ದಾಳಿಗೆ ಇರಾನ್ ಹೊಣೆ: ಟ್ರಂಪ್

**ವಾಷಿಂಗ್ಟನ್, ಜು.23:** ಹಾರ್ಮುಜ್ ಜಲಸಂಧಿಯಲ್ಲಿ ಹೌತಿ ಪಡೆಗಳು ನಡೆಸುವ ಯಾವುದೇ ದಾಳಿಗಳಿಗೆ ಇರಾನ್ ಅನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಗುಂಪು ಮತ್ತೆ ಹಡಗುಗಳನ್ನು ಗುರಿಯಾಗಿಸಿಕೊಂಡರೆ ಶಿಕ್ಷೆ ಕಟ್ಟಿಟ್ಟ ಬುತ್ತಿ ಎಂದು ಎಚ್ಚರಿಸಿದ್ದಾರೆ.

ಸೌದಿ ಹಡಗುಗಳನ್ನು ಗುರಿಯಾಗಿಸಿಕೊಂಡು ನೌಕಾ ದಿಗ್ಬಂಧನ ಘೋಷಿಸಿದ ಕೆಲವು ದಿನಗಳ ನಂತರ, ಕೆಂಪು ಸಮುದ್ರದಲ್ಲಿ ಎರಡು ಸೌದಿ ತೈಲ ಟ್ಯಾಂಕರ್‌ಗಳ ಮೇಲೆ ದಾಳಿ ನಡೆಸಿರುವುದಾಗಿ ಯೆಮೆನ್‌ನ ಇರಾನ್ ಬೆಂಬಲಿತ ಹೌತಿಗಳು ಹೊಣೆ ಹೊತ್ತುಕೊಂಡ ಬೆನ್ನಲ್ಲೇ ಟ್ರಂಪ್ ಅವರು ಈ ಎಚ್ಚರಿಕೆ ನೀಡಿದ್ದಾರೆ. ಹೌತಿಗಳು ಇರಾನ್‌ನ ಪ್ರತಿನಿಧಿ ಮತ್ತು/ಅಥವಾ ಪ್ರಾಕ್ಸಿ ಪಡೆಗಳಾಗಿದ್ದಾರೆ. ಇರಾನ್ ಮತ್ತು ಹೌತಿಗಳ ಮೇಲೆ ಪ್ರಮುಖ ಮಿಲಿಟರಿ ಶಿಕ್ಷೆಯನ್ನು ವಿಧಿಸಲಾಗುತ್ತದೆ.



ಇಲ್ಲಿಯವರೆಗೆ ಬಹಳ ವೃತ್ತಿಪರವಾಗಿ ಮತ್ತು ಬುದ್ಧಿವಂತಿಕೆಯಿಂದ ನಡೆದುಕೊಂಡಿದ್ದ ಹೂತಿಗಳ ನಡವಳಿಕೆಯಿಂದ ನನಗೆ ತೀವ್ರ ನಿರಾಶೆಯಾಗಿದೆ ಎಂದು ಟ್ರಂಪ್ ತಮ್ಮ 'ಟ್ರೂತ್ ಸೋಶಿಯಲ್' ತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಕೆಂಪು ಸಮುದ್ರದಲ್ಲಿ ಎರಡು ಸೌದಿ ತೈಲ ಟ್ಯಾಂಕರ್‌ಗಳ ಮೇಲಿನ ದಾಳಿಯ ಹೊಣೆಯನ್ನು ಯೆಮೆನ್‌ನ ಹೌತಿಗಳು ವಹಿಸಿಕೊಂಡ ನಂತರ ಗುರುವಾರದಂದು ತೈಲ ಬೆಲೆ ಬ್ಯಾರೆಲ್‌ಗೆ 100 ಡಾಲರ್ ಸಮೀಪಕ್ಕೆ ತಲುಪಿದೆ. ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷವು ಹಾರ್ಮುಜ್ ಜಲಸಂಧಿಯನ್ನು ದಾಟಿ ವಿಸ್ತರಿಸುತ್ತಿದ್ದಂತೆ ಜಾಗತಿಕ ಇಂಧನ ಪೂರೈಕೆಗೆ ಹೊಸ ಬೆದರಿಕೆ ಎದುರಾಗಿದೆ.

ಸೌದಿ ಧ್ವಜ ಹೊಂದಿರುವ ಎನ್ಸೆಲಿಯಾ ಮತ್ತು ಲೈಲಾ ಟ್ಯಾಂಕರ್‌ಗಳನ್ನು ಕ್ಷಿಪಣಿಗಳು ಮತ್ತು ಡ್ರೋನ್‌ಗಳಿಂದ ಹೊಡೆದುರುಳಿಸಿರುವುದಾಗಿ ಹೂತಿಗಳು ಹೇಳಿಕೊಂಡ ನಂತರ ಬ್ರೆಂಟ್ ಕಚ್ಚಾ ತೈಲ ದರ ಬ್ಯಾರೆಲ್ಗೆ 98 ಡಾಲರ್ಗಿಂತ ಹೆಚ್ಚಾಯಿತು. ಈ ವಾರದ ಆರಂಭದಲ್ಲಿ ಘೋಷಿಸಲಾದ ಸೌದಿ ಹಡಗುಗಳ ಮೇಲಿನ ನೌಕಾ ದಿಗ್ಬಂಧನದ ಮೊದಲ ಜಾರಿಯನ್ನು ಈ ದಾಳಿಗಳು ಸೂಚಿಸುತ್ತವೆ ಎಂದು ಗುಂಪು ತಿಳಿಸಿದೆ. ಕೆಂಪು ಸಮುದ್ರದಲ್ಲಿ ಗುರಿಯಾದ ನಂತರ ಎನ್ಸೆಲಿಯಾಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಸೌದಿ ಅಧಿಕಾರಿಗಳು ದೃಢಪಡಿಸಿದ್ದಾರೆ. ಕಡಲ ಟ್ರ್ಯಾಕಿಂಗ್ ಏಜೆನ್ಸಿ ಮೆರೀನ್ ಟ್ರಾಫಿಕ್ ಪ್ರಕಾರ, ಲೈಲಾ ಕಚ್ಚಾ ತೈಲ ಟ್ಯಾಂಕರ್ ಎಂದು ಮತ್ತು ಎನ್ಸೆಲಿಯಾ ಸಂಸ್ಕರಿಸಿದ ತೈಲ ಉತ್ಪನ್ನಗಳ ಟ್ಯಾಂಕರ್ ಎಂದು ದಾಖಲಾಗಿದೆ. ಸೌದಿ ಕರಾವಳಿಯಿಂದ ಸುಮಾರು 70 ನೌಟಿಕಲ್ ಮೈಲಿ ದೂರದಲ್ಲಿ ನಡೆದ ಪ್ರತ್ಯೇಕ ದಾಳಿಗಳಲ್ಲಿ ಈ ಹಡಗುಗಳು ಗುರಿಯಾಗಿವೆ ಎಂದು ಕಡಲ ಅಪಾಯದ ಸಲಹಾ ಸಂಸ್ಥೆ ಮೆರಿಸ್ಕ್ಸ್ ಗುರುವಾರ ತಿಳಿಸಿದೆ. ಕ್ಷಿಪಣಿ ತಾಗಿದ ನಂತರ ಎನ್ಸೆಲಿಯಾ ಹಾನಿಗೊಳಗಾಯಿತು, ಅದೇ ಸಮಯದಲ್ಲಿ ಲೈಲಾ ಕೂಡ ದಾಳಿಗೆ ಒಳಗಾಯಿತು ಎಂದು ಮೆರಿಸ್ಕ್ಸ್ ಹೇಳಿದೆ.

ಈ ದಾಳಿಗಳು ವಿಶ್ವದ ಎರಡು ಪ್ರಮುಖ ತೈಲ ಸಾರಿಗೆ ಮಾರ್ಗಗಳಿಗೆ ಒಂದೇ ಬಾರಿಗೆ ಬೆದರಿಕೆಯನ್ನು ಉಂಟುಮಾಡುವ ಸಾಧ್ಯತೆಯನ್ನು ಹೆಚ್ಚಿಸಿವೆ. ಇರಾನ್ ಹಾರ್ಮುಜ್ ಜಲಸಂಧಿಯ ಮೂಲಕ ಹಡಗು ಸಂಚಾರಕ್ಕೆ ಅಡ್ಡಿಪಡಿಸುವುದನ್ನು ಮುಂದುವರಿಸಿದ್ದರೆ, ಹೂತಿಗಳ ಇತ್ತೀಚಿನ ಕ್ರಮವು ಕೆಂಪು ಸಮುದ್ರದ ದಕ್ಷಿಣದ ಹೆಬ್ಬಾಗಿಲಾಗಿರುವ ಬಾಬ್ ಅಲ್–ಮಂಡೆಬ್ ಜಲಸಂಧಿಯ ಮೂಲಕ ನಡೆಯುವ ಸಂಚಾರಕ್ಕೆ ಬೆದರಿಕೆಯೊಡ್ಡಿದೆ.

## ಇ.ಡಿ. ದಂಡ ರದ್ದುಗೊಳಿಸಿದ ಬೆನ್ನಲ್ಲೇ ಭಾರತಕ್ಕೆ ವಾಪಸ್: ಲಲಿತ್ ಮೋದಿ

**ಲಂಡನ್, ಜು.23:** ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮಾಜಿ ಅಧ್ಯಕ್ಷ ಲಲಿತ್ ಮೋದಿಗೆ 2009ರ ಐಪಿಎಲ್ – ದಕ್ಷಿಣ ಆಫ್ರಿಕಾ ಫೆಮಾ ಪ್ರಕರಣದಲ್ಲಿ ಪ್ರಮುಖ ಕಾನೂನು ಪರಿಹಾರ ಸಿಕ್ಕಿದೆ. (ಕಳ್ಳಸಾಗಣೆದಾರರು ಮತ್ತು ವಿದೇಶಿ ವಿನಿಮಯ ಮ್ಯಾನಿಪ್ಯುಲೇಟರ್‌ಗಳು–ಆಸ್ತಿ ಮುಟ್ಟುಗೋಲು–ಆಕ್ಟ್) ಮೇಲ್ಮನವಿ ನ್ಯಾಯಮಂಡಳಿ ಜಾರಿ ನಿರ್ದೇಶನಾಲಯದ (ಇ.ಡಿ.) ಹೆಚ್ಚಿನ ಸಂಶೋಧನೆಗಳು ಮತ್ತು ವಿಧಿಸಲಾಗಿದ್ದ ದಂಡಗಳನ್ನು ರದ್ದುಗೊಳಿಸಿದೆ. ಈ ತೀರ್ಪಿನ ನಂತರ ಲಲಿತ್ ಮೋದಿ 16 ವರ್ಷಗಳ ಬಳಿಕ ಭಾರತಕ್ಕೆ ಬರುವುದಾಗಿ ಘೋಷಿಸಿದ್ದಾರೆ. ಈ ತೀರ್ಪಿನಿಂದ ನಾನು ತುಂಬಾ ಸಂತೋಷವಾಗಿದ್ದೇನೆ. ನನಗೆ ಅದ್ಭುತ ದಿನವಾಗಿತ್ತು. ಕಳೆದ 16 ವರ್ಷಗಳಿಂದ ನಾನು ಈ ಹೋರಾಟವನ್ನು ನಡೆಸುತ್ತಿದ್ದೇನೆ. ನಾನು ಮಾಧ್ಯಮಗಳಿಗೆ ಮತ್ತು ಎಲ್ಲರಿಗೂ ಹೇಳುತ್ತಿರುವ ಎಲ್ಲವೂ ಅಂತಿಮವಾಗಿ ನಿಜವೆಂದು ಸಾಬೀತಾಗಿದೆ. ನ್ಯಾಯಮಂಡಳಿ ನನ್ನ ಪರವಾಗಿ ತೀರ್ಪು ನೀಡಿರುವುದರಿಂದ ನನಗೆ ಸಂತೋಷವಾಗಿದೆ ಎಂದು ಹೇಳಿದರು. ತಮ್ಮ ಗುರಿ ಯಾವಾಗಲೂ ಐಪಿಎಲ್‌ನ ಹಿತಾಸಕ್ತಿಯೇ ಆಗಿತ್ತು. ನನಗೆ ಇದಕ್ಕಿಂತ ಮುಖ್ಯವಾದುದು ಬೇರೇನೂ ಇರಲಿಲ್ಲ. ಈಗ ಆ ಅಧ್ಯಾಯ ಮುಗಿದಿದೆ. ನಾನು ನನ್ನ ಜೀವನವನ್ನು ಮುಂದುವರಿಸಲು ಬಯಸುತ್ತೇನೆ.

ಲಲಿತ್ ಮೋದಿ ಭಾರತಕ್ಕೆ ಮರಳಲು ತಯಾರಿ ನಡೆಸುತ್ತಿರುವುದಾಗಿ ಹೇಳಿದರು. ನಾನು ಈ ವರ್ಷದ ಅಂತ್ಯ ಅಥವಾ ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಮರಳಲು ಯೋಜಿಸುತ್ತಿದ್ದೇನೆ. ನನ್ನ ಮಗಳು ಅಕ್ಟೋಬರ್‌ನಲ್ಲಿ ಮಗುವಿನ ನಿರೀಕ್ಷೆಯಲ್ಲಿದ್ದಾಳೆ ಮತ್ತು ನಾನು ಅಜ್ಜನಾಗಲಿದ್ದೇನೆ. ಎಲ್ಲವೂ ಚೆನ್ನಾಗಿ ನಡೆಯುತ್ತದೆ. ನಂತರ ನಾನು ಭಾರತಕ್ಕೆ ಹಿಂತಿರುಗುತ್ತೇನೆ ಎಂದು ನಾನು ಭಾವಿಸುತ್ತೇನೆ ಎಂದು ಅವರು ಹೇಳಿದರು.

ವಾಸ್ತವವಾಗಿ, ಮೇಲ್ಮನವಿ ನ್ಯಾಯಮಂಡಳಿ ಲಲಿತ್ ಮೋದಿ ಮತ್ತು ಇತರ ಮೇಲ್ಮನವಿದಾರರಿಗೆ 2009 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಐಪಿಎಲ್‌ನ ಎರಡನೇ ಸೀಸನ್‌ನ ಆತಿಥ್ಯಕ್ಕೆ ಸಂಬಂಧಿಸಿದ ಫೆಮಾ ಪ್ರಕರಣದಲ್ಲಿ ಗಮನಾರ್ಹ ಪರಿಹಾರವನ್ನು ನೀಡಿತ್ತು. ನ್ಯಾಯಮಂಡಳಿಯು ಇ.ಡಿ.ಯ ಹೆಚ್ಚಿನ ಸಂಶೋಧನೆಗಳನ್ನು ರದ್ದುಗೊಳಿಸಿ, ದಂಡಗಳನ್ನು ರದ್ದುಗೊಳಿಸಿತ್ತು. ಈ ಪ್ರಕರಣವು ಬಹಳ ಸಮಯದಿಂದ ಕಾನೂನು ಪ್ರಕ್ರಿಯೆಯಲ್ಲಿತ್ತು. ಈ ನಿರ್ಧಾರವನ್ನು ಲಲಿತ್ ಮೋದಿಗೆ ಪ್ರಮುಖ ವಿಜಯವೆಂದು ಪರಿಗಣಿಸಲಾಗುತ್ತಿದೆ. ಲಲಿತ್ ಮೋದಿ 2010ರಲ್ಲಿ ಭಾರತವನ್ನು ತೊರೆದಾಗಿನಿಂದ ವಿದೇಶದಲ್ಲಿ ವಾಸಿಸುತ್ತಿದ್ದಾರೆ. ಅವರ ಮೇಲೆ ಹಲವಾರು ಆರ್ಥಿಕ ಅಕ್ರಮಗಳು ಮತ್ತು ಈಇಒಂ ನಿಯಮಗಳ ಉಲ್ಲಂಘನೆಯ ಆರೋಪ ಹೊರಿಸಲಾಗಿತ್ತು. ಆದಾಗ್ಯೂ, ಇತ್ತೀಚಿನ ನಿರ್ಧಾರದ ನಂತರ, ಅವರು ಈಗ ಭಾರತಕ್ಕೆ ಮರಳಲು ಮತ್ತು ತಮ್ಮ ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಲು ಬಯಸುತ್ತಾರೆ ಎಂದು ಸ್ಪಷ್ಟವಾಗಿ ಸೂಚಿಸಿದ್ದಾರೆ.

## ಅಬ್ರಹಾಂ ಒಪ್ಪಂದಕ್ಕೆ ರಿಯಾದ್ ಸೇರಿದರೆ ಮಾತ್ರ ಸೌದಿ ಜತೆಗಿನ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಅನುಮೋದನೆ: ಟ್ರಂಪ್

**ವಾಷಿಂಗ್ಟನ್, ಜು.23:** ಸೌದಿ ಅರೇಬಿಯಾ ಜೊತೆ ಹೊಸದಾಗಿ ಸಹಿ ಮಾಡಲಾದ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ರಿಯಾದ್ ಸೇರಿದರೆ ಮಾತ್ರ ಅನುಮೋದನೆ ನೀಡಲಾಗುವುದು ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಒಪ್ಪಂದಕ್ಕೆ ಸಹಿ ಬಿದ್ದ ಮರುದಿನವೇ ಹೊಸ ಷರತ್ತನ್ನು ವಿಧಿಸಿದ್ದಾರೆ.

ಈ ಬಗ್ಗೆ ತಮ್ಮ ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಇದು "ಸೌದಿ ಅರೇಬಿಯಾ ಅತ್ಯಂತ ಗೌರವಾನ್ವಿತ ಮತ್ತು ಯಶಸ್ವಿ ಅಬ್ರಹಾಂ ಒಪ್ಪಂದಕ್ಕೆ ಸೇರುವುದಕ್ಕೆ ಸಂಪೂರ್ಣವಾಗಿ ಒಳಪಟ್ಟಿರುತ್ತದೆ" ಎಂದು ಸ್ಪಷ್ಟಪಡಿಸಿದ್ದಾರೆ. ಬುಧವಾರ ಯುಎಸ್ ಇಂಧನ ಕಾರ್ಯದರ್ಶಿ ಕ್ರಿಸ್‌ರೈಟ್ ಮತ್ತು ಸೌದಿ ಇಂಧನ ಸಚಿವ ರಾಜಕುಮಾರ ಅಬ್ದುಲಜೀಜ್ ಬಿನ್ ಸಲ್ಮಾನ್ ಸಹಿ ಮಾಡಿದ ಈ ಒಪ್ಪಂದವು, ಸೌದಿ ಅರೇಬಿಯಾದ ನಾಗರಿಕ ಪರಮಾಣು ಕಾರ್ಯಕ್ರಮವನ್ನು ಅಭಿವೃದ್ಧಿಪಡಿಸಲು ಅಮೆರಿಕದ ಕಂಪನಿಗಳಿಗೆ ವೇದಿಕೆ ಒದಗಿಸುವ ಗುರಿ ಹೊಂದಿದೆ.ಈ ಒಪ್ಪಂದದ ಅಡಿಯಲ್ಲಿ ಯಾವುದೇ ಪರಮಾಣು ವಸ್ತುವಿನ "ಸಮೃದ್ಧೀಕರಣ ಇರುವುದಿಲ್ಲ ಎಂದೂ ಟ್ರಂಪ್ ಹೇಳಿದ್ದಾರೆ,



ಆದರೆ ಅಂತಿಮ ವ್ಯವಸ್ಥೆಯ ವಿವರಗಳು ಇನ್ನೂ ಸ್ಪಷ್ಟವಾಗಿಲ್ಲ. ಈ ಒಪ್ಪಂದವು ಈಗಾಗಲೇ ಪರಮಾಣು ಪ್ರಸರಣ ತಡೆ ತಜ್ಞರು ಮತ್ತು ಇಸ್ರೇಲ್ ಬೆಂಬಲಿಗರಿಂದ ಟೀಕೆಗೆ ಗುರಿಯಾಗಿದೆ. ಸೌದಿ ಅರೇಬಿಯಾದಲ್ಲಿ ಯುರೇನಿಯಂ ಸಮೃದ್ಧೀಕರಣಕ್ಕೆ ಅವಕಾಶ ನೀಡಿದರೆ, ಇದು ಅಮೆರಿಕದ ದೀರ್ಘಕಾಲದ ಸುರಕ್ಷತಾ ಮಾನದಂಡಗಳನ್ನು ದುರ್ಬಲಗೊಳಿಸಬಹುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ. ಕಡ್ಡಾಯ ಕಾಂಗ್ರೆಷನಲ್ ಪರಾಮರ್ಶೆ ಪ್ರಕ್ರಿಯೆಯ ಸಮಯದಲ್ಲಿ ಹಲವಾರು ಸಂಸದರು ಸಹ ಈ ಒಪ್ಪಂದವನ್ನು ಪರಿಶೀಲಿಸುವ ನಿರೀಕ್ಷೆಯಿದೆ.

'ಫೌಂಡೇಶನ್ ಫಾರ್ ಡಿಫೆನ್ಸ್ ಆಫ್ ಡೆಮಾಕ್ರಸೀಸ್' ಸಂಸ್ಥೆಯ ಪ್ರಸರಣ ತಡೆ ಕಾರ್ಯಕ್ರಮದ ಉಪ ನಿರ್ದೇಶಕಿ ಆಂಡ್ರಿಯಾ ಸ್ಟ್ರಿಕರ್, ಈ ಒಪ್ಪಂದವನ್ನು ತಿರಸ್ಕರಿಸುವಂತೆ ಸಂಸದರಿಗೆ ಕರೆ ನೀಡಿದ್ದಾರೆ.

"ಸೌದಿ ಅರೇಬಿಯಾದೊಂದಿಗಿನ ಕೆಟ್ಟ ಯುಎಸ್ ಪರಮಾಣು ಒಪ್ಪಂದವು ಕಾಂಗ್ರೆಸ್ ಪರಿಶೀಲನೆಗೆ ಬರುತ್ತಿದೆ," ಎಂದು ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ. "ಕಾಂಗ್ರೆಸ್ ಇದನ್ನು ತಡೆಯಬೇಕು." ಈ ಒಪ್ಪಂದವು "ಸುರಕ್ಷತಾ ಕ್ರಮಗಳನ್ನು ನೀರುಪಾಲು ಮಾಡಬಹುದು, ಇತರ ದೇಶಗಳಿಗೆ ಕೆಟ್ಟ ನಿದರ್ಶನವನ್ನು ನೀಡಬಹುದು ಮತ್ತು ಸಮೃದ್ಧೀಕರಣ ಹಾಗೂ ಮರುಸಂಸ್ಕರಣೆಯ ಹರಡುವಿಕೆಯನ್ನು ತಡೆಯುವಲ್ಲಿ ವಿಫಲವಾಗಬಹುದು" ಎಂದು ಅವರು ಎಚ್ಚರಿಸಿದ್ದಾರೆ.ಈ ಒಪ್ಪಂದವು 2009 ರ ಯುಎಸ್–ಯುಎಇ ಪರಮಾಣು ಒಪ್ಪಂದಕ್ಕಿಂತ ಭಿನ್ನವಾಗಿದೆ. ಆ ಒಪ್ಪಂದದ ಅಡಿಯಲ್ಲಿ ಯುಎಇ ಯುರೇನಿಯಂ ಸಮೃದ್ಧಗೊಳಿಸದಿರಲು ಒಪ್ಪಿಕೊಂಡಿತ್ತು ಮತ್ತು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಮೇಲ್ವಿಚಾರಣೆಯನ್ನು ಅಂಗೀಕರಿಸಿತ್ತು. ವರದಿಗಳ ಪ್ರಕಾರ, ಜಂಟಿ ಕಾರ್ಯಸಾಧ್ಯತಾ ಅಧ್ಯಯನವು ಶಿಫಾರಸು ಮಾಡಿದರೆ ಸೌದಿ ಅರೇಬಿಯಾದಲ್ಲಿ ಯುರೇನಿಯಂ ಸಮೃದ್ಧೀಕರಣ ಸೌಲಭ್ಯವನ್ನು ನಿರ್ಮಿಸಲು ಅಮೆರಿಕನ್ ಕಂಪನಿಗಳಿಗೆ ಈ ಒಪ್ಪಂದವು ಅನುಮತಿಸಬಹುದು. ಮೇಲ್ವಿಚಾರಣೆಗಳನ್ನು ಖಂಇಂ ಬದಲು ವಾಷಿಂಗ್ಟನ್ ಮತ್ತು ರಿಯಾದ್ ಜಂಟಿಯಾಗಿ ನಿರ್ವಹಿಸಲಿವೆ ಎಂದೂ ಮಾಧ್ಯಮ ವರದಿಗಳು ತಿಳಿಸಿವೆ, ಆದರೆ ಆಡಳಿತವು ಈ ವಿವರಗಳನ್ನು ಬಹಿರಂಗವಾಗಿ ದೃಢೀಕರಿಸಿಲ್ಲ.

ವರದಿಯೊಂದರಲ್ಲಿ ಈ ಒಪ್ಪಂದವನ್ನು ಸಮರ್ಥಿಸಿಕೊಂಡಿರುವ ಇಂಧನ ಕಾರ್ಯದರ್ಶಿ ಕ್ರಿಸ್ ರೈಟ್, ಇದು ಕಟ್ಟುನಿಟ್ಟಿನ ಸುರಕ್ಷತಾ ಮಾನದಂಡಗಳನ್ನು ಕಾಯ್ದುಕೊಳ್ಳುವ ಮೂಲಕ ದ್ವಿಪಕ್ಷೀಯ ಬಾಂಧವ್ಯವನ್ನು ಬಲಪಡಿಸುತ್ತದೆ ಎಂದು ಹೇಳಿದ್ದಾರೆ.

"ಈ ಒಪ್ಪಂದಗಳು ಅಮೆರಿಕ–ಸೌದಿ ವಾಣಿಜ್ಯ ಸಂಬಂಧಗಳನ್ನು ಬಲಪಡಿಸುವ, ದೇಶದಲ್ಲಿ ಸಮೃದ್ಧಿ ತರುವ ಮತ್ತು ವಿದೇಶದಲ್ಲಿರುವ ನಮ್ಮ ಮಿತ್ರರಾಷ್ಟ್ರಗಳಿಗೆ ಭದ್ರತೆ ನೀಡುವ ನಮ್ಮ ಎರಡೂ ದೇಶಗಳ ಜಂಟಿ ಬದ್ಧತೆಯನ್ನು ಬಿಂಬಿಸುತ್ತವೆ," ಎಂದು ರೈಟ್ ಹೇಳಿದ್ದಾರೆ. "ಖಾತರಿ ಇರಲಿ, ಈ ಒಪ್ಪಂದಗಳು ಪ್ರಪಂಚದ ಅತ್ಯುತ್ತಮ ಪರಮಾಣು ತಂತ್ರಜ್ಞಾನ ಮತ್ತು ವಿಜ್ಞಾನಿಗಳನ್ನು ನೆಚ್ಚಿಕೊಳ್ಳುವ ಜೊತೆಗೆ, ಪರಮಾಣು ಸುರಕ್ಷತೆ ಮತ್ತು ಪ್ರಸರಣ ತಡೆಯ ಅತ್ಯುನ್ನತ ಮಾನದಂಡಗಳನ್ನು ಎತ್ತಿಹಿಡಿಯುತ್ತವೆ."

## ಸಾಧಕಿಯ ಬೆಂಬಲಕ್ಕೆ ಸರ್ಕಾರ ನಿಲ್ಲಲಿದೆ: ಪರಮೇಶ್ವರ್

**ಬೆಂಗಳೂರು, ಜು.23:** ಮೈಸೂರು ಜಿಲ್ಲೆಯ ಕೆ.ಆರ್.ನಗರ ತಾಲೂಕಿನ ಕಂಚುಗಾರ ಕೊಪ್ಪಲು ಗ್ರಾಮದ ಕೆ.ಎಸ್.ಶಿಲ್ಪಾ ಅವರು ಗುರುವಾರ ಸ್ಕಾಟ್ಲೆಂಡ್‌ನ ಗ್ಲಾಸ್ಗೋದಲ್ಲಿ ಆರಂಭಗೊಂಡಿರುವ 2026ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತೀಯ ಪ್ಯಾರಾ ಅಥ್ಲೆಟಿಕ್ಸ್ ತಂಡವನ್ನು ಪ್ರತಿನಿಧಿಸುತ್ತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಚಾರ ಎಂದು ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಹೇಳಿದ್ದಾರೆ.ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಜವಾಬ್ದಾರಿ ಹೊಂದಿರುವ ಅವರು ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾರೆ. ಬಡತನ, ದೈಹಿಕ ಸವಾಲುಗಳನ್ನು ಮೆಟ್ಟಿನಿಂತು ನಾಡಿನ ಹೆಣ್ಣುಮಗಳೊಬ್ಬಳು ಇಂತಹ ಉನ್ನತ ಮಟ್ಟಕ್ಕೇರಿರುವುದು ಸಾಮಾನ್ಯ ಸಂಗತಿಯಲ್ಲ. ಆಕೆಯೊಂದಿಗೆ ದೂರವಾಣಿ ಮೂಲಕ ಮಾತನಾಡಿ, ರಾಜ್ಯ ಸರ್ಕಾರದಿಂದ ಅಗತ್ಯವಿರುವ ಎಲ್ಲಾ ರೀತಿಯ ನೆರವನ್ನು ನೀಡುವುದಾಗಿ ತಿಳಿಸಿದ್ದೇನೆ.

ಶಿಲ್ಪಾ ಅವರು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಉತ್ತಮ ಸಾಧನೆ ಮಾಡಲಿ ಎಂದು ಶುಭ ಹಾರೈಸುತ್ತೇನೆ. ನಾಡಿನ ಗ್ರಾಮೀಣ ಪ್ರತಿಭೆಯೊಂದು ಅಂತಾರಾಷ್ಟ್ರೀಯ ಮಟ್ಟದ ಪಂದ್ಯಾಕೂಟದಲ್ಲಿ ಪಾಲ್ಗೊಳ್ಳುವುದೇ ಒಂದು ಅನನ್ಯ ಸಾಧನೆ, ಈ ಸಾಧಕಿಯ ಬೆಂಬಲಕ್ಕೆ ನಮ್ಮ ಸರ್ಕಾರ ಸದಾ ಇರಲಿದೆ ಎಂದು ಹೇಳಿದ್ದಾರೆ.

## ರಾಜಸ್ಥಾನ್ ರಾಯಲ್ಸ್ ಶಿಲ್ಪಾಗೆ ನೀಡಿದ ಉಡುಗೊರೆ ಎಂದ ಕುಂದ್ರಾ

**ನವದೆಹಲಿ, ಜು. 23:** ಬಾಲಿವುಡ್ ನಟಿ ಶಿಲ್ಪಾ ಶೆಟ್ಟಿ ಬಗ್ಗೆ ಎಲ್ಲರಿಗೂ ತಿಳಿದೆಯಿದೆ. ಇವರು ಖ್ಯಾತ ಉದ್ಯಮಿ ರಾಜ್ ಕುಂದ್ರಾ ಅವರ ಪತ್ನಿಯೂ ಹೌದು. ಇತ್ತೀಚೆಗೆ ಶಿಲ್ಪಾ ಪತಿ ರಾಜ್ ತಾವು ಐಪಿಎಲ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವನ್ನು ಏಕೆ ಖರೀದಿಸಿದರು ಎಂಬ ಸಂಗತಿಯನ್ನು ಹಂಚಿಕೊಂಡಿದ್ದಾರೆ.

ಇತ್ತೀಚಿಗೆ ಖಾಸಗಿ ಮಾಧ್ಯಮವೊಂದಕ್ಕೆ ನೀಡಿಸ ಸಂದರ್ಶನ ಮಾತನಾಡಿದ ರಾಜ್ ಕುಂದ್ರಾ, ನಾನು 2009 ರಲ್ಲಿ ಸುಮಾರು 82 ಕೋಟಿಗೆ ರಾಜಸ್ಥಾನ್ ರಾಯಲ್ಸ್ ತಂಡವನ್ನು ಖರೀದಿಸಿದ್ದೆ. ಖರೀದಿಸಿದ್ದೆ ಎಂದರೆ ನಾವು ಖರೀದಾರರ ಗುಂಪಿನಲ್ಲಿ ನಾನೊಬ್ಬ ಪಾರ್ಟ್ನರ್ ಆಗಿದ್ದೆ ಎಂದಿದ್ದಾರೆ. ನಾನು ಈ ರಾಜಸ್ಥಾನ್ ತಂಡವನ್ನು ಖರೀದಿಸಿದ ದಿನ ಫೆ.14 ಅಂದರೆ



ಪ್ರೇಮಿಗಳ ದಿನವಾಗಿತ್ತು. ಹೀಗಾಗಿ ನಾನು ಈ ತಂಡವನ್ನು ನನ್ನ ಹೆಂಡತಿ ಶಿಲ್ಪಾಗೆ ಉಡುಗೊರೆಯಾಗಿ ನೀಡಿದ್ದೆ ಎಂದಿದ್ದಾರೆ.

ನಾನು ಈ ತಂಡದಲ್ಲಿ ಕೇವಲ ನನ್ನ ಹಣವನ್ನು ಮಾತ್ರವಲ್ಲ ಶಿಲ್ಪಾ ಇಷ್ಟು ವರ್ಷಗಳ ಕಾಲ ಗಳಿಸಿದ್ದ ಖ್ಯಾತಿಯನ್ನು ಸಹ ಹೂಡಿಕೆ ಮಾಡಿದ್ದೆ. ಆದರೆ ನನಗೆ ಆ ದಿನವೇ ತಿಳಿದಿತ್ತು, ಇದು ನನಗೆ ಖಂಡಿತ ಲಾಭವನ್ನು ತಂದುಕೊಡುತ್ತದೆ ಎನ್ನುವ ನಂಬಿಕೆ ಇತ್ತು ಎಂದಿದ್ದಾರೆ. ನಾವು ಆ ಸಮಯದಲ್ಲಿ ಸುಮಾರು 700 ಕೋಟಿಗೆ ತಂಡವನ್ನು ಖರೀದಿಸಿದೆವು. ಅದರ ಇಂದಿನ ಮೌಲ್ಯ ಸುಮಾರು 16 ಸಾವಿರ ಕೋಟಿ ದಾಟಿದೆ ಎಂದು ತಿಳಿಸಿದರು.

ನಂತರ 2013 ರಲ್ಲಿ ಐಪಿಎಲ್‌ನಲ್ಲಿ ಬೆಟ್ಟಿಂಗ್ ಹಾಗೂ ಫಿಕ್ಸಿಂಗ್ ಆರೋಪಗಳಿಗೆ ರಾಜಸ್ಥಾನ್ ತಂಡ ಗುರಿಯಾಗಿ ಎರಡು ವರ್ಷಗಳ ನಿಷೇಧವನ್ನು ಅನುಭವಿಸಿತು. ಕೆಲವೊಂದಿಷ್ಟು ಆಟಗಾರರ ಬಂಧನವಾಯಿತು. ಹಾಗೆಯೇ ನಾನು ಕೂಡ ಕ್ರಿಕೆಟ್‌ನಿಂದ ದೂರವಾಗಬೇಕಾಯಿತು ಎಂದು ರಾಜ್ ಬೇಸರ ವ್ಯಕ್ತಪಡಿಸಿದ್ದಾರೆ.

## ವಿಶ್ವಕಪ್‌ನಿಂದ ಅರ್ಜೆಂಟೀನಾ ಕಿಕ್‌ಔಟ್ ಮಾಡಿ: 23 ದಶಲಕ್ಷಕ್ಕೂ ಹೆಚ್ಚು ಫುಟ್ಬಾಲ್ ಪ್ರೇಮಿಗಳ ಸಹಿ

**ನವದೆಹಲಿ, ಜು.23:** ಇತ್ತೀಚೆಗಷ್ಟೇ ಸ್ಪೇನ್ ಗೆಲುವಿನ ಮೂಲಕ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡ ಫಿಫಾ 2026ರ ವಿಶ್ವಕಪ್ ಟೂರ್ನಿಯಲ್ಲಿ ಅರ್ಜೆಂಟೀನಾ ತಂಡ ಸತತ ಎರಡನೇ ಟ್ರೋಫಿ ಎತ್ತಿಹಿಡಿಯುವ ಅವಕಾಶವನ್ನು ಕಳೆದುಕೊಂಡಿತು. ಈ ಸೋಲಿನ ಬೆನ್ನಲ್ಲೇ ಮೈದಾನದಲ್ಲಿ ದಿಗ್ಗಜ ಲಿಯೋನೆಲ್ ಮೆಸ್ಸಿ ಕಣ್ಣೀರಿಟ್ಟರು. ಆದರೀಗ, ಫ್ಯಾನ್ಸ್ ಮಾತ್ರ ಮೆಸ್ಸಿ ಪಡೆ ವಿರುದ್ಧ ಸಾಲು ಸಾಲು ಗಂಭೀರ ಆರೋಪಗಳನ್ನು ಹೊರಿಸಿ, ಮುಂಬರುವ ವಿಶ್ವಕಪ್‌ನಿಂದ ಅರ್ಜೆಂಟೀನಾವನ್ನು ಕಿತ್ತುಬಿಸಾಡುವಂತೆ ಆಗ್ರಹಿಸಿದ್ದಾರೆ.

ಟೂರ್ನಿ ಆರಂಭದಿಂದಲೂ ಅರ್ಜೆಂಟೀನಾ ವಿರುದ್ಧ ಅಸಮಾಧಾನ ಹೊಂದಿದ್ದ ಫುಟ್ಬಾಲ್ ಪ್ರೇಮಿಗಳು, ಫಿಫಾ ಮತ್ತು ಆಯಾ ಪಂದ್ಯಗಳ ರೆಫರಿಗಳು ಅರ್ಜೆಂಟೀನಾ ಪರವಾಗಿದ್ದರು ಎಂದು ಆರೋಪಿಸಿದ್ದಾರೆ. ಈ ಬಗ್ಗೆ ಎಲ್ಲಿಯೂ ಅಷ್ಟಾಗಿ ಪಟ್ಟು ಹಿಡಿದು



ವಾದಿಸಿರಲಿಲ್ಲ. ಆದ್ರೆ, ಫೈನಲ್ ಪಂದ್ಯದ ಕೊನೆಯಲ್ಲಿ ಅರ್ಜೆಂಟೀನಾದ ಸ್ಟಾರ್ ಪರೆಡೆಸ್, ಸ್ಪ್ಯಾನಿಷ್ ಆಟಗಾರರನ್ನು ಥಳಿಸಿದ ವಿಚಾರ ಈಗ ಜೋರಾಗಿದೆ. ಪರೆಡೆಸ್ ಸ್ಪ್ಯಾನಿಷ್ ಡಿಫೆಂಡರ್ ಎರಿಕ್ ಗಾರ್ಸಿಯಾ ಅವರನ್ನು ಹೊಡೆದು ನೆಲಕ್ಕೆ ತಳ್ಳಿದ್ದನ್ನು ಅಭಿಮಾನಿಗಳು ಒಪ್ಪಲು ರೆಡಿಯಿಲ್ಲ. ಈ ಕಾರಣವನ್ನು ಮುಂದಿಟ್ಟು ಮುಂದಿನ ವಿಶ್ವಕಪ್ ಟೂರ್ನಿಗಳಿಂದ ಅರ್ಜೆಂಟೀನಾ ತಂಡವನ್ನು ಸಂಪೂರ್ಣವಾಗಿ ನಿಷೇಧಿಸುವಂತೆ ಆಗ್ರಹಗಳು ಕೇಳಿಬಂದಿವೆ. ಅಸಲಿಗೆ, ಫಿಫಾ ಮತ್ತು ರೆಫರಿಗಳು ಮೆಸ್ಸಿ ತಂಡದೊಂದಿಗೆ ಶಾಮೀಲಾಗಿದ್ದಾರೆ ಎಂಬ ಆರೋಪಗಳು ಬೂದಿ ಮುಚ್ಚಿದ ಕೆಂಡದಂತಿತ್ತು. ಆದರೀಗ, ಅದು ಇದೊಂದು ವಿವಾದಿಂದ ಜ್ವಾಲೆಯಂತೆ ಸಿಡಿದಿದ್ದು, ಆನ್‌ಲೈನ್ ಅರ್ಜಿ ಮೂಲಕ ಬರೋಬ್ಬರಿ 23 ದಶಲಕ್ಷ ಮಂದಿ ಡಿಜಿಟಲ್ ಸಹಿ ಹಾಕಿ ಅರ್ಜೆಂಟೀನಾವನ್ನು ಹೊರಗಟ್ಟುವಂತೆ ಒತ್ತಾಯಿಸಿದ್ದಾರೆ.

ಇದು ಫುಟ್ಬಾಲ್ ಇತಿಹಾಸದಲ್ಲಿ ಅತಿಹೆಚ್ಚು ಸಹಿಮಾಡಿದ ಅರ್ಜಿಗಳಲ್ಲಿ ಒಂದಾಗಿದೆ ಮತ್ತು ಗಿನ್ನಿಸ್ ವಿಶ್ವ ದಾಖಲೆಗೆ ಪ್ರವೇಶಿಸಲು ಸನ್ನಿಹಿತವಾಗಿದೆ. ಹಲವಾರು ಯುರೋಪಿಯನ್ ಮಾಧ್ಯಮಗಳ ವರದಿಗಳ ಪ್ರಕಾರ, ಅ ರ್ಜ ೆ ಂ ಟ ೀ ನಾ ವ ನ್ ್ನ ಹೊರಹಾಕಬೇಕು ಎಂಬ ಟೈಟಲ್ ಇರುವ ಅರ್ಜಿಯು 170 ದೇಶಗಳಿಂದ 23,316,108 ಸಹಿಗಳನ್ನು ಸ್ವೀಕರಿಸಿದೆ ಎಂದು ವರದಿಗಳು ಉಲ್ಲೇಖಿಸಿವೆ.

ರೆಫರಿ ಪಕ್ಷಪಾತದ ಆರೋಪಗಳ ನಡುವೆ ಅರ್ಜೆಂಟೀನಾ ವಿರುದ್ಧ ಅರ್ಜಿಯನ್ನು ಪ್ರಾರಂಭಿಸಿದ ಅಭಿಮಾನಿಗಳು, ವಿಜೇತರು ಮೊದಲೇ ನಿಗದಿ ಆಗುವುದಾದರೆ, ಉಳಿದ ತಂಡಗಳು ಟೂರ್ನಿಯಲ್ಲಿ ಆಡುವ ಅವಶ್ಯಕತೆ ಏನಿದೆ ಅರ್ಜೆಂಟೀನಾವನ್ನು ವಿಶ್ವಕಪ್‌ನಿಂದ ಹೊರಹಾಕಿ ಎಲ್ಲರಿಗೂ ನ್ಯಾಯಯುತ ಅವಕಾಶ ನೀಡಿ ಎಂದು ತಿಳಿಸಲಾಗಿದೆ.